ಕಲ್ಯಾಣ ಕಿರಣ


ಆಗಸ್ಟ್ - 2007 ಬೆಲೆ-6.00



ಧರ್ಮಪಿತ ಬಸವಣ್ಣನವರು
1134 - 1196



ಆನುದೇವಾ....ಕೃತಿ ಸರ್ಕಾರ ಮುಟ್ಟುಗೋಲು ಹಾಕಿದ್ದಕ್ಕಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ದಿ.24-7-2007ರಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಅಭಿನಂದನೆ ಹಾಗೂ ಸತ್ಕಾರ. ಮಾನ್ಯ ಸಚಿವರುಗಳಾದ ಚೆಲುವರಾಯ ಸ್ವಾಮಿ,ಬಸವರಜ ಹೊರಟ್ಟಿ ಹಾಗು ಬಂಡೆಪ್ಪ ಖಾಶಂಪೂರ ಉಪಸ್ಥಿತರಿದ್ದರು.



ಆನುದೇವಾ....ಕೃತಿ ಸರ್ಕಾರ ಮುಟುಗೋಲು ಹಾಕಿದ್ದಕ್ಕಾಗಿ ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳಿಗೆ ರಾಷ್ಟ್ರೀಯ ಬಸವ ದಳದ ವತಿಯಿಂದ ಅಭಿನಂದನೆ ಹಾಗೂ ಸತ್ಕಾರ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-37 ಬಸವ ಶಕೆ-874 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-2 ಆಗಸ್ಟ್-2007 ವಾರ್ಷಿಕ ಚಂದಾ 60/- ರೂ.

ಅಭಿನಂದನೆ



ವಿಶ್ವಗುರು ಬಸವಣ್ಣನವರ ಚರಿತ್ರೆ ಮತ್ತು ಚಾರಿತ್ರ್ಯ
ವಧೆ ಮಾಡಿರುವ ಬಂಜಗೆರೆ ಜಯಪ್ರಕಾಶರ
ಆನು ದೇವಾ ಹೊರಗಣವನು ಪುಸ್ತಕವನ್ನು
ಬಸವಾಭಿಮಾನಿಗಳ ಆಗ್ರಹಕ್ಕೆ ಸ್ಪಂದಿಸಿ ಮುಟ್ಟುಗೋಲು
ಹಾಕಿರುವ ಕರ್ನಾಟಕ ಸರ್ಕಾರಕ್ಕೆ



ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಬಿ.ಎಸ್.ಯಡೆಯೂರಪ್ಪನವರು
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ಬಸವರಾಜ ಹೊರಟ್ಟಿಯವರು
ಸನ್ಮಾನ್ಯ ಶಿಕ್ಷಣ ಮಂತ್ರಿಗಳು
ಪ್ರಾರ್ಥಮಿಕ ಮತ್ತು ಪ್ರೌಢಶಾಲೆ

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ ಅವರು
ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಗಳು

ಪ್ರೋತ್ಸಾಹಿಸಿದ , ಸಹಮತ ವ್ಯಕ್ತಪಡಿಸಿದ ಎಲ್ಲ ಶಾಸಕರಿಗೆ

ಅಭಿನಂದಿಸುವವರು
ಬಸವ ಧರ್ಮ, ಪೀಠ, ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ

ಕಿರಣ ಗನ್ನಡಿ



ವಿಶ್ವಗುರು ಬಸವಣ್ಣನವರ 812ನೆಯ ಲಿಂಗೈಕ್ಯ ಸಂಸ್ಮರಣೆ
ಕಾರ್ಯಕ್ರಮದ ವಿವರಗಳಿಗೆ ಪುಟ-11 ನೋಡಿರಿ
ಹಾಗೂ
ಬಸವ ಪಂಚಮಿಯ ಶುಭಾಶಯಗಳು
ಕೋರುವವರು: ಬೆಂಗಳೂರು ರಾಷ್ಟ್ರೀಯ ಬಸವ ದಳ,
ಯುವ ರಾಷ್ಟ್ರೀಯ ಬಸವ ದಳ
ಹಾಗೂ ಗಣಾಚಾರದಳ ವತಿಯಿಂದ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ವಚನ ಚಿಂತನ

-ಮಾತಾಜಿ

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು
ಶ್ರೀ ಗಂಧದ ಸನ್ನಿಧಿಯಲು ಪರಿಮಳವಾಗವೆ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.
ಲಿಂಗದೇವಯ್ಯಾ,
ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾದರೆ?

ಈ ಟಿ.ವಿ.ಯಲ್ಲಿ ಕೆನರಾ ಬ್ಯಾಂಕಿನ ಪ್ರಾಯೋಜಕತ್ವದಲ್ಲಿ ದಿ.22-7-2007ರಂದು ನಡೆದ ಎದೆ ತುಂಬಿ ಹಾಡುವೆನು ವಿಭಾಗದಲ್ಲಿ ಸನ್ಮಾನ್ಯ ಬಾಲ ಸುಬ್ರಹ್ಮಣ್ಯಂ ಮೇಲಿನ ವಚನವನ್ನು ಬಿಡಿಸಿದರು. ಕಡೆಯ ವಾಕ್ಯ ಉಲ್ಲೇಖಿಸಿ ಉತ್ತಮರ ಸಂಗದಿಂದ ಮಾನವರು ದೇವತೆಗಳಾಗುವರು ಅಥವಾ ಒಳ್ಳೆಯವರಾಗುವರು ಎಂದು ಹೇಳಿದರು. ನರರೆಲ್ಲ ಸುರರಾದರು ಎಂಬುದರ ಅರ್ಥ ಬೇರೆ , ಸುರರಾದರೆ ? ಎಂಬುದು ಬೇರೆ.

ಬೆಟ್ಟ, ಕಾಡುಗಳಲ್ಲಿ ಹಲವಾರು ಜಾತಿಯ ಗಿಡ ಮರಗಳು ಇರುತ್ತವೆ. ಮಧ್ಯದಲ್ಲಿ ಒಂದು ಶ್ರೀಗಂಧದ ಗಿಡವು ಇದ್ದರೆ ಅದರ ಸುವಾಸನೆ ಸುತ್ತಲೂ ಹರಡಿರುವುದಲ್ಲದೆ, ಗಾಳಿಯು ಬೀಸಿದಾಗ ಶ್ರೀಗಂಧದ ಗಿಡಕ್ಕೆ ಬಡಿದು, ಅಥವಾ ಅದರಿಂದ ತಾಡಿಸಿಕೊಂಡು ಉಳಿದ ಗಿಡಗಳು ಸಹ ಸುವಾಸನೆ ಪಡೆಯುತ್ತವೆ.

(ನಾವು ಚಿಕ್ಕವರಿದ್ದಾಗ ಹಳ್ಳಿಗೆ ರಜೆಗೆ ಹೋಗುತ್ತಿದ್ದೆವು. ಒಲೆಯಲ್ಲಿ ಕಟ್ಟಿಗೆ ಉರಿಯುವಾಗ ಶ್ರೀಗಂಧದ ಕಟ್ಟಿಗೆ ಇದ್ದರೆ ಸುವಾಸನೆ ಸುತ್ತಮುತ್ತ ಹರಡಿರುತ್ತಿತ್ತು, ಆಗ ಅಜ್ಜಿ ಮಾತನಾಡುತ್ತಿದ್ದರು. ಕಾಡುಗಿಡ ಇದ್ದು ಶ್ರೀಗಂಧದ ತಾಡನದಿಂದ ಸುವಾಸನೆ ಪಡೆದಿದ್ದರೆ ಆ ಸುವಾಸನೆ ಬಹಳ ಹೊತ್ತು ಇರದು. ನಿಜವಾದ ಶ್ರೀಗಂಧವಿದ್ದರೆ ಅಜ್ಜಿಯು ಆ ಕೊಳ್ಳಿಯನ್ನು ಆರಿಸಿ ಆ ಕಟ್ಟಿಗೆಯನ್ನು ಎತ್ತಿ ಇಟ್ಟುಕೊಳ್ಳುತ್ತಿದ್ದರು. ಗಂಧ ತೇಯಲಿಕ್ಕೆ ಬಳಸುತ್ತಿದ್ದರು.)

ಅದೇ ರೀತಿಯಲ್ಲಿ ಲಿಂಗವಂತ ಶರಣನ ಸನ್ನಿಧಿ, ಒಡನಾಟದಿಂದ ವ್ಯಕ್ತಿಗಳ ದುಶ್ಚಟ, ದುರ್ಗುಣ, ದುರ್ವೃತ್ತಿಗಳು ಅಳಿಯುತ್ತವೆ. ದುರ್ಜನರ ಸಹವಾಸ ದೂರವಾಗಿ ಸಾತ್ವಿಕರ ಒಡನಾಟ ಹಿರಿದಾಗ ಬಾಳು ದೈವೀಕರಣಗೊಳ್ಳುತ್ತದೆ.

ಸಿರಿಯಾಳ ಒಬ್ಬ ಶಿವಭಕ್ತ; ಶಿವನನ್ನೊಲಿಸಿಕೊಂಡು ಕೈಲಾಸವನ್ನು ಪಡೆಯುವುದು ಅವನ ಕುಟುಂಬದ ಧ್ಯೇಯವಾಗಿತ್ತು. ಆದರೆ ಲಿಂಗವಂತನಾದ ಶರಣನ ಧ್ಯೇಯ ಕೇವಲ ಆತ್ಮೋದ್ಧಾರವಲ್ಲ, ಕೈಲಾಸ ಪ್ರಾಪ್ತಿಯಲ್ಲ ತನ್ನ ಸುತ್ತಲಿನ ಸಮಾಜವನ್ನು ತಿದ್ದುವುದು, ದೈವೀಕರಿಸುವುದು. ಸಿರಿಯಾಳನ ಒಡನಾಡಿದವರೆಲ್ಲ ಸುರರಾದರೆ? ಇಲ್ಲ, ಆತನ ಪರಿವಾರವಷ್ಟೇ ಕೈಲಾಸವನ್ನೇರಿತು. ಆದರೆ ಶರಣನ ಒಡನಾಡುವವರು ಹುಟ್ಟು ಗುಣಗಳನ್ನು ಗೆಲಿದು ದಿವ್ಯ ಮಾನವರಾಗುವರು.

★★★★★ ★★★★★ ★★★★★ ★★★★

ಮುಟ್ಟುಗೋಲು ಅನಿವಾರ್ಯವಾಯಿತು

ಸರಕಾರ ಆನು ದೇವಾ... ಪುಸ್ತಕದ ಮೇಲೆ ಅನಿವಾರ್ಯವಾಗಿ ಮುಟ್ಟುಗೋಲು ಹಾಕಬೇಕಾಯಿತು. ಸಾಹಿತಿಗಳಲ್ಲಿ ವಿಭಿನ್ನ ಪ್ರತಿಕ್ರಿಯೆಗಳು ಬರುವುದು ಸಹಜ. ಡಾ. ಬಂಜಗೆರೆಯವರಿಗೆ ಯಾವ ಪುಸ್ತಕವನ್ನೂ ಬರೆಯುವ ಸಾಮರ್ಥ್ಯವಿದೆ. ಒಳ್ಳೆಯ ಸಾಹಿತಿಗಳೆಂದು ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ ಈ ಪುಸ್ತಕದಲ್ಲಿ ವಿಶ್ವಪ್ರಖ್ಯಾತ ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರ ಜಾತಿ ವಿಷಯ ಪ್ರಸ್ತಾಪದಿಂದ ಗೊಂದಲಕ್ಕೆ ಅವಕಾಶವಾಯಿತು.

ಸಾಹಿತ್ಯ ಸಮಾಜದಲ್ಲಿ ದರ್ಪಣ ಹೇಗಿದೆಯೋ ಹಾಗೆಯೇ, ಯಾವ ಬಣ್ಣ ಹಾಕದೆ ವಿವರಿಸಬಹುದು. ತಪ್ಪೇನೂ ಇಲ್ಲ; ಆದರೆ ಒಬ್ಬ ಗುರುವನ್ನು ಟೀಕೆ ಮಾಡಿದಾಗ ಸಮಾಜ ಸುಮ್ಮನಿರುವುದಿಲ್ಲ. ಎಲ್ಲ ಮತೀಯರ ವಿಷಯದಲ್ಲೂ ಇದು ನಿಜ. ಸಲ್ಮಾನ್ ರಷ್ದಿಯವರ ಸೆಟಾನಿಕ್ ವರ್ಸ್‌ಸ್ ಕೃತಿಯಿಂದ

ಇಡೀ ಮುಸ್ಲಿಂ ಜಗತ್ತೇ ತತ್ತರಿಸಿ ಹೋಯಿತು. ವ್ಯಾಪಕ ಪ್ರತಿಭಟನೆ, ಹಿಂಸಾಚಾರವೂ ಆಯಿತು. ಹಾಗೆಯೇ ಪ್ರವಾದಿಗಳ ವ್ಯಂಗ್ಯಚಿತ್ರ ಡೆನ್ಮಾರ್ಕ್‌ನಲ್ಲಿ ಬರೆದಾಗ, ಪ್ರಪಂಚದ ಎಲ್ಲ ಮುಸ್ಲಿಂ ರಾಷ್ಟ್ರಗಳಲ್ಲೂ, ಭಾರತದಲ್ಲೂ ಅಶಾಂತಿ ಮೂಡಿತು. ಸುಪ್ರಸಿದ್ಧ ಕಲೆಗಾರ ಎಂ.ಎಫ್.ಹುಸೇನ್ ಹಿಂದೂ ದೇವತೆ ಸರಸ್ವತಿಯ ನಗ್ನ ಚಿತ್ರ ಬರೆದಾಗ ಕೇವಲ ಕೆಲವೇ ಹಿಂದೂ ಗುಂಪುಗಳು ವಿರೋಧ ಪ್ರಕಟಿಸಿ ನ್ಯಾಯಾಲಯದ ಮೊರೆ ಹೋಗಿದ್ದವು. ಸಾಮಾನ್ಯವಾಗಿ ಮುಸಲ್ಮಾನರು ವಿರೋಧ ವ್ಯಕ್ತಪಡಿಸಲಿಲ್ಲ.

ಒಟ್ಟಿನಲ್ಲಿ ಸಾಹಿತಿಗಳು, ಕಲೆಗಾರರು ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವದಿಂದ ಕಾಪಾಡಿಕೊಳ್ಳಬೇಕು. ಸಮಾಜದ ಸ್ವಾಸ್ಥ್ಯ ಕದಡುವಂತಹ ಜನರ ಮನಸ್ಸು ಕಲಂಕುವಂತಹ, ಅದರಲ್ಲೂ ಮುಖ್ಯವಾಗಿ ಧಾರ್ಮಿಕ ಗುರುಗಳನ್ನು ಪ್ರವಾದಿಗಳನ್ನು ಹೀನಾಯವಾಗಿ ಕಾಣುವ ಯಾವ ಪದವೂ ಕೃತಿಯಲ್ಲಿ ಬರಬಾರದು. ಸಾಹಿತ್ಯ, ಕವಿತೆ ಸಮಾಜದಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಿ, ಎಲ್ಲರನ್ನೂ ಒಂದುಗೂಡಿಸಲು ಪೂರಕವಾಗಿರಬೇಕು. ಬಸವಣ್ಣನವರು ಈ ಜವಾಬ್ದಾರಿಯನ್ನು ವಹಿಸಿ ಅಮೂಲ್ಯ ಕೊಡುಗೆಯನ್ನು ಕೊಟ್ಟಿದ್ದಾರೆ. ಬಸವಣ್ಣನವರನ್ನು ನಾನು ಗೌರವಿಸುತ್ತೇನೆ. ಇಸ್ಲಾಂ ಧರ್ಮದಿಂದ, ಪ್ರವಾದಿ ಮಹಮ್ಮದ್‌ರ ಹಿತವಚನಗಳಿಂದ ಕಲಿತ ಒಂದು ಪಾಠ, ಪ್ರವಾದಿ ವಿರುದ್ಧ ಒಂದು ಪದವನ್ನು ಸಹಿಸುವುದಿಲ್ಲ ಮುಸಲ್ಮಾನರು. ಆದರೆ ಹಿಂದೂ ಬಂಧುಗಳೂ ಅವರ ಧಾರ್ಮಿಕ ನಾಯಕರ ಅವಹೇಳನವಾದರೆ ಒಟ್ಟಾಗಿ ಖಂಡಿಸುವುದಿಲ್ಲ. ಇಲ್ಲೂ ಪಂಗಡಗಳು, ಆಶ್ಚರ್ಯ ಮತ್ತು ದುಃಖವಾಗುವುದು. ಡಾ|| ಬಂಜಗೆರೆಯವರಲ್ಲಿ ಒಂದು ವಿನಂತಿ. ನೀವೇ ಖುದ್ದಾಗಿ ಮುಂದೆ ಬಂದು ನಿಮ್ಮ ಕೃತಿಗೆ ಸರಕಾರ ಮುಟ್ಟುಗೋಲು ಹಾಕಿರುವುದನ್ನು ವಿರೋಧ ಮಾಡಬೇಡಿ. ನ್ಯಾಯಾಲಯಕ್ಕೆ ಮೊರೆ ಹೋಗಬೇಡಿ. (ವಿಜಯ ಕರ್ನಾಟಕ, 25-7-2007)

-ಪ್ರೊ.ಡಾ.ಮುಮ್ತಾಜ್ ಅಲಿ ಖಾನ್, ಬೆಂ

★★★★★★★★★★★

ವ್ಯತಿರಿಕ್ತ ಕ್ರಮ

ಆನು ದೇವಾ... ಕೃತಿಯ ಮುಟ್ಟುಗೋಲು. ಹಾವು ಕಚ್ಚಿ ಹೋದ ನಂತರ ಜಾಗವನ್ನು ಬಡಿದು ಹೆಮ್ಮೆ ಪಡುವ ಹಮ್ಮೀರತನವಾಗಿದೆ!

ಬಂಜಗೆರೆಯವರ ದಿಟ್ಟತನ, ಕೃತಿ ಬರೆದಿದ್ದಕ್ಕಿಂತಲೂ ಹೆಚ್ಚಾಗಿ ಅಧಿಕೃತ ಮುಟ್ಟುಗೋಲಿಗೂ ಮುಂಚೆಯೇ ಅದನ್ನು ವಾಪಸ್ ಪಡೆದಿದ್ದರಲ್ಲಿದೆ! ಬಸವಣ್ಣನ ಬ್ರಾಹ್ಮಣ/ ಮಾದಿಗ/ ಕುರುಬ ಜಾತಿಯ ಅಕಡೆಮಿಕ್ ಸತ್ಯಕ್ಕಿಂತ ಪ್ರಸುತ್ತ ರಾಜಕೀಯ -ಸಾಮಾಜಿಕ ಕ್ಷುದ್ರತನದ ಸಜೀವ ಸತ್ಯವನ್ನು ತೆರೆದು ತೋರಿಸಿದೆ. ಮುಟ್ಟುಗೋಲು ಅದನ್ನು ಇನ್ನಷ್ಟು ಪ್ರಜ್ವಲಗೊಳಿಸಿದೆ.

ಜಾತಿ ಮೀರಿದ ಬಸವಣ್ಣನಂತಹ ಶ್ರೇಷ್ಠ ಪುರುಷನೊಬ್ಬನನ್ನು ಲೇಖಕನೊಬ್ಬ, ಮಾದಿಗ ಜಾತಿಯಲ್ಲಿ ಪರಿಭಾವಿಸಿದರೆ ಅದರಲ್ಲಿ ಬಸವಣ್ಣನಿಗಾಗಲೀ ಅವರನ್ನು ಅನುಭವಿಸಿ ಅನುಸರಿಸಬಲ್ಲ ಭಕ್ತರಿಗಾಗಲೀ ಅವಹೇಳನವಾಗುವುದು ಏನೂ ಇಲ್ಲ. ಮನುಷ್ಯನಾಗಿ, ವಿಶ್ವಮಾನವನಾಗಿ ಬದುಕಿದ ಮತ್ತು ಬದುಕಲು ಹೇಳಿದ ಬಸವಣ್ಣನಿಗೆ ಬ್ರಾಹ್ಮಣ ಜಾತಿ ಆರೋಪಿಸುವದೂ ಅಷ್ಟೇ ಅಪಚಾರವಾಗುತ್ತದೆ. ಬ್ರಾಹ್ಮಣನಿಗಿಂತ ಕುರುಬ ಕೀಳು; ಮಾದಿಗ ಇನ್ನೂ ಕೀಳು. ಅದು ಕೆಳಗಿನ ಜಾತಿ ಸೂತಕವೆಂದು ಅಸಹ್ಯಪಟ್ಟುಕೊಳ್ಳುವುದು ಬಸವ ತತ್ವಕ್ಕಿರಲಿ. ಸಂವಿಧಾನದ ಆಶಯಕ್ಕೂ ವ್ಯತಿರಿಕ್ತವಾಗುತ್ತದೆ.

ಇದನ್ನು ಅನುಭವಿಸಿಕೊಳ್ಳುವುದಕ್ಕಾದರೆ ಬೌದ್ಧಿಕತೆಯ ಎತ್ತರ ಮತ್ತು ಭಾವುಕತೆಯ ಆಳ ಬೇಕಾಗುತ್ತದೆ. ಜಾತಿ ರಾಜಕೀಯ ಸಂಘಟನೆಗಾದರೋ ಲಿಂಗಾಯತ, ಒಕ್ಕಲಿಗ, ಅಲ್ಪ ಸಂಖ್ಯಾತ ಇತ್ಯಾದಿ ಹೆಸರು ಮಾತ್ರವೇ ಬೇಕಾದಷ್ಟಾಗುತ್ತದೆ. (ಪ್ರಜಾವಾಣಿ 25-7-2007)

- ಆರ್.ಕೆ.ದಿವಾಕರ್,ಬೆಂಗಳೂರು

.........ಸಂಪಾದಕೀಯ:

1. ಬಂಜಗೆರೆ ಪುಸ್ತಕ ಮುಟ್ಟುಗೋಲು

ಆನು ದೇವಾ ಹೊರಗಣವನು ಎಂಬ ಪುಸ್ತಕವನ್ನು ಬಂಜಗೆರೆ ಜಯಪ್ರಕಾಶ್ ಬರೆದು, ಪ್ರಕಟಿಸಿದ್ದು ಇದನ್ನು ಮುಟ್ಟುಗೋಲು ಹಾಕಲು ಆಗ್ರಹಿಸಿ ಏಪ್ರಿಲ್ 14ರಂದು ಆರಂಭಿಸಿದ ಚಳುವಳಿ ದಿ.23-7-2007ರಂದು ಕರ್ನಾಟಕ ಸರ್ಕಾರ ಪುಸ್ತಕವನ್ನು ಮುಟ್ಟುಗೋಲು ಹಾಕುವ ಮೂಲಕ ಪೂರ್ಣ ವಿರಾಮ ಕಂಡಿತು. ನಾಡಿನಾದ್ಯಂತ ಪ್ರತಿಭಟನೆ, ಧರಣಿ ಸತ್ಯಾಗ್ರಹ, ರಸ್ತೆ ತಡೆ,ಬಂದ್ ನಡೆದವು. ಒಂದು ವೇಳೆ ಸರ್ಕಾರವು ದಿ 23ರಂದು ಮುಟ್ಟುಗೋಲು ಆಜ್ಞೆ ಹೊರಡಿಸದೆ ಇದ್ದರೆ ದಿ.25ರಂದು ಬೃಹತ್ ರ್‍ಯಾಲಿ ಮತ್ತು ಪ್ರತಿಭಟನಾ ಮೆರವಣಿಗೆ ನಡೆದು, ವಿಧಾನ ಸೌಧದ ಮುಂದೆ ಧರಣಿ ಕೂರಲು ಸರ್ವ ಸಿದ್ಧತೆ ನಡೆದಿದ್ದವು. ಅಲ್ಲಿಂದ ಮುಂದೆ ಆಮರಣ ಉಪವಾಸ ಸತ್ಯಾಗ್ರಹ, ಅನೇಕ ಊರುಗಳಲ್ಲಿ ಅನಿರ್ದಿಷ್ಟಾವಧಿಯ ರಾಸ್ತಾರೋಕೋ ಯೋಜಿತವಾಗುತ್ತಿದ್ದವು. ವಿಳಂಬವಾದರೂ ಚಿಂತೆಯಿಲ್ಲ ಸರ್ಕಾರವು ಸಚಿವ ಸಂಪುಟದ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡು ಘೋಷಿಸಿತು. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇವೆ.

ಈ ಬಗ್ಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ಮೂಡುವುದು ಸಹಜ; ಅಂತಹ ಎರಡೂ ಮಾದರಿ ಪತ್ರಗಳನ್ನು ಪ್ರಕಟಿಸಲಾಗಿದೆ.(ಪುಟ 3-4) ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗಿದೆ ಎಂದು ಕೆಲವರ ಬೊಬ್ಬೆ, ಒಬ್ಬ ವ್ಯಕ್ತಿ ಭಾರತದ ಯಾವುದೇ ರಸ್ತೆಗಳಲ್ಲಿ ನಡೆಯಲು ಸ್ವತಂತ್ರನಾಗಿದ್ದಾನೆ ಎಂದರೆ ಎಲ್ಲರನ್ನು ಒದೆದುಕೊಂಡು ಓಡಾಡಲು ಬರುವುದಿಲ್ಲ. ಅದಕ್ಕೊಂದು ಎಲ್ಲೆ ಇರುತ್ತದೆ ಅದೇ ಶಿಷ್ಟಾಚಾರ. ಸಾಹಿತಿಗಳು, ಸಂಶೋಧಕರು ಎಂದ ಮಾತ್ರಕ್ಕೆ ಸರ್ವತಂತ್ರ ಸ್ವತಂತ್ರರಲ್ಲ. ಅದರಲ್ಲಿಯೂ ಪ್ರವಾದಿಗಳು, ದಾರ್ಶನಿಕರು, ಅನುಭಾವಿಗಳ ಬಗ್ಗೆ ಬರೆಯುವಾಗ ತೀರಾ ಎಚ್ಚರಿಕೆ ಅತ್ಯಗತ್ಯ. ಇಂಚುಪಟ್ಟಿ ತಗೊಂಡು ಹಿಮಾಲಯವನ್ನು ಅಳೆಯಲು ಹೋಗುವವನಂತೆ ಬಂಜಗೆರೆ, ಬರಗೂರು, ಚಂಪಾರಂಥವರು ಶ್ರೇಷ್ಠ ಅನುಭಾವಿಗಳಾದ ಬಸವಣ್ಣ, ಅಕ್ಕಮಹಾದೇವಿಯಂಥವರ ಬಗ್ಗೆ ಬರೆಯಲು ಸಾಧ್ಯವೆ? ಸಮರ್ಥರೆ? ಅಧ್ಯಾತ್ಮಿಕ ಜೀವನದ ಗಂಧ ಗಾಳಿಯೂ ತೀಡದ ಬರಗೂರು ರಾಮಚಂದ್ರಪ್ಪ (ಗಿರಿಯ ನವಿಲು ಬರೆದ ದಿ|| ಬಸವರಾಜ ಕಟ್ಟೀಮನಿ) ಅಕ್ಕಮಹಾದೇವಿಯ ಅನಾಥ ಪ್ರಜ್ಞೆ ಎಂಬ ವಿಚಿತ್ರ ಲೇಖನ ಬರೆದಿದ್ದರು. ಕಂಪ್ಯೂಟರ್ ಫೈಲ್ ತೆರೆಯಲು ಪಾಸ್‌ವರ್ಡ್ ಹೇಗೆ ಬೇಕೋ ಹಾಗೆ ವಿಜ್ಞಾನವನ್ನು ವಿಶ್ಲೇಷಿಸಲು ವಿಜ್ಞಾನ, ಕಲಾಕೃತಿಯನ್ನು ವಿಶ್ಲೇಷಿಸಲು ಕಲಾಪ್ರಜ್ಞೆ, ದಾರ್ಶನಿಕರನ್ನು ಅರ್ಥೈಸಲು ಅಧ್ಯಾತ್ಮಜ್ಞಾನ ಅತ್ಯಗತ್ಯ. ದಾರ್ಶನಿಕ ದೇವಗಂಗೆ ಅಕ್ಕಮಹಾದೇವಿಯ ದೈವೀ ಹಂಬಲವೆಂಬ ಅಮೃತದಲ್ಲಿ ಅನಾಥ ಪ್ರಜ್ಞೆಯ, ಲೈಂಗಿಕ ಅತೃಪ್ತಿಯ ವಿಷವನ್ನು ಅರಸಲು ಅದರಲ್ಲಿ ಬರಗೂರರು ಪ್ರಯತ್ನಿಸಿದ್ದರು. ವೈದ್ಯಕೀಯ ಕ್ಷೇತ್ರದಲ್ಲಿ ಮೂಳೆ ತಜ್ಞರು ಮೂಳೆಗೆ ಸಂಬಂಧಪಟ್ಟ, ನರರೋಗ ತಜ್ಞರು ನರಗಳ ಚಿಕಿತ್ಸೆ ಹೀಗೆ ಮಾತ್ರ ಮಾಡುವರು ಹೇಗೋ ಹಾಗೆ ಸಾಹಿತಿಗಳು ತಾವೇ ಸರ್ವಜ್ಞಾನಿಗಳೆಂಬ ಹಮ್ಮಿನಿಂದ ತಮ್ಮ ಸೀಮೆಗೆ ಹೊರತಾದ ಜಗತ್ತಿನ, ವ್ಯಕ್ತಿಗಳ ಬಗ್ಗೆ ಬರೆಯಲು ಕನಿಷ್ಠಪಕ್ಷ ಅವಹೇಳನ ಮಾಡಲು ಹೋಗಬಾರದು. ಅದಕ್ಕಾಗಿಯೇ ಇಸ್ಲಾಂ ಮತ್ತು ಸಿಖ್ ಧರ್ಮದಲ್ಲಿ ಅವರ ಪ್ರವಾದಿಗಳು ಸಂತರನ್ನು ಹೀಯಾಳಿಸಲು ಅನುಯಾಯಿಗಳು ಅವಕಾಶ ಕೊಡುವುದಿಲ್ಲ.

ಅದೇ ರೀತಿ ವಚನೋಕ್ತ ಲಿಂಗಾಯತ ಧರ್ಮದಲ್ಲಿ ಗುರು ಲಿಂಗ ಜಂಗಮದ ನಿಂದೆಯನು ಕೇಳಬಾರದು ಎಂದಿದೆ. ಗುರು-ಬಸವಣ್ಣನವರು, ಲಿಂಗ-ಸೃಷ್ಟಿಕರ್ತ ಲಿಂಗದೇವ ಮತ್ತು ಲಿಂಗದೇವನ ಸಾಕಾರ ಕುರುಹಾದ ಇಷ್ಟಲಿಂಗ, ಜಂಗಮ -ಶರಣ ಸಮೂಹ, ಮಹಾತ್ಮರು, ತನ್ನ ಸಮಾಜ ; ಇವುಗಳಿಗೆ ಅಪಚಾರ, ಅನ್ಯಾಯವಾದರೆ, ನಿಂದೆಯಾದರೆ ಸಹಿಸಿಕೊಳ್ಳಬಾರದು ಅದೇ ಗಣಾಚಾರ.

1. ತಕ್ಷಣ ಅದನ್ನು ಪ್ರತಿಭಟಿಸಬೇಕು.
2. ಸಾಧ್ಯವಾದರೆ ನಿಂದಕನನ್ನು ಶಿಕ್ಷಿಸಬೇಕು.
3. ಸಾಧ್ಯವಾಗದಿದ್ದರೆ ಆ ಸ್ಥಳವನ್ನು ಬಿಡಬೇಕು.
4. ಗುರು -ಲಿಂಗ-ಜಂಗಮ ನಿಂದೆ ತಾಳಲಾರದೆ ಪ್ರಾಣವನ್ನಾದರೂ ಬಿಡಬೇಕು.

ಯಾರು ಇತಿಹಾಸದಲ್ಲಿ ನಮಗಾಗಿ ಬಾಳಿ, ಬದುಕಿ, ಸಂದೇಶವನ್ನು ಕೊಟ್ಟು ಹೋಗಿರುತ್ತಾರೋ ಅಂಥ ಧರ್ಮಕರ್ತರ, ಪ್ರವಾದಿಗಳ, ಶರಣರ ನಿಂದೆಯನ್ನು ಸಹಿಸಿಕೊಳ್ಳಬಾರದು.

ಸಾಹಿತಿಗಳು ಅಂದ ಮಾತ್ರಕ್ಕೆ ಅವರೇ ಸತ್ಯದ ಗುತ್ತಿಗೆ ಹಿಡಿದವರಲ್ಲ ಧರ್ಮದ ಸೋಂಕು ಇರದ ಕೆಲವು ಬಾಟ್ಲಿ ಬಾಯ್‌ಗಳು ಬರೆಯುವ ಸಾಹಿತ್ಯದಿಂದ ಲೋಕಕ್ಕೆ ಉಪಕಾರವಾಗದು. ಜೇನು ಗೂಡು ಕಟ್ಟುತ್ತದೆ ಅಮೂಲ್ಯವಾದ ಜೇನುತುಪ್ಪ ಸಿಗುತ್ತದೆ. ಕಡು ಜೇರಿಗೆ ಜೇನುಗೂಡನ್ನೇ ಹೋಲುವ ಗೂಡು ಕಟ್ಟುತ್ತೆ. ಬರೀ ಕಚ್ಚುವ ಹುಳುಗಳನ್ನು ಉತ್ಪತ್ತಿ ಮಾಡುತ್ತದೆ. ರೇಷ್ಮೆ ಹುಳ ಗೂಡು ಕಟ್ಟುತ್ತದೆ. ಬೆಲೆಬಾಳುವ ರೇಷ್ಮೆ ಕೊಡುತ್ತದೆ. ಜೇಡ ಬಲೆಯನ್ನು ನೇಯುತ್ತದೆ; ಕಸವು ನಿರ್ಮಾಣವಾಗುತ್ತದೆ. ಕಡು ಜೇರಿಗೆ ಗೂಡಿನಂತಹ, ಜೇಡರ ಬಲೆಯಂತಹ ಕಸ ಬಂಜಗೆರೆಯ ಪುಸ್ತಕ. ಅದನ್ನು ದೀರ್ಘ ಹೋರಾಟದ ನಂತರ ಸರ್ಕಾರವು ಕಿತ್ತು ಹಾಕಿದೆ. ಅದಕ್ಕಾಗಿ ಅಭಿನಂದನೆ, ಧನ್ಯವಾದ.

ಇತಿಹಾಸದಲ್ಲಿ ಯಾವುದೂ ಸಂಶಯ, ಗೊಂದಲ ಇಲ್ಲದಿದ್ದ ಸಂದರ್ಭದಲ್ಲಿ ವಿಶ್ವಗುರು ಬಸವಣ್ಣನವರ ಜಾತಿ ಮೂಲ ಮತ್ತು ಜನ್ಮ ವೃತ್ತಾಂತದ ಬಗ್ಗೆ ಅವರ ತಾಯಿ ತಂದೆಗಳ ಬಗ್ಗೆ ಅಸಭ್ಯವಾಗಿ ಬರೆದು ಬಸವಣ್ಣನವರು ದಲಿತ ಮೂಲದಿಂದ ಹುಟ್ಟಿದವರು ಎಂದು ಅಪಾರ ದಲಿತ ಪ್ರೇಮವನ್ನು ಕೃತಕವಾಗಿ ಹುಟ್ಟುಹಾಕುವ ಕೆಲಸ ಬಂಜಗೆರೆಗೆ ಏಕೆ ಬೇಕಿತ್ತು? ತಾವು ಯಾದವ (ಗೊಲ್ಲ)ರಿದ್ದು ಲಿಂಗಾಯತರು ಮತ್ತು ದಲಿತರ ಮಧ್ಯೆ ಸಂಘರ್ಷವನ್ನು ಹುಟ್ಟುಹಾಕುವ ಶಕುನಿ ತಂತ್ರ ಬಂಜಗೆರೆಗೆ ಏನು ಅಗತ್ಯವಿತ್ತು ? ಅಧ್ಯಾತ್ಮ ಜೀವಿಗಳಾದವರು ಮತ್ತು ಪ್ರಗತಿಪರ ಚಿಂತಕರಾದ ಜಾತಿ ಜನಾಂಗ ವರ್ಗಗಳವರೆಲ್ಲ ಇಂದು ಬಸವಣ್ಣನವರ ಬಗ್ಗೆ ಗೌರವ ಭಾವನೆ ಹೊಂದಿರುವುದರ ಜೊತೆಗೆ ಅಪಾರ ಅಕ್ಕರೆ, ಆತ್ಮೀಯತೆ ಹೊಂದಿದ್ದಾರೆ. ಇದರಲ್ಲಿ ಏನೂ ಸಂದೇಹವಿಲ್ಲ. ನಮ್ಮ ನೆರೆಮನೆಯ ಆತ್ಮೀಯ ಸಹೋದರ, ಹಿತಚಿಂತಕ ಅಣ್ಣ ಎಂದು ಎಲ್ಲ ಜಾತಿಯವರು ಮುಖ್ಯವಾಗಿ ದಲಿತರು ಭಾವಿಸಿದ್ದಾರೆ. ಆದರೆ ಲಿಂಗಾಯತರು 860 ವರ್ಷಗಳಿಂದ ಗುರು ಬಸವಣ್ಣನವರನ್ನು "ಅಪ್ಪ" ಎಂದು, ಬಸವ ಲಿಂಗ ಎಂದು ಆರಾಧಿಸುತ್ತ ಬಂದಿದ್ದಾರೆ. ದಲಿತ ಸಂಘರ್ಷ ಸಮಿತಿಯನ್ನು ಆರಂಭಿಸಿದ ದಿ|| ಕೃಷ್ಣಪ್ಪನವರಂಥ ವಿಚಾರ ಶೀಲರು ಬುದ್ಧ, ಬಸವ, ಅಂಬೇಡ್ಕರ್ ಚಿತ್ರಗಳನ್ನು ಎದುರಿಗೆ ಇಟ್ಟುಕೊಂಡೇ ಕಾರ್ಯ ಮಾಡುತ್ತಿದ್ದಾರೆ. ಆದರೆ ಬಹುಪಾಲು ಧಲಿತರಿಗೆ ಡಾ|| ಅಂಬೇಡ್ಕರ್ ಪ್ರಿಯವಾದಷ್ಟು ಇವರಿಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟ ಗುರು ಬಸವಣ್ಣ ಪ್ರಿಯರಾದರೆ? ದೇಶದ ತುಂಬೆಲ್ಲ ಡಾ|| ಅಂಬೇಡ್ಕರ್ ಹೆಸರು 14 ವಿಶ್ವವಿದ್ಯಾಲಯಗಳಿಗಿದ್ದು ಗುಲಬರ್ಗಾ ವಿ.ವಿಗೆ ಗುರು ಬಸವಣ್ಣನವರ ಹೆಸರಿಡುವ ಚಳುವಳಿಯನ್ನು ವಿರೋಧಿಸಿ ದಲಿತರು ಅಂಬೇಡ್ಕರ್ ಹೆಸರಿಡಲು ಒತ್ತಾಯಿಸಿದ್ದೇಕೆ? ಜಾತಿವಾದ ಪರಾಕಾಷ್ಠೆ ತಲ್ಪಿರುವ ಈ ದೇಶದಲ್ಲಿ ಅವರವರ ಮಹಾತ್ಮರನ್ನು ರಕ್ಷಿಸಿಕೊಳ್ಳುವುದು ಆಯಾ ಜನಾಂಗದ ಆದ್ಯ ಕರ್ತವ್ಯ.

ಬುದ್ಧಿಜೀವಿಗಳು, ಪ್ರಗತಿಪರ ಸಾಹಿತಿಗಳು ಎಂದು ತಮ್ಮ ಬಗ್ಗೆ ತಾವೇ ಮೇಲರಿಮೆ (Superiority Complex) ಬೆಳೆಸಿಕೊಂಡು, ಶ್ರೇಷ್ಠ ಚಿಂತಕರೆಂಬ ಭ್ರಾಂತಿಯ ಪಟ್ಟವೇರಿದ ಕೆಲವು ಸಾಹಿತಿಗಳು ಸಮಾಜದಲ್ಲಿ ಬೆರೆಯುವವರಲ್ಲ, ಸಮಾಜ - ರಾಷ್ಟ್ರ ಕಟ್ಟುವವರೂ ಅಲ್ಲ. ರಾಷ್ಟ್ರ, ಸಮಾಜ, ಜನ ಸಮೂಹ ಕುರಿತು ಭಾವನಾತ್ಮಕ ಬೆಸುಗೆಯೇ ಇಲ್ಲ; ಸ್ವಕೇಂದ್ರೀಕೃತ ಭಾವಶೂನ್ಯರು. ಇಂಥ ಸಾಹಿತಿಗಳ ಮಾತಿಗೆ ಸಮಾಜ ಸೊಪ್ಪು ಹಾಕುವುದು ಅಗತ್ಯವಿಲ್ಲ. ಆದ್ದರಿಂದ ಇನ್ನು ಮುಂದೆ ಸಮಾಜವು ಜಾಗೃತ ಸ್ಥಿತಿಯಲ್ಲಿ ಇರಬೇಕು. ಕೆಲವು ವಿಚಾ(ಕಾ)ರವಾದಿ ಸಾಹಿತಿಗಳ ಮಾತಿಗೆ ಸೊಪ್ಪು ಹಾಕದೆ ಧೈರ್ಯವಾಗಿ ಕೆಟ್ಟ ಕೃತಿಗಳನ್ನು ವಿರೋಧಿಸಬೇಕು.

2. ಮುರುಘಾ ಮಠ - ಪೀಠ ತ್ಯಾಗಕ್ಕೆ ಕರೆ

ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರಿಗೆ ಮತ್ತೊಮ್ಮೆ ಪೀಠ ತ್ಯಾಗದ ಕರೆ ನೀಡುವ ಸನ್ನಿವೇಶ ಒದಗಿದೆ. ಹಿಂದೊಮ್ಮೆ ಇಷ್ಟಲಿಂಗ ಧಾರಿಯಾದ ಬಳಿಕವೂ ವ್ಯಕ್ತಿಯು ಮಾಂಸಾಹಾರ ಮುಂದುವರಿಸಬಹುದು. ಆಹಾರವು ವೈಯಕ್ತಿಕ ಆಯ್ಕೆ ಎಂದು ಶ್ರೀ ಶಿವಮೂರ್ತಿ ಸ್ವಾಮಿಯವರು ಹೇಳಿ ಸಮಾಜದಲ್ಲಿ ಗೊಂದಲ ಹುಟ್ಟಿಸಿದ್ದರು. ಈಗ ಬಂಜಗೆರೆ (ಬಂಜಗೆರೆ ಎಂಬ ಹಳ್ಳಿ ಚಳ್ಳಕೆರೆ ತಾಲ್ಲೋಕಿನಲ್ಲಿದೆ.) ಎಂಬ ಕುಗ್ರಾಮ ಬಂಡಗೆರೆ ಆಗಿ ಕುಖ್ಯಾತವಾದುದಕ್ಕೆ ಆ ಊರಿನ ಜನರು (ಬಹಳಷ್ಟು ಪುಸ್ತಕ ಮಾರಾಟವಾದವು, ಹಣ ಬಂದಿತು ಎಂದು ಜಯಪ್ರಕಾಶ್ ಸಂತೋಷ ಪಡುತ್ತಿರುವಂತೆ) ಸಂತೋಷ ಪಡುತ್ತಿರುವರೋ ಅಥವಾ ನಾಚಿಕೆಯಿಂದ ಕುಗ್ಗಿ ಹೋಗಿರುವರೋ ತಿಳಿಯದು. ಜಯಪ್ರಕಾಶರ ಪುಸ್ತಕ "ಆನು ದೇವಾ"ವನ್ನು ಬೆಂಬಲಿಸಿ ಅವರ ಪೀಠ ತ್ಯಾಗಕ್ಕೆ ಮತ್ತೊಮ್ಮೆ ಕರೆ ಕೊಡುವಂತೆ ಶ್ರೀ ಶಿವಮೂರ್ತಿ

ಸ್ವಾಮಿಯವರು ಪ್ರೇರಣೆ ನೀಡುತ್ತಿದ್ದಾರೆ.

ಧರ್ಮಪಿತ ಬಸವಣ್ಣನವರ ಒಂದು ವಚನ,

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ,
ಅವರ ಲಿಂಗವೆಂಬೆ, ಸಂಗನೆಂಬೆ,
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆ!

ಈ ವಚನವನ್ನು ಉಲ್ಲೇಖಿಸಿಯೇ ಶ್ರೀ ಶಿವಮೂರ್ತಿಯವರು "ನೋಡಿ ಸ್ವತಃ ಬಸವಣ್ಣನವರು ಹೇಳಿದ್ದಾರೆ. ಕೊರಳಲ್ಲಿ ಲಿಂಗವಿರಲಿ ಸಾಕು. ಅವನು ಕೊಲ್ಲುವವನಾಗಿರಬಹುದು, ಮೆಲ್ಲುವವನಾಗಿರಬಹುದು, ಮದ್ಯಪಾನಿಯಾಗಿರಬಹುದು." ಇದನ್ನು ಬಂಜಗೆರೆಯೂ ಪ್ರಸ್ತಾಪ ಮಾಡಿದ್ದಾರೆ. ಆಗ ನಮಗೂ ಆನುದೇವಾ ಪುಸ್ತಕದ ಹಿಂದಿನ ಕಾಣದ ಕೈಗಳಲ್ಲಿ ಶ್ರೀ ಶಿವಮೂರ್ತಿ ಮುರುಘಾ ಸ್ವಾಮಿಗಳೂ ಇರಬಹುದೆ? ಎಂಬ ಸಂದೇಹ ಉಂಟಾಗಿತ್ತು. ಅದು ಗೌರಿ ಲಂಕೇಶ್ ಸಂಪಾದಕತ್ವದ "ಲಂಕೇಶ್" ಪತ್ರಿಕೆಯಿಂದ ಈಗ ದೃಢವಾಯಿತು.

ಪ್ರತಿ ಮಠಕ್ಕೂ ತನ್ನದೇ ಆದ ಒಂದು ಸಂಪ್ರದಾಯವಿರುತ್ತದೆ. ಆ ಮಠದ ಸಂಸ್ಥಾಪಕರು ನಿಯಮಾವಳಿಗಳನ್ನು ರೂಪಿಸಿರುತ್ತಾರೆ. ಅವುಗಳನ್ನು ಬಿಟ್ಟು ನಡೆಯುವುದು ಸೂಕ್ತವಲ್ಲ; ಬನ್ನಿ ಗಿಡ, ಚೌಡಿ ಪೂಜೆ ಬಿಡಿಸಿದರು-ಇದು ಸಂಪ್ರದಾಯ ಉಲ್ಲಂಘನೆಯಲ್ಲ. ಏಕೆಂದರೆ ಮುರುಘಾ ಮಠ ಮೂಲತಃ ಬಸವ ಪರಂಪರೆಯ ಮಠ. ನಂತರದವರು ಯಾರೋ ಬನ್ನಿ ಗಿಡ, ಚೌಡೇಶ್ವರಿ ಪೂಜೆ, ಪಂಚಾಂಗ ವೀಕ್ಷಣೆ, ಗದ್ದುಗೆಯ ರುದ್ರಾಭಿಷೇಕ ಆರಂಭಿಸಿದ್ದರು. ಅವುಗಳನ್ನು ಈಗಿನ ಶ್ರೀಗಳು ಬಿಡಿಸಿದರು. ಅದು ಅಭಿನಂದನಾರ್ಹ. ಆದರೆ ಇಷ್ಟಲಿಂಗಧಾರಿ ಮಾಂಸಾಹಾರ ಸೇವನೆ ಮಾಡಬಹುದೆಂಬುದು ಬಸವ ತತ್ವಕ್ಕೆ ವಿರುದ್ಧ.

ಮೇಲಿನ ವಚನ ತಳವರ್ಗದ ಜನರ ಮೇಲಿನ ಅನುಕಂಪದಿಂದ ಹೇಳಿರುವುದು. ಮಂಡಲ್ ವರದಿಯಲ್ಲಿ ಪೀಠಿಕೆಯಲ್ಲಿ ರೇಸ್ ಕುದುರೆಯ ಜೊತೆಗೆ ಟಾಂಗಾ ಕುದುರೆಯನ್ನು ಸ್ಪರ್ಧೆಗೆ ಬಿಡಲು ಆಗುವುದಿಲ್ಲ. ಮೊದಲು ಟಾಂಗಾ ಕುದುರೆಯನ್ನು ಪುಷ್ಟಿಗೊಳಿಸಬೇಕು ಎಂದರು. ಹಾಗೆ ಸಸ್ಯಾಹಾರಿ ಜೀವನ ಪದ್ಧತಿ ರೂಢಿಸಿಕೊಂಡ ಜಾತಿಗಳವರು ದೀಕ್ಷೆ ಪಡೆದಾಗ ಸುಲಭವಾಗಿ ಸದಾಚಾರಿಗಳಾದರು. ಮಾಂಸಾಹಾರಿಗಳು, ಮದ್ಯಪಾನಿಗಳು ದೀಕ್ಷೆ ಪಡೆದಾಗ ಇವನ್ನು ಬಿಡಲು ಬಹಳ ಹೆಣಗಾಡಬೇಕಾಯಿತು. ಅಂತಹವರ ಬಗ್ಗೆ ಅನುಕಂಪದಿಂದ "ಹೆಚ್ಚು ಸಮಯ ಕೊಡೋಣ, ಲಿಂಗಧಾರಿಗಳಾಗಲಿ, ಪೂಜೆ ಆರಂಭಿಸಲಿ, ಶರಣರ ಒಡನಾಟದಿಂದ ಅವರು ಸದಾಚಾರಿಗಳು ಆಗುವರು. ಮೊದಲೇ ಕಠಿಣವಾದ ನಿಯಮಗಳ ನಿರ್ಬಂಧ ವಿಧಿಸುವುದು ಬೇಡ." ಎನ್ನುವುದು ಧರ್ಮಪಿತರ ಕಳಕಳಿ.

ವಚನಗಳನ್ನು ನಾನು ತಿರುಚಿದ್ದೇನೆ; ಕೂಡಲ ಸಂಗಮದೇವಾ ಬದಲಿಗೆ ಲಿಂಗದೇವ ಮಾಡಿ ಬಸವಣ್ಣನವರಿಗೆ ಅಪಚಾರ ಮಾಡಿದ್ದೇನೆಂದು ಹುಯಿಲೆಬ್ಬಿಸಿ, ವಿಧಾಯಕ ಧ್ಯೇಯವಿಲ್ಲದೆ ರಾಷ್ಟ್ರೀಯ ಬಸವ ದಳವನ್ನು ಒಡೆಯುವ, ನಮ್ಮನ್ನು ವಿರೋಧಿಸುವ ಬಸವ ಕೇಂದ್ರಗಳನ್ನು ತೆರೆದು ಸಮಾಜವನ್ನು ದಾರಿ ತಪ್ಪಿಸಿದ ಮಹಾ ಪ್ರಮಾದವನ್ನು ಶ್ರೀ ಶಿವಮೂರ್ತಿ ಮುರುಘರಾಜೇಂದ್ರರು ಮಾಡಿದ್ದಾರೆ. ಇದಕ್ಕಿಂತ ಮಿಗಿಲಾಗಿ ಮಾದಾರ ಚನ್ನಯ್ಯ ಸ್ವಾಮಿಗಳ ಮೂಲಕ ಬಂಜಗೆರೆಯ ಪುಸ್ತಕ್ಕೆ ನೇರ ಬೆಂಬಲವನ್ನು ನೀಡಿ, ಬಂಜಗೆರೆಯನ್ನು ಬೆಂಬಲಿಸಿ ಪರೋಕ್ಷ ಪ್ರೋತ್ಸಾಹ ನೀಡಿ ಧರ್ಮಗುರು ಬಸವಣ್ಣನವರಿಗೆ ಅಪಚಾರ ಮಾಡಿರುವುದಲ್ಲದೆ, ತಾವು ಅಧಿಕಾರಿಯಾಗಿರುವ ಮಠದ ಸಂಪ್ರದಾಯವನ್ನು ಉಲ್ಲಂಘಿಸಿದ್ದಾರೆ. ಹೇಗೆ ಧರ್ಮಪಿತರು ಬ್ರಾಹ್ಮಣ ಸಂಪ್ರದಾಯವನ್ನು ಬಿಟ್ಟು ಬಂದು ಹೊಸ ಧರ್ಮವನ್ನು ಕೊಟ್ಟರೋ ಹಾಗೆ, ಏನಾದರೂ ಕ್ರಾಂತಿಕಾರಿ ಸುಧಾರಣೆ ತರಬೇಕೆಂದಿದ್ದರೆ ಬಸವ ಸಂಪ್ರದಾಯದ ಮುರುಘಾ ಮಠದ ಪೀಠವನ್ನು (ಹೆಸರಿನಲ್ಲಿ ಬಿಟ್ಟಂತೆ) ಕೃತಿಯಲ್ಲೂ ತೊರೆದು ಹೊರಬಂದು ಬೌದ್ಧಿಕ ಪ್ರಾಮಾಣಿಕತೆ ಪ್ರದರ್ಶಿಸಲಿ. ಆತ್ಮವಂಚನೆ, ಗುರುದ್ರೋಹ ಮಹಾನ್ ಅಪರಾಧಿಗಳು.

ಲಂಕೇಶ್ ಪತ್ರಿಕೆ (ಸಂ. ಇಂದ್ರಜಿತ್)ಯ ಸಂಚಿಕೆ ದಿ22-8-2007 ಪುಟ 8-9ರಲ್ಲಿ ಚಿತ್ರದುರ್ಗ ಮುರುಘಾಮಠವನ್ನು 100ಕೋಟಿ ರೂ ಸಾಲ ಮಾಡಿ ವಿಪತ್ತಿನ ಅಂಚಿಗೆ ತಳ್ಳಿರುವ ಮಠದ ಆಡಳಿತಾಧಿಕಾರಿ ಎಸ್.ಕೆ.ಬಿ.ರಾಜನ್ (ಗುರು ಬಸವಣ್ಣನವರ ಹೆಸರನ್ನು ಕೆಟ್ಟದಾಗಿ ಬಳಸಲು ನನಗೆ ಇಷ್ಟವಿಲ್ಲವಾದ್ದರಿಂದ

ರಾಜನ್ ಎಂದು ಕರೆಯಲಾಗುವುದು) ಬಗ್ಗೆ ದೊಣ್ಣೆಹಳ್ಳಿ ಗುರು ಮೂರ್ತಿ ಬಹಳ ವಿವರಗಳನ್ನು ನೀಡಿ ಖಳನಾಯಕರನ್ನಾಗಿ ರಾಜನ್ ಮತ್ತು ಸೌಭಾಗ್ಯ ದಂಪತಿಗಳನ್ನು ಚಿತ್ರಿಸಿದ್ದಾರೆ.

ಆದರೆ ಶ್ರೀ ಶಿವಮೂರ್ತಿ ಸ್ವಾಮಿಗಳ ಬಗ್ಗೆ ಬಾಯಲ್ಲಿ ಬೊಟ್ಟು ಇಟ್ಟರೆ ಕಚ್ಚಲು ಬರದಷ್ಟು ಮುಗ್ಧರು, ಸಂಭಾವಿತರು ಎಂದು ಪ್ರಮಾಣ ಪತ್ರ ಕೊಟ್ಟಿದ್ದಾರೆ. ಸ್ವಾಮೀಜಿಯವರು ಸ್ವತಂತ್ರರಲ್ಲ ರಾಜನ್ ಸೂತ್ರಧಾರರು, ಇವರು ಸೂತ್ರದ ಗೊಂಬೆ ಎಂದುಕೊಳ್ಳಬಹುದು. ಆತನೇನು ಎಲ್ಲೆಡೆಯಲ್ಲಿ ಬೆನ್ನು ಹತ್ತಿದ ಬೇತಾಳನಂತೆ ಹಿಂಬಾಲಿಸುವುದಿಲ್ಲ. ಆಗೆಲ್ಲ ಮಾತನಾಡಲು, ಕೆಲಸ ಮಾಡಲು ಸ್ವಾಮಿಗಳವರು ಸ್ವತಂತ್ರರು ತಾನೆ? ಅಂಥ ಕೆಲವು ಪ್ರಸಂಗಗಳಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು ತೋರಿದ ವರ್ತನೆ ಅವರ ಮರ್ಯಾದೆಯನ್ನಷ್ಟೇ ಅಲ್ಲ ಅವರ ಅನುಯಾಯಿಗಳ ಮರ್ಯಾದೆಯನ್ನು ಸಹ ಕಳೆದಿದೆ.

ಉದಾ:
1. ಧಾರವಾಡದಲ್ಲಿ ಒಂದು ಪ್ರತಿಭಟನೆಯಲ್ಲಿ ನೇರವಾಗಿ ತಾವೂ ಭಾಗಿಗಳಾಗಿ ಮಾತಾಜಿಯವರ ಮಠಕ್ಕೆ ನುಗ್ಗಿರಿ, ಒಳಗಿರುವ ಸಾಹಿತ್ಯ ಎಳೆದು ಸುಡಿರಿ ಎಂದು ತಮ್ಮ ಅನುಯಾಯಿಗಳಿಗೆ ಕರೆ ಕೊಟ್ಟುದು.
2. ಹುಬ್ಬಳ್ಳಿಯ ನವ ನಗರದಲ್ಲಿ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ನಡೆದಾಗ ಅವರ ಬಸವ ಕೇಂದ್ರದವರು ಕೊಟ್ಟ ತೊಂದರೆ.
3. ಬಸವ ಕಲ್ಯಾಣದ ಅನುಭವ ಮಂಟಪದಿಂದ ಭಾಲ್ಕಿಯ ಬಸವ ಲಿಂಗ ಪಟ್ಟಾಧ್ಯಕ್ಷರನ್ನು ಹೊರಗೆ ಹಾಕಿಸಿ, ತಾವು ಆಕ್ರಮಿಸಿಕೊಂಡುದು.
4. ರಾ.ಬ.ದಳದ ಚಿತ್ರದುರ್ಗ ಬಸವ ಮಂಟಪವನ್ನು ಅಕ್ರಮವಾಗಿ ವಶದಲ್ಲಿ ಇಟ್ಟುಕೊಂಡದ್ದು.

ಇಂಥ ಹಲವಾರು ಪ್ರಸಂಗಗಳನ್ನು ನೆನಪು ಮಾಡಿಕೊಳ್ಳಬಹುದು. ಇವನ್ನೆಲ್ಲ ಮಾಡಬೇಕೆಂದು ರಾಜನ್ ಆಜ್ಞೆ ಮಾಡಿದ್ದು, ಇವನ್ನು ಪರಿಪಾಲಿಸಲೇ ಬೇಕು ಎಂಬಷ್ಟು ಸ್ವಾಮಿಗಳು ಅತಂತ್ರ, ಪರತಂತ್ರರೆ? ದೊಣ್ಣೆ ಹಳ್ಳಿ ಗುರುಮೂರ್ತಿ ಹೇಳುವಂತೆ ರಾಜನ್ ಬಹಳ ಸೊಕ್ಕಿದ್ದು, ಇವರ ಮೇಲೆ ದರ್ಪ ತೋರಿಸುತ್ತಿದ್ದರೆ ಏಕೆ ಸಹಿಸಿಕೊಳ್ಳಬೇಕು? ಗರುಡನ ಕಂಡ ಸರ್ಪ ಧರೆಗಿಳಿವಂತೆ ಇವರು ಮೆತ್ತಗಾಗಬೇಕಿದ್ದರೆ ಏನಾದರೂ ದೋಷ ದೌರ್ಬಲ್ಯವಿರಬೇಕಲ್ಲ.

ಎಲ್ಲ ಜಾತಿಯವರಿಗೆ ಮಠ-ಪೀಠ ಮಾಡಿಕೊಡುವುದು ಉದಾರ ಗುಣ ಎಂದು ಒಪ್ಪೋಣ. ದೀಕ್ಷೆ ಕೊಟ್ಟ ಮೇಲೆ ಸಂಸ್ಕಾರ ಕೊಡಬೇಕಲ್ಲವೆ? ಸಸ್ಯಾಹಾರಿ, ಅಹಿಂಸಾತ್ಮಕ ಧರ್ಮ ಲಿಂಗಾಯತವನ್ನು ಪ್ರವೇಶಿಸಿದ ಮೇಲೆ ಮಾದಾರ ಚನ್ನಯ್ಯ ಸ್ವಾಮಿಗಳಂಥವರು ಸ್ವೀಕರಿಸಿದ ಧರ್ಮವನ್ನು ಪೂರ್ವಾಶ್ರಮ ತೊರೆದು ಅನುಸರಿಸಬೇಕು. ಅದು ಬಿಟ್ಟು ಇಷ್ಟಲಿಂಗಧರಿಸಿಯೂ ಮಾಂಸಾಹಾರ ಮಾಡಬಹುದು ಎಂದು ಹೇಳುವುದು ಅಧರ್ಮವಲ್ಲವೆ? ಕಾವಿ ತ್ಯಾಗ ಮತ್ತು ವೈರಾಗ್ಯದ ಕುರುಹು. ಅದನ್ನೊಂದು ಸಮವಸ್ತ್ರದಂತೆ ಯಾರಿಗೆ ಬೇಕಾದರೂ ಕೊಡಬಹುದೆ? ಜವಾಬ್ದಾರಿ ಸ್ಥಾನದಲ್ಲಿರುವವರು ಹಿಂದಾಲೋಚನೆ, ಮುಂದಾಲೋಚನೆ ಮಾಡದಿದ್ದರೆ ಹೇಗೆ?

3.ಲಿಂಗದೇವ - ವಾಟರ್ ಮಾರ್ಕ್

ಒಂದು ದೇವ ವಾರ (15-7-2007); ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ ಶರಣೆ. ದೇವಿಕಾ ಶರಣಪ್ಪ ಹೇಳಿದರು, "ಒಬ್ಬರು ಫೋನ್ ಮಾಡಿ, ನೀವು ಪ್ರಾರ್ಥನೆಯಲ್ಲಿ ಲಿಂಗದೇವ ಎಂಬುದನ್ನೇ ಕಡ್ಡಾಯ ಮಾಡಿದ್ದೀರಂತೆ. ಹೀಗಾದರೆ 3ಜನರು ಸಹ ಬರುವುದಿಲ್ಲ." ಎಂದರಂತೆ. "ಇಲ್ಲವಲ್ಲ ಹಾಗೇನೂ ಹೇಳಿಲ್ಲ. ಪ್ರಾರ್ಥನೆ/ಪ್ರವಚನ ಮಾಡುವಾಗ ಧರ್ಮಪಿತರ ವಚನ ಬಂದಾಗ ಲಿಂಗದೇವ ಹೇಳುವವರು ಹೇಳಬಹುದು. ಕೂಡಲ ಸಂಗಮದೇವ ಹೇಳುವವರು ಅದನ್ನೇ ಹೇಳಿಕೊಳ್ಳಬಹುದು" ಎಂದು ದೇವಿಕಾ ಉತ್ತರಿಸಿದರಂತೆ.

ಆಗ ನಾನು ಹೇಳಿದೆ, "ಇನ್ನು ಮುಂದೆ ಒಂದೇ ಹೇಳಬೇಕು. ಮೊದಮೊದಲಿಗೆ ಏಕ ದೇವೋಪಾಸನೆ, ಲಿಂಗನಿಷ್ಠೆ ಅಳವಡುವುದು ಕಷ್ಟಸಾಧ್ಯ ಎಂದು ಆಯ್ಕೆಗೆ (Choice) ಅವಕಾಶ ಕೊಡಲಾಯಿತು. ಹೀಗೇ ಬಿಟ್ಟರೆ ಪ್ರಯೋಜನವಿಲ್ಲ. ಮಿಶ್ರ ಶೈವರಾದ ವೀರಶೈವರಂತೆ ವಚನಗಳನ್ನು ಇಂಪಾಗಿ ಹಾಡಲು ಮಾತ್ರ ಬಳಸಿಕೊಂಡು ಅದರೊಳಗಣ ತತ್ವಗಳನ್ನು ಅನುಷ್ಠಾನ ಮಾಡದಿದ್ದರೆಂತು? ಆದ್ದರಿಂದ ರಾಷ್ಟ್ರೀಯ ಬಸವ ದಳಗಳು ನಡೆಸುವ ಬಸವ ಮಂಟಪಗಳಲ್ಲಿ ಕಡ್ಡಾಯವಾಗಿ ಧರ್ಮಪಿತರ ವಚನಗಳಲ್ಲಿ ನಿರಾಕಾರ ದೇವನನ್ನು ಉದ್ದೇಶಿಸಿದ ವಚನಗಳಲ್ಲಿ 'ಲಿಂಗದೇವ' ಎಂದೇ ಬಳಸತಕ್ಕದ್ದು. ಯಾರಿಗೆ ಇದರಲ್ಲಿ ನಂಬಿಕೆ ಇಲ್ಲವೋ ತತ್ವ ನಿಷ್ಠೆ ಇಲ್ಲವೋ ಅವರು ಬಸವ

ಮಂಟಪಕ್ಕೆ ಬರಬೇಕಾಗಿಲ್ಲ." ಎಂದು ಕಟ್ಟುನಿಟ್ಟಾಗಿ ಅಂದಿನ ಪ್ರಾರ್ಥನಾ ಸಭೆಯಲ್ಲಿ ಹೇಳಿದೆ.

ಧರ್ಮಪಿತ ಬಸವಣ್ಣನವರು ಒಂದು ವಿಶಿಷ್ಟ ತಾತ್ವಿಕ ಚೌಕಟ್ಟಿನ ಧರ್ಮವನ್ನು ನೀಡಿದರು. ಸಮಾನತೆ, ಜಾತ್ಯತೀತತೆ, ಏಕದೇವೋಪಾಸನೆ, ಕಾಯಕ ಪ್ರಜ್ಞೆ, ದಾಸೋಹ ಭಾವ ಮುಂತಾದ ತತ್ವ ಪ್ರಧಾನ ಧರ್ಮವಿದು. ಇದರೊಳಕ್ಕೆ ನುಸುಳಿ ಜಾತಿವಾದಿಗಳು, ಮಡಿವಂತರು ಮತ್ತೆ ಇದರ ಶುದ್ಧಿಯನ್ನು ಕೆಡಿಸಿದರು. ವೀರಶೈವ ಪದವನ್ನು ಲಿಂಗಾಯತ ಸಾಹಿತ್ಯ ಹಾಗೂ ಸಮಾಜದೊಳಕ್ಕೆ ತೂರಿಸಿದರು. ಪುನಃ ಮಿಶ್ರ ಶೈವ - ಲಿಂಗಾಯತ ಸಮಾಜವೇ ರೂಪುಗೊಂಡಿದೆ. ಇದನ್ನು ಶುದ್ಧೀಕರಿಸಿ ತಾತ್ವಿಕ ಚೌಕಟ್ಟಿಗೆ ಕೂರಿಸಬೇಕು ಎಂದೇ ನಮ್ಮ ಪ್ರಯತ್ನ ನಡೆಯುತ್ತಿದೆ. ಆದರೆ ವೀರಶೈವವಾದಿಗಳಲ್ಲಿ ತಮ್ಮನ್ನು ತಾವು ತಿದ್ದಿಕೊಂಡು ಏಕದೇವೋಪಾಸಕರು, ಬಸವ ಪಥಿಕರು ಆಗಬೇಕೆಂಬ ಕಳಕಳಿ ಇರದೆ ಲಿಂಗಾಯತ ಧರ್ಮದ ತಾತ್ವಿಕ ಶುಚಿತ್ವವನ್ನು ಕೆಡಿಸುವರು. ಆದಿ ಗುರು ಬಸವಣ್ಣನವರನ್ನು ಧರ್ಮಗುರು, ಸಂಸ್ಥಾಪಕರು ಎಂದು ಒಪ್ಪುವುದಿಲ್ಲ. ನಾವು ಇವರೊಡನೆ ರಾಜಿ ಮನೋಭಾವದಿಂದಲೇ ಸಾಗಿದರೆ ತಾತ್ವಿಕ ಶುದ್ಧಿ ಸಾಧ್ಯವಾಗುವುದೇ ಇಲ್ಲ. ನೋಟುಗಳಲ್ಲಿ ಸರ್ಕಾರದ ಅಧಿಕೃತ ನೋಟು, ಬೇರೆಯವರು ಕಳ್ಳತನದಿಂದ ಮುದ್ರಿಸಿದ ಖೋಟಾ (ನಕಲಿ) ನೋಟು ಎಂದಿರುತ್ತವೆ. ಆಗ ತಪಾಸಿಸಲು ಅಧಿಕೃತ ನೋಟನ್ನು ಬೆಳಕಿಗೆ ಹಿಡಿದಾಗ ಅದರಲ್ಲಿ ಒಂದು ಉದ್ದ ಗೆರೆಯ ಛಾಯೆ ಕಂಡುಬರುತ್ತದೆ. ಇದಕ್ಕೆ ವಾಟರ್ ಮಾರ್ಕ್ ಎನ್ನುತ್ತಾರೆ. ನಕಲಿ ನೋಟು ಮುದ್ರಕರಿಗೆ ಇದನ್ನು ಮುದ್ರಿಸಲು ಬರುವುದಿಲ್ಲವಂತೆ. ಇದೇ ರೀತಿ ಲಿಂಗಾಯತರ ಧರ್ಮ ನಿಷ್ಠೆ ಅಸಲಿಯೋ ನಕಲಿಯೋ ಎಂಬುದಕ್ಕೆ ತಾವು ಎದೆಯ ಮೇಲೆ ಕಟ್ಟುವ ಲಿಂಗದೇವನ ಕುರುಹಾದ ಇಷ್ಟಲಿಂಗವೇ ಸಾಕ್ಷಿ ಅರ್ಥಾತ್ ಲಿಂಗದೇವ ಪದ ಪ್ರಯೋಗವೇ ಸಾಕ್ಷಿ. ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಅರ್ಥವಾಗದಿದ್ದವರು, ಅರ್ಥ ಮಾಡಿಕೊಳ್ಳದವರ ಮುಂದೆ ಕಂಠ ಶೋಷಣೆ ಏಕೆ ಮಾಡಿಕೊಳ್ಳಬೇಕು ? ಧರ್ಮಪಿತರು ಹೇಳುವಂತೆ :

ಕೂಪವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ
ಕೂರದವರಿಗೆ ಹೇಳಿ ನಾನೇವೆ ಶಿವನೆ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರು ಎನ್ನ ಸುಖ-ದುಃಖವ?
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ!
ಇದು ಕಾರಣ, ಲಿಂಗದೇವಾ,
ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು.

"ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು" ಎಂಬ ಮಾತು ಬಹಳ ಮಹತ್ವಪೂರ್ಣ. ಅರ್ಥ ಮಾಡಿಕೊಳ್ಳುವವರ ಮುಂದೆ ಮಾತನಾಡಬೇಕೇ ವಿನಾ ಮಾಡಿಕೊಳ್ಳದವರ ಮುಂದೆ ಏನು ಹೇಳಬೇಕು? ಅವರ ಮುಂದೆ ಮೌನ ತಾಳಿ, ಅರ್ಥ ಮಾಡಿಕೊಳ್ಳುವವರ ಒಡನಾಟವನ್ನು ಜಾಸ್ತಿ ಮಾಡಬೇಕು.

ಆತ್ಮವಂಚಕರಿಗೊಂದು ಕಿವಿ ಮಾತು

ಆತ್ಮವಂಚಕರೇ, ನೀವು ಮಾನವ ಸಮಾಜ ಹುಟ್ಟಿದಾಗಿನಿಂದಲೂ ಇದ್ದೀರಿ. ರಾಜಕೀಯ, ಸಾಮಾಜಿಕ, ಧಾರ್ಮಿಕ - ಎಲ್ಲ ರಂಗಗಳಲ್ಲೂ ಇರುತ್ತೀರಿ. ಒಂದು ತತ್ವಕ್ಕೆ ಬದ್ಧರಾಗದೆ, ಒಳಗಿದ್ದುಕೊಂಡೇ ದ್ರೋಹ, ಪಿತೂರಿ ಮಾಡುವುದು ನಿಮ್ಮ ಸ್ವಭಾವ. ನಿಮ್ಮಂತಹವರಿಂದ ಆಗಬಾರದ ಅನಾಹುತಗಳು ವಿಘಟನೆಗಳು ಆಗುತ್ತಲೇ ಬಂದಿವೆ.

ಜೀವನದಲ್ಲಿ ಒಂದು ನಿಯತ್ತು ಎಂಬುದು ಇರಬೇಕು. ಸಮಯ ಸಾಧಕತನ ಮಾಡುತ್ತ ಹೊತ್ತಿಗೊಂದು ವೇಷ ಹಾಕುವುದು ಗೋಸುಂಬೆತನ ಎನ್ನಿಸಿಕೊಳ್ಳುತ್ತದೆ. ಧರ್ಮಪಿತ ಬಸವಣ್ಣನವರು ಒಂದು ನಿಷ್ಠೆಯನ್ನು ಕಲಿಸುತ್ತಾರೆ. ತಾನು ಹಿಡಿದ ತತ್ವಕ್ಕೆ ವ್ಯಕ್ತಿ ಬದ್ಧನಾಗಬೇಕು. ಏನೇ ಕಷ್ಟ ಬರಲಿ, ತೊಂದರೆ ತಾಪತ್ರಯ ಬರಲಿ ತತ್ವವನ್ನು ಬಿಡಬಾರದು ಎನ್ನುತ್ತಾರೆ. ನೀವು ಅವರಿವರಿಗೆ ಅಂಜಿ ತತ್ವವನ್ನು, ನಿಷ್ಠೆಯನ್ನು ಕೈ ಬಿಡುವವರು. ಸತ್ಯವನ್ನು ನುಡಿದರೆ ಹೊಟ್ಟೆಪಾಡಿಗೆ ತೊಂದರೆಯಾಗುವುದೆಂದು ಸತ್ಯವನ್ನು ಬಲಿಕೊಡುವವರು. ಇನ್ನೂ ಪಾಪ ಕರ್ಮವನ್ನು ಮುಂದುವರಿಸಬೇಡಿ; ಲಿಂಗದೇವನು ಎಲ್ಲವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾನೆ.

ರಾ.ಬ.ದಳ ಮತ್ತು ಬಸವ ಮಂಟಪಗಳ ತಾತ್ವಿಕ ಶುದ್ಧಿ

ರಾಷ್ಟ್ರೀಯ ಬಸವ ದಳದ ಪ್ರಮುಖ ಉದ್ದೇಶವೇ ಲಿಂಗಾಯತ ಸಮಾಜದ ತಾತ್ವಿಕ ಶುದ್ಧೀಕರಣ. ಇಲ್ಲಿ ಸಂಘ- ಸಂಸ್ಥೆಗಳಿಗೆ ಏನೂ ಬರವಿಲ್ಲ. ಬಸವ ಜಯಂತಿ ಕಲೆಕ್ಷನ್ ಮಾಡಿ ಹಣ ಸಂಗ್ರಹಿಸುವ ಪರಮೋನ್ನತ ಧ್ಯೇಯದಿಂದ ಹಿಡಿದು ಬೆಳೆದು ನಿಂತ ಸಂಸ್ಥೆಗಳ ಆದಾಯ ಬಾಚಿಕೊಳ್ಳುವವರೆಗೆ ಬಹುಬಗೆಯ ಉದ್ದೇಶ ಹೊಂದಿವೆ.

ಇವೆ. ಬಸವ ತತ್ವದ ಪ್ರತಿಷ್ಠಾಪನೆಗಾಗಿ ಇರುವ ಏಕೈಕ ಸಂಘಟನೆ ರಾಷ್ಟ್ರೀಯ ಬಸವ ದಳ. ಲಿಂಗಾಯತರ ಕೇರಿಗಳಲ್ಲಿ ಗುಡಿಗಳಿಗೆ ಏನೂ ಕೊರತೆಯಿಲ್ಲ ಕ್ರಾಂತಿಪುರುಷ ಬಸವಣ್ಣನವರನ್ನು ನಂದಿಯನ್ನಾಗಿ ಜಡಗಟ್ಟಿಸಿದ ಗುಡಿಗಳಿವೆ. ಇನ್ನು ಕಂಡ ಕಂಡ ಗುಡಿಗಳಿಗೆ ತಮ್ಮ ಧರ್ಮಕ್ಕೆ ವಿರುದ್ಧವಾಗಿ ನುಗ್ಗುವವರ ದಂಡೇ ದೊಡ್ಡದು. ಹೀಗಿದ್ದಾಗ ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಬಸವ ಮಂಟಪಗಳು ಬಸವ ತತ್ವ ಪ್ರಚಾರದ ಆಶಾ ಜ್ಯೋತಿಗಳಾಗಿ ಬೆಳಗುತ್ತಿವೆ. ಗುರು-ಬಸವಣ್ಣ, ಲಿಂಗ-ಸೃಷ್ಟಿಕರ್ತ ಲಿಂಗದೇವ, ಜಂಗಮ - ಶರಣ ಪರಂಪರೆಯ ಮಹಾನುಭಾವರು, ಇಂದಿನ ಸಮಾಜ ಇವುಗಳ ಮೇಲೆ ಸಮಾಜ ಕಟ್ಟಲು ಮಂಟಪ ನಿರ್ಮಾಣವಾಗಿವೆ. ಇಲ್ಲಿ ತಾತ್ವಿಕ ಶುದ್ಧಿ ಕಾಯ್ದುಕೊಳ್ಳಿ, ಗುರು ಬಸವಣ್ಣನವರೇ ಧರ್ಮಗುರು, ಸೃಷ್ಟಿಕರ್ತ ಲಿಂಗದೇವನೊಬ್ಬನೇ ದೇವ, ವಚನ ಸಾಹಿತ್ಯವೇ ಧರ್ಮ ಸಂಹಿತೆ, ಕೂಡಲ ಸಂಗಮ/ ಬಸವ ಕಲ್ಯಾಣ ಧರ್ಮಕ್ಷೇತ್ರ ; ಇದನ್ನು ದೃಢವಾಗಿ ನಂಬುವವರು ಮತ್ತು ಪ್ರತಿಪಾದಿಸುವವರಿಗೆ ಮಾತ್ರ ಬಸವ ಮಂಟಪಗಳಲ್ಲಿ ಸ್ಥಾನ. ಇದನ್ನು ನಂಬದವರಿಗೆ ಊರುಗಳಲ್ಲಿ ನಾಲ್ಕಾರು ಗುಡಿಗಳಿರುತ್ತದೆ. ಆದ್ದರಿಂದ ಬಸವ ಮಂಟಪದ ನಿರ್ವಹಣೆ ಮಾಡುವವರು ತಾತ್ವಿಕ ಅಪಚಾರಕ್ಕೆ ಅವಕಾಶ ಮಾಡಿಕೊಡಬಾರದೆಂದು ಆಶಿಸುತ್ತೇವೆ.

ಹಾಸ್ಯ

ಅವಕಾಶ - ಆಕಾಶ ಸಹೋದರರ ಒಂದು ಸಂಭಾಷಣೆ

-ಪರಮೇಶ್ ಪಾಟೀಲ್, ಬೆಂ

"ಹಲೋ ಆಕಾಶ್, ನೀನು ನನ್ನ ಮರ್ಯಾದೆ ಕಾಪಾಡಬೇಕು. ಪ್ಲೀಸ್..."

"ಬಿಗ್ ಬ್ರದರ್ ಅವಕಾಶ್ ಏಕಿಷ್ಟು ಗಾಬರಿಯಾಗಿದ್ದೀರಾ?" ಆಕಾಶ್ ಕೇಳಿದ.

"ಈಗ ಪ್ರಸಂಗ ನನ್ನ ಕೊರಳಿಗೆ ಉರುಳಾಗುತ್ತಿದೆ......."

"ಏನಿದು ಅವಕಾಶ್ ಬ್ರದರ್, ಪೋಲಿಸ್ ಆಫೀಸರ್ ಆಗಿ ನೀನೇ ಇಷ್ಟು ಗಾಬರಿಗೊಳ್ಳುವುದುಂಟೆ?"

"ಪ್ರಸಂಗ ಹಂಗೆ ಬಂದಿದೆ. ಪೋಲೀಸ ಅಧಿಕಾರಿಯಾದರೇನು ನೀನು ಕದ್ದ ಮಾಲನ್ನು ಉಳಿಸಿಕೊಳ್ಳಲು ಶತ ಪ್ರಯತ್ನ ಮಾಡುತ್ತಿರುವುದು; ನಾನು ನಿನಗೆ ಕಾನೂನಿನ ಬೆಂಬಲ ಕೊಟ್ಟಿರುವುದು ಇಲಾಖೆಯ ಮೇಲಧಿಕಾರಿಗಳಿಗೆ ಗೊತ್ತಾಗಿ ಬಿಟ್ಟಿದೆ. ನನ್ನ ಬಾಸ್, ಕೊಲಿಗ್ಸ್ ಎಲ್ಲರೂ ನಿನ್ನನ್ನು ಬಿಟ್ಟು ಕೊಡುವಂತೆ ಒತ್ತಡತರುತ್ತಿದ್ದಾರೆ." ಧ್ವನಿಯಲ್ಲಿ ಅಳಲಿತ್ತು.

"ಅಣ್ಣಾ, ನೀನು ಒತ್ತಡಕ್ಕೆ ಒಳಗಾಗಬೇಡ, ನನ್ನ ಕೈ ಬಿಡಬೇಡ. ನಿನ್ನ ಧೈರ್ಯದ ಬಲದ ಮೇಲೇ ನಾನು ಕಳವು ಮಾಡಿರುವುದು."

"ಆದರೀಗ ನನ್ನ ಕೊರಳಿಗೇ ಉರುಳು ಬೀಳುತ್ತಿದೆ. ಆಕಾಶ್, ನಾನು ಎಷ್ಟು ಕಷ್ಟಪಟ್ಟು , ಅಂದರೆ ಲಂಚಕೊಟ್ಟು ಎಷ್ಟೋ ಜನರ ಕಾಲು ಹಿಡಿದು ಈ ಸ್ಥಾನಕ್ಕೆ ಬಂದಿದ್ದೇನೆ ಗೊತ್ತಾ? ನಿನಗಾಗಿ ಇದನ್ನು ಕಳೆದುಕೊಳ್ಳಲೆ?"

"ಹಾಗೆಂದರೆ ಹೆಂಗಣ್ಣ; ನನ್ನ ಸಹಾಯಕ್ಕೆ ಯಾರು?"

"ತಮ್ಮಾ ನಿಂಗೆ ಕೋತಿ ಕಥೆ ಗೊತ್ತಾ? ಒಮ್ಮೆ ಅಕ್ಬರ ಕೇಳಿದನಂತೆ ಜಗತ್ತಿನಲ್ಲಿ ಅತ್ಯಂತ ಪ್ರಿಯವಾದುದು ಮನುಷ್ಯನಿಗೆ ಯಾವುದು?" ಕೆಲವರು ಹೆಂಡತಿ ಎಂದರೆ, ಮತ್ತೆ ಕೆಲವರು ಮಕ್ಕಳು ಎಂದರು. ಧನಕನಕ ಭೂಮಿ ಆಸ್ತಿ ಎಲ್ಲ ಪಟ್ಟಿಯಾದವು. ಬೀರಬಲ್ ಹೇಳಿದ, ಪ್ರತಿಯೊಬ್ಬನಿಗೂ ತಾನೇ ಪ್ರಿಯನಾದವನು ! ತನಗಾಗಿಯೇ ಉಳಿದುದೆಲ್ಲ!! ಇದನ್ನು ಪ್ರಮಾಣೀಕರಿಸಲು ಬೀರಬಲ್ ಒಂದು ನೀರಿನ ತೊಟ್ಟಿ ತರಿಸಿದ. ಅದರೊಳಕ್ಕೆ ಒಂದು ಕೋತಿಯನ್ನು, ಅದರ ಚಿಕ್ಕ ಮರಿಯನ್ನು ಇಳಿಸಿದ. ನೀರನ್ನು ಕೆಳಗಿನಿಂದ ತುಂಬಿಸಲಾಯಿತು. ಮರಿಯನ್ನು ತಾಯಿ ಕೋತಿ ಆಡಿಸುತ್ತಿತ್ತು. ನೀರು ಮೇಲಕ್ಕೆ ಏರಿದಾಗ ಹೆಗಲ ಮೇಲೆ ಏರಿಸಿಕೊಂಡಿತು. ಇನ್ನು ಕಷ್ಟಸಾಧ್ಯ ಎನಿಸಿದಾಗ ಆ ಮರಿಯನ್ನು ಕೈಬಿಟ್ಟು ತೊಟ್ಟಿಯ ಗೋಡೆ ಹಿಡಿಯಲು ಯತ್ನಿಸಿತು. ತನ್ನ ಜೀವ ಅದಕ್ಕೆ ಮುಖ್ಯವಾಯಿತು. ಈವರೆಗೂ ನಾನು ಸಹಾಯ ಮಾಡಿದೆ. ಈಗ ನೀರು ನನ್ನ ಕಂಠ ಮಟ್ಟ ಏರುತ್ತಿದೆ. ಏನು ಮಾಡಲಿ ? ನಾನು, ತಳವಾರ ಗಂಗಮ್ಮನ ಮಗ ಕೋಳಿಯಪ್ಪ, ಕರಳು ಮುದ್ದಪ್ಪ ಗಾಂಪಾ ಎಲ್ಲರೂ ಸಾಹಸ ಮಾಡಿದೆವು. ಪ್ರವಾಹ ಏರುತಲೇ ಇದೆ!" ಅವಕಾಶ್ ಆತಂಕದಿಂದ ಹೇಳಿದ.

"ನೀನೇ ಹೇಳಣ್ಣ, ಏನು ಮಾಡಲಿ ?" ಆಕಾಶ್ ಸಂಕಟದಿಂದ ಕೇಳಿದ.

"ನೀನು ಕದ್ದ ಮಾಲನ್ನು ತಂದು ಸರ್ಕಲ್‌ದಲ್ಲಿ ಇಟ್ಟುಬಿಡು. ನಾವು ಪತ್ತೆ ಮಾಡಿದಂತೆ ನಾಟಕ ಆಡುತ್ತೇವೆ."

"ಇಲ್ಲ ಅವಕಾಶ್. ಇದರಿಂದ ನನ್ನ ಸ್ವಾಭಿಮಾನಕ್ಕೆ ಧಕ್ಕೆಯುಂಟಾಗುತ್ತದೆ."

"ನಿನ್ನ ಸ್ವಾಭಿಮಾನ ಮುಖ್ಯವೋ, ನಾನು ಕಷ್ಟಪಟ್ಟು, ಲಂಚಕೊಟ್ಟು ಪಡೆದ ಅಧಿಕಾರ ಮುಖ್ಯವೋ?" ಅವಕಾಶಪ್ಪ ಗದರಿದಾಗ, ಆಕಾಶ್ ನರಂ ಆಗಿ, ಕದ್ದ ಮಾಲನ್ನು "ಸ್ವಯಂ ಪ್ರೇರಣೆಯಿಂದ" ರಾತ್ರಿ ಯಾರೂ ಕಾಣದಂತೆ ಸರ್ಕಲ್‌ದಲ್ಲಿ ಇಟ್ಟು ಬಿಟ್ಟ. ಅವಕಾಶಪ್ಪ ಅದನ್ನು ಪತ್ತೆ ಮಾಡಿ ಮುಖ ಉಳಿಸಿಕೊಂಡ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ 812ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠ, ಕೂಡಲ ಸಂಗಮ



ಶರಣ (ಶನಿ)ವಾರ ದಿ. 18-8-2007 ರಂದು ಬೆಳಿಗ್ಗೆ 10-30

ದೇವ (ಭಾನು)ವಾರ ದಿ.19-8-2007ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 812ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ : ಸರ್.ಕೆ.ಪಿ. ಪುಟ್ಟಣ್ಣಶೆಟ್ಟಿ ಪುರಭವನ, ಬೆಂಗಳೂರು, ಬೆಳಿಗ್ಗೆ. 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **''ಬಸವ ಪಂಚಮಿ''** ಎಂದು ಖ್ಯಾತಿವೆತ್ತಿದೆ. ಈ ವರ್ಷ 812ನೆಯ ಲಿಂಗೈಕ್ಯ ದಿನವು ಶನಿ (ಶರಣ)ವಾರ ದಿ. 18-8-2007ರಂದು ಒದಗಿ ಬಂದಿದೆ.

ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 812ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ಎಲ್ಲರ ಕರ್ತವ್ಯವಾಗಿರುವುದರಿಂದ ರಾಜಾಜಿ ನಗರದ ಬಸವ ಮಂಟಪದಲ್ಲಿ ಶ್ರಾವಣ ಅಮಾವಾಸ್ಯೆಯ ಮರು ದಿವಸದಿಂದ ಪತ್ರಿನಿತ್ಯ ಬೆಳಿಗ್ಗೆ 7-30ರಿಂದ ವಿಶೇಷವಾಗಿ ಬಸವೇಶ್ವರ ಪೂಜಾವ್ರತವನ್ನು ಏರ್ಪಡಿಸಲಾಗುವುದು. ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಸಂಕಲ್ಪ ಮಾಡಿಕೊಂಡು ಪೂಜಿಸುವ ಶರಣ ಬಂಧುಗಳಿಗೆ ಪೂಜಾ ಸಾಮುಗ್ರಿಗಳೊಡನೆ ಬಂದು ಪುಷ್ಪಾರ್ಚನೆ ಮಾಡಲು ಅವಕಾಶ ಉಂಟು.

ದಿ. 18-8-07 ಮತ್ತು 19-8-07ರಂದು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪವಿರುವ ಸರ್.ಕೆ.ಪಿ. ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 10-30ರಿಂದ ವಿಶೇಷ ಕಾರ್ಯಕ್ರಮ ಏರ್ಪಾಡಾಗಿರುತ್ತದೆ. ದಿ.19ರಂದು ಇಷ್ಟಲಿಂಗ ಯೋಗ ವಿಜ್ಞಾನ, ಅದರೊಳಗಣ ವಿಶೇಷತೆ ಕುರಿತು ಈ ಬಗ್ಗೆ ವಿಶೇಷ ಅಧ್ಯಯನ, ಸಂಶೋಧನೆ ಮಾಡಿ ಗ್ರಂಥವನ್ನು ರಚಿಸಿರುವ ಶರಣ. ಬಸವರಾಜಪ್ಪ ಮೆಣಸಿನಕಾಯಿ, ಶಿರಗುಪ್ಪಿ ಇವರೊಡನೆ ಸಂವಾದ ಏರ್ಪಡಿಸಲಾಗಿದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು.	ಪೂಜ್ಯ ಬಸವ ಕುಮಾರ ಸ್ವಾಮೀಜಿ
ಲಿಂಗಾಯತ ಧರ್ಮ ಮಹಾಸಭಾ	ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ.19-8-2007ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 812 ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ಕಿತ್ತೂರು ಚೆನ್ನಮ್ಮ ,ಕೆಂಪೆಗೌಡ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಗರ್ತರ ಪೇಟೆಯ ಮೂಲಕ ಸಾಗಿ ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ. ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲಿದೆ.

ವಿಶೇಷ ಸೂಚನೆ: ಕಾರ್ಯಕ್ರಮದ ವಿಶೇಷ ಆಹ್ವಾನ ಪತ್ರವನ್ನು ಅತಿಥಿಗಳ ಹೆಸರಿನೊಡನೆ ಮುದ್ರಿಸಲಾಗುವುದು. ಈ ಕರಪತ್ರವನ್ನು ಬಹಳ ಮೊದಲೇ ಮುದ್ರಿಸಲಾಗಿದೆ. ವಿಶೇಷ ಆಹ್ವಾನ ಪತ್ರವನ್ನು ಎಲ್ಲರಿಗೂ ತಲಿಸಲು ಸಾಧ್ಯವಾಗದು. ಇದನ್ನೇ ಆಹ್ವಾನವೆಂದು ಸ್ವೀಕರಿಸಲು ಕೋರಿಕೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-23325335 / 23131476

ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು. -ಚನ್ನಬಸವಣ್ಣನವರು

ಬಂಜಗೆರೆಯ ಪುಸ್ತಕವು ಬೆತ್ತಲೆಗೊಳಿಸಿದ ಮಹನೀಯರು

ಒಬ್ಬ ಯಕಃಶ್ಚಿತ್ ಲೇಖಕ ಡಾ|| ಬಂಜಗೆರೆ ಜಯಪ್ರಕಾಶ್, ಎಷ್ಟೊಂದು ಭಂಡ ಧೈರ್ಯದಿಂದ ಹೋರಾಡುತ್ತ ಇಡೀ ಲಿಂಗಾಯತ ಸಮಾಜ ಮತ್ತು ರಾಜ್ಯ ಅಸಹನೆಯಿಂದ ಪ್ರತಿಭಟಿಸುತ್ತಿದ್ದರೆ ಯಾವ ಸಂಕೋಚವೂ ಇಲ್ಲದೆ ತಾನು ಮಾಡಿದ್ದು ಸರಿ ಎಂದು ಉದ್ಧಟತನದ ಹೇಳಿಕೆಯನ್ನು ಕೊಡುತ್ತಿದ್ದರು. ಸ್ವಲ್ಪವಾದರೂ ಪಶ್ಚಾತ್ತಾಪ, ಆತ್ಮಾವಲೋಕನ ಕಾಣಬರಲಿಲ್ಲ ಎಂತಹ ದಾರ್ಷ್ಟ್ಯ! ಇದಕ್ಕೆ ತಾಕತ್ತು ಎಲ್ಲಿಂದ ಬರುತ್ತಿದೆ ಎಂದು ನಮಗೆಲ್ಲ ಅಚ್ಚರಿಯಾಗುತ್ತಿತ್ತು. ಆದರೂ ಸಾರ್ವಜನಿಕರು, ಸತ್ಯಾಗ್ರಹಿಗಳು ಕೆಲವರ ಮೇಲೆ ಸಂಶಯ ವ್ಯಕ್ತಪಡಿಸುತ್ತಿದ್ದರು. ಅದು ನಿಜವೆಂಬುದು ಗೌರಿ ಲಂಕೇಶರ ಸಂಪಾದಕತ್ವದ ಲಂಕೇಶ್ ಪತ್ರಿಕೆ (1-8-2007 ಸಂಚಿಕೆ) ಯಿಂದ ಖಚಿತವಾಯಿತು.

ಪಂಚತಂತ್ರ ಕಥೆಯಲ್ಲಿ ಒಂದು ಕಡೆ ಬರುತ್ತದೆ. ಒಮ್ಮೆ ಆನೆ ಮತ್ತು ಆಮೆಗಳ ಮಧ್ಯೆ ಯಾರು ಶಕ್ತಿಶಾಲಿ ಎಂಬ ವಾದ ಎದ್ದಿತು. ಆಮೆಯು ಒಂದು ಹಗ್ಗವನ್ನು ಸೊಂಟಕ್ಕೆ ಕಟ್ಟಿಕೊಳ್ಳಬೇಕೆಂದು ಆ ಹಗ್ಗವನ್ನು ಆನೆ ಜಗ್ಗಬೇಕೆಂದು ನಿರ್ಣಯವಾಯಿತು. ಆಮೆಯ ಮಿತ್ರರು ಒಂದು ಸಲಹೆ ಕೊಟ್ಟರು. ಆನೆಯು ಎಷ್ಟು ಜಗ್ಗಿದರೂ ಆಮೆಯನ್ನು ಎಳೆಯಲಾಗಲಿಲ್ಲ. ಆನೆಯು ಸೋತು ಹೋಯಿತು. ಆಮೆಯು ನೀರಿನೊಳಗಿದ್ದ ಒಂದು ಗಿಡದ ಬುಡವನ್ನು ಕಚ್ಚಿಕೊಂಡಿದ್ದರಿಂದ ಅದನ್ನು ಎಳೆಯಲು ಆನೆಗೆ ಆಗಲಿಲ್ಲ. ಸರಿ ಸುಮಾರು ಸಮಯ ಪ್ರಯತ್ನಿಸಿ ಆನೆಯು ಸೋತು ಮರಳಿತು.

ಒಬ್ಬ ಸಾಮಾನ್ಯ ಲೇಖಕ ಕಿಡಿಗೇಡಿತನದಿಂದ ಒಂದು ಪುಸ್ತಕವನ್ನು ಬರೆದು ಲಿಂಗಾಯತ ಧರ್ಮ ಸ್ಥಾಪಕರು, ದಾರ್ಶನಿಕರೂ ಆದ ಗುರು ಬಸವಣ್ಣನವರ ಜನ್ಮ ಮೂಲ, ಜಾತಿ ಮೂಲವನ್ನು ತಿರುಚಿ, ಅವರ ವಚನಗಳಿಗೆ ಅಪಾರ್ಥ ಮಾಡಿದಾಗ ಪ್ರತಿಭಟನೆ ವ್ಯಕ್ತವಾಯಿತು. ಲಿಂಗಾಯತ ಸಮಾಜದಲ್ಲಿ ಇಂಥ ಒಗ್ಗಟಿನ ಮತ್ತು ವ್ಯಾಪಕವಾದ ಪ್ರತಿಭಟನೆ ಹಿಂದೆಂದೂ ಆಗಿರಲಿಲ್ಲ. ಹಲವಾರು ಸಂಘ-ಸಂಸ್ಥೆ ಸಂಘಟನೆಗಳು ಒಟ್ಟಾಗಿ ಮತ್ತು ಅಲ್ಲಲ್ಲೇ ತಮ್ಮ ತಮ್ಮ ವಲಯಗಳಲ್ಲಿ ಪ್ರತಿಭಟನೆ ಮಾಡಿದವು. ಈ ಪ್ರತಿಭಟನೆಯಲ್ಲಿ ಕೇವಲ ಲಿಂಗಾಯತರು ಮಾತ್ರವಲ್ಲ ಇನ್ನಿತರ ಜಾತಿಗಳವರು ಸಹ ಪಾಲ್ಗೊಂಡರು.

ಇಂಥ ಬೃಹತ್ ಮತ್ತು ವ್ಯಾಪಕವಾದ ಪ್ರತಿಭಟನೆ ನಡೆಯುತ್ತಿದ್ದರೂ ಹೆಬ್ಬಂಡೆಯಂತೆ ಅಚಲವಾಗಿ ಬಂಜಗೆರೆ ಜಯಪ್ರಕಾಶ್ ದಾರ್ಷ್ಟ್ಯದ ಮಾತುಗಳನ್ನೇ ಆಡುತ್ತಿದ್ದರು. ಈ ದಾರ್ಷ್ಟ್ಯದ ಹಿಂದೆ ಇದ್ದ ಕಾಣದ ಕೈಗಳು ಯಾವುವಿರಬಹುದು ಎಂದು ಎಲ್ಲರೂ ಬಗೆ ಬಗೆಯ ಊಹೆ ಮಾಡುತ್ತಿದ್ದರು. ಗೌರಿ ಲಂಕೇಶ್ ಸಂಪಾದಕತ್ವದ 1-8-2007ರ ಲಂಕೇಶ್ ಪತ್ರಿಕೆಯಿಂದ ಸ್ಪಷ್ಟ ಚಿತ್ರಣ ಮೂಡಿತು.

1. ಗೃಹ ಮಂತ್ರಿ ಶ್ರೀ ಎಂ.ಪಿ. ಪ್ರಕಾಶ್

ಈವರೆಗೂ ಬಸವಾಭಿಮಾನಿ ಎಂದೇ ಪೋಸ್ ಕೊಡುತ್ತ ಭಾಷಣ ಮಾಡುತ್ತಲಿದ್ದ ಎಂ.ಪಿ.ಪ್ರಕಾಶರಿಗೆ ಬಂಜಗೆರೆ ಜಯಪ್ರಕಾಶರ ಪ್ರತಿಷ್ಠೆ ಕಾಯುವುದು ಮುಖ್ಯವಾಯಿತೇ ವಿನಾ ತಾನು ಪ್ರತಿನಿಧಿಸುವ ಸಮಾಜದ ಆತ್ಮಗೌರವ ಮುಖ್ಯವಾಗಲಿಲ್ಲ. ಇಂತಿಂಥ ಕೋಮು, ಜಾತಿಗಳ ಮಂತ್ರಿಗಳು ಎಂದು ಪಟ್ಟ ಮಾಡುವಾಗ ಇವರುಗಳು ಲಿಂಗಾಯತ ಸಮಾಜದ ಪರವಾಗಿ ಹಕ್ಕೊತ್ತಾಯ (demand) ಮಾಡುವರಲ್ಲ ಸಮಾಜದ ಸ್ವಾಭಿಮಾನ, ಆತ್ಮಗೌರವಕ್ಕೆ ಪೆಟ್ಟು ಬಿದ್ದಾಗ ಏಕೆ ಮುಂಚೂಣಿಗೆ ಬರುವುದಿಲ್ಲ? ಇಡೀ ಸಮಾಜವನ್ನು ಎದುರು ಹಾಕಿಕೊಂಡು ಬಂಜಗೆರೆಯನ್ನು ರಕ್ಷಿಸಿದ್ದರ ಹಿಂದಿನ ಕಾರಣವೇನಿರಬಹುದು?

ಮುಟ್ಟುಗೋಲು ವಿಳಂಬವಾಗಲು ಶಕ್ತಿಶಾಲಿ ಕೈ ಎಂ.ಪಿ.ಪ್ರಕಾಶರೇ ಕಾರಣ. ದಿ 23-7-2007ರಂದು ಸಚಿವ ಸಂಪುಟದ ಸಭೆ ಸೇರಿದಾಗಲೂ, ಕಡೆಯ ಕ್ಷಣದವರೆಗೂ ಎಂ.ಪಿ.ಪ್ರಕಾಶರು ಮುಟ್ಟುಗೋಲಿಗೆ ಒಪ್ಪಲಿಲ್ಲವಂತೆ. ಸಮಾಜದಲ್ಲಿ ಅಶಾಂತಿ ಮುಗಿಲಿಗೆ ಮುಟ್ಟಿದ್ದರಿಂದ ಅವರ (ದುರ್) ಆಗ್ರಹ ಕಡೆಗಣಿಸಿ ಸಚಿವ ಸಂಪುಟದ ಸಭೆಯಲ್ಲಿ ಬಹುಮತದಿಂದ ನಿರ್ಣಯಿಸಲಾಯಿತಂತೆ.

ಬಂಜಗೆರೆ ಪುಸ್ತಕವನ್ನು ಪರಿಷ್ಕರಿಸಲು ತಾತ್ಕಾಲಿಕವಾಗಿ ಹಿಂದಕ್ಕೆ ಪಡೆಯುವುದಾಗಿ ಘೋಷಿಸಿದ ಮಧ್ಯಂತರ ಯುದ್ಧ ವಿರಾಮವೂ ಎಂ.ಪಿ.ಪ್ರಕಾಶರ ಕಟ್ಟಕಡೆಯ ಹತಾಶೆಯ ಸಲಹೆ. ನಾವಾರೂ ಅದನ್ನು ಒಪ್ಪಲಿಲ್ಲ. ಇಷ್ಟರಮಟ್ಟಿಗೆ ಬಂಜಗೆರೆಯನ್ನು ರಕ್ಷಿಸುವ ಆಕಾಂಕ್ಷೆಯ ಹಿಂದಿನ ಗುಟ್ಟು ಏನಿರಬಹುದು? ಇದು ಸಂಶೋಧಕರಿಗೆ ಹೊಸ ಜಗತ್ತನ್ನೇ ತೆರೆದು ಇಡಬಹುದಾದ ಅತ್ಯುತ್ತಮ ವಿಷಯ.

2. ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳು.

ಏನು ಅವರ ಅದೃಷ್ಟವೇ ಹಾಗೋ? ಕೈಗುಣದ ಮಹಿಮೆಯೋ? ಪಾಪ, ಒಂದೊಂದೂ ಬೂಮ್ ರ್‍ಯಾಂಗ್ ಕರ್ಮಗಳು ಬಡಿಯುತ್ತಿವೆ. ಸಣ್ಣ ಮಕ್ಕಳು ಆಟ ಆಡುವಾಗ ಎಲ್ಲರಿಗೂ ಕಾಣುವಂತೆಯೇ ಮುಚ್ಚಿಟ್ಟುಕೊಂಡು, ತಾವು ಮಾತ್ರ ಕಣ್ಣು ಮುಚ್ಚಿಕೊಂಡು ನನ್ನ ಹುಡುಕು ಎಂಬಂತೆ ಇವರ ಆಟ. ಮಾದಾರ ಚನ್ನಯ್ಯ ಸ್ವಾಮಿಗಳು ಬಳ್ಳಾರಿಯಲ್ಲಿ ಮಾದಿಗರ ಸಮಾವೇಶ ಮಾಡಿದಾಗ ಉದುರಿಸಿದ ಆಣಿ ಮುತ್ತುಗಳಿಗೆ ಅವರ ಗುರುಗಳ ಅಭಯ ಹಸ್ತವಿದೆಯೋ? ಅಥವಾ ಗುರುಗಳ ಮಾತನ್ನು ಉಲ್ಲಂಘಿಸುವ ದಾರ್ಷ್ಟ್ಯ ಮಾದಾರ ಚನ್ನಯ್ಯ ಸ್ವಾಮಿಗಳದೊ? ಎಂಬ ಪ್ರಶ್ನೆಗಳು ಎಲ್ಲರಲ್ಲಿ ಮೂಡಿದವು.

ದೀರ್ಘ ಮೌನದ ನಂತರ ಗುರುಗಳು ಬಾಯಿ ಬಿಟ್ಟರು. ಪುಸ್ತಕದಲ್ಲಿ ತಪ್ಪೇನೂ ಕಾಣುವುದಿಲ್ಲ. ವಿಚಾರವಾದಿ ಬಸವಣ್ಣನವರ ಬಗ್ಗೆ ಚರ್ಚೆ ನಡೆಯಬೇಕು ಎಂಬ ಅಭಿಪ್ರಾಯ ನೀಡಿದರು. ಜನರಿಗೆ ಸೋಜಿಗವಾಯಿತು. ಎಂಥವರಿಗೂ ಆ ಪುಸ್ತಕದೊಳಗಣ ಪದಗಳು ಕೂರಂಬುಗಳಂತೆ ಇರಿಯುವಾಗ ಮುರುಘಾ ಶ್ರೀಗಳ ಸಮ್ಯಕ್ ದೃಷ್ಟಿಗೆ ಕಾಣಲಿಲ್ಲವೇಕೆ? ಪುಸ್ತಕ ವಿರುದ್ಧ ಚಳುವಳಿ ತೀವ್ರವಾಯಿತು ಆಗ ಮತ್ತೆ ಗುರುಗಳ ಅಶರೀರ ವಾಣಿ. ಯಾವುದಾದರೂ ಪದಗಳು ನೋವುಂಟು ಮಾಡುವವು, ಅಶ್ಲೀಲವಾಗಿದ್ದರೆ ಅವನ್ನು ವಾಪಸು ಪಡೆಯಬಹುದು ಎಂಬ ಆಶೀರ್ವಾಣಿ ಉಲಿಯಿತು. ಅಶ್ಲೀಲ ಪದ, ವಾಕ್ಯ, ಪರಿಕಲ್ಪನೆ ತೆಗೆದರೆ ಬಂಜಗೆರೆಯ ಪುಸ್ತಕಕ್ಕೆ ಅಸ್ತಿತ್ವವಿದ್ದೀತೆ? ಪಾಮರ ಜನ ಕೇಳಲಿಲ್ಲ, ಚಳುವಳಿ ತೀವ್ರವಾಗಿ ಸರ್ಕಾರ ಮುಟ್ಟುಗೋಲು ಆಜ್ಞೆ ಹೊರಡಿಸಿತು.

ಶೂನ್ಯ ಸಿಂಹಾಸನದ ಪ್ರಭಾವ ಎಂಬ ಮುರುಘಾಮಠದ ಒಂದು ಪ್ರಕಟಣೆಯನ್ನು ಬಹುಶಃ ಡಾ|| ಓ.ಎನ್ ಲಿಂಗಣ್ಣಯ್ಯ ಬರೆದುದು ಓದಿದ ನೆನಪು ಕಲ್ಯಾಣ ಕ್ರಾಂತಿಯ ನಂತರ ಶರಣರು ಚದುರಿದಾಗ ಶೂನ್ಯ ಸಿಂಹಾಸನ ಅನಾಥವಾಗಿ ದಿಲ್ಲಿ ಬಾದಶಹನ ಭಂಡಾರ ಸೇರಿತು. ವಾರಸುದಾರರನ್ನು ಹುಡುಕಿ ಆ ಸಿಂಹಾಸನವನ್ನು ಮುರುಘಾಮಠದ ಪೂಜ್ಯರಿಗೆ ತಲ್ಪಿಸಲಾಯಿತು. ವಾದಕ್ಕಾಗಿಯಾದರೂ ಒಪ್ಪೋಣ. ಅಂಥ ಬೆಳ್ಳಿಯ ಸಿಂಹಾಸನ ಪಡೆದ ಋಣಕ್ಕಾದರೂ ಮುರುಘಾಮಠ ಬಸವಾದಿ ಪ್ರಮಥರ ಗೌರವ ರಕ್ಷಣೆಗೆ ನಿಲ್ಲಬೇಕಲ್ಲವೆ? ಇವರ ಅಂತರಾತ್ಮ ಏಕೆ ಸರಿಯಾಗಿ ಮಾರ್ಗದರ್ಶನ ಮಾಡದು? ಆಯ್ಕೆಯ ಪ್ರಸಂಗ ಬಂದಾಗ ಏಕೆ ಸತ್ಯವನ್ನು, ತತ್ತ್ವವನ್ನು ಆಯ್ದುಕೊಳ್ಳುವುದಿಲ್ಲ?

3. ಗದಗಿನ ತೋಂಟದಾರ್ಯ ಸ್ವಾಮಿಗಳು

ವಿರಕ್ತ ಮಠಗಳಲ್ಲಿ ಪ್ರಮುಖ ಮಠಗಳಾದ ಚಿತ್ರದುರ್ಗ ಮತ್ತು ಗದಗಿನ ಮಠಾಧೀಶರು ಕಂಯ್ಯ್, ಕುಂಯ್ ಅನ್ನದೆ ಕುಳಿತದ್ದು ಎಲ್ಲರಲ್ಲೂ ಕುತೂಹಲ ಹುಟ್ಟಿಸಿತ್ತು ಮತ್ತು ಜನರಲ್ಲಿ ಕೋಪವನ್ನು ತರಿಸಿತು. ಚಿತ್ರದುರ್ಗ ಶ್ರೀಗಳು ಮಾದಾರ ಚನ್ನಯ್ಯ ಸ್ವಾಮಿಗಳ ಮೂಲಕ ಬಾಯಿಬಿಟ್ಟರು. ಎರಡನೆಯ ಸಲ ಮೂರನೆ ಸಲ ಬಾಯಿ ಬಿಡುವುದರೊಡನೆ ಒಳಗಿನ ಬಣ್ಣ ಬಯಲಾಯಿತು. ಗದಗಿನ ಶ್ರೀಗಳು ಮಾತ್ರ ತುಟಿ ಬಿಚ್ಚಲಿಲ್ಲ. ಅವರ ಕೀಲಿ ಕೈ ಎಂ.ಪಿ.ಪ್ರಕಾಶ್ ಎಂಬುದು ನಮಗೆಲ್ಲ ಗೊತ್ತಿರುವ ಸಂಗತಿ. ಮಠದಲ್ಲಿ ಒಂದು ಶಿವಾನುಭವ ನಡೆದಾಗ ಆಶೀರ್ವಚನದಲ್ಲಿ ಆನು ದೇವಾ ಪುಸ್ತಕದಲ್ಲಿ ತಪ್ಪೇನೂ ಇಲ್ಲ; ಆತ ಇದನ್ನೇ ನಿರ್ಧಾರ ಎಂದು ಹೇಳಿಲ್ಲ; ಸಂಭಾವ್ಯ ಸತ್ಯ ಎಂದಿದ್ದಾನೆ ಎಂದು ಹೇಳಿದರಂತೆ. ನಮ್ಮೆಲ್ಲರ ಪ್ರಾಣವಾದ ಗುರು ಬಸವಣ್ಣನವರ ನಿಂದೆ ಕೇಳಿ ನಾವು ಅಕ್ಷರಶಃ ಕಣ್ಣೀರು ಸುರಿಸಿದ್ದುಂಟು. ಡಾ|| ಹೆಚ್.ಚಂದ್ರಶೇಖರ್, ರಾಜಶೇಖರ್ ಚಂದನ ಗೌಡರು 8 ದಿವಸ ನಿದ್ರೆ ಮಾಡಿಲ್ಲ. ಸಾಮಾನ್ಯ ಶರಣರು ನೊಂದು ಆಘಾತಗೊಂಡಿದ್ದಾರೆ. ಹೀಗಿರುವಾಗ ಗದುಗಿನ, ಚಿತ್ರದುರ್ಗದ ಶ್ರೀಗಳಿಗೆ ಏನೂ ವ್ಯಥೆಯಾಗದಷ್ಟು ಭಾವಶೂನ್ಯರೆ, ಕಲ್ಲು ಮನಸ್ಸಿನವರೆ! ಅವರಿಗೆ ಮೋಕ್ಷವನ್ನು ದಯಪಾಲಿಸುಥವರು ಎಂ.ಪಿ.ಪ್ರಕಾಶರೆ? ಚಂಪಾರಂತಹ ಸಾಹಿತಿಗಳೆ?

ಬೆಳಗಾವಿಯ ನಾಗನೂರು ಮಠದ ಪೂಜ್ಯ ಸಿದ್ಧರಾಮ ಸ್ವಾಮಿಗಳು, ಪೂಜ್ಯ ಬಸವ ಪ್ರಭು ಸ್ವಾಮಿಗಳು, ಇಳಕಲ್ಲಿನ ಪೂಜ್ಯ ಮಹಾಂತಪ್ಪಗಳು, ಬಾಗಲಕೋಟೆಯ ಚರಂತಿ ಮಠದ ಪೂಜ್ಯ ಪ್ರಭು ಸ್ವಾಮಿಗಳು, ಭಾಲ್ಕಿಯ ಪೂಜ್ಯ ಬಸವ ಲಿಂಗ ಪಟ್ಟಾಧ್ಯಕ್ಷರು, ಬಿಜಾಪುರದಲ್ಲಿನ ಕೆಲವು ಸ್ವಾಮಿಗಳವರು ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡರು. ಸಮಯ ನೋಡಿಕೊಂಡು ಚತುರ ಮತಿಗಳಾದ ಬಾಳೆ ಹೊನ್ನೂರು ಮಠದ

ಪೂಜ್ಯ ಸೋಮೇಶ್ವರ ಸ್ವಾಮಿಗಳು (ಮೊದಲು ವ್ಯತಿರಿಕ್ತ ಹೇಳಿಕೆ ಕೊಟ್ಟರು. ನಂತರ ಚಾಣಾಕ್ಷತನದಿಂದ) ಪುಸ್ತಕದ ವಿರುದ್ಧವಾಗಿ ಹೇಳಿಕೆ ಕೊಟ್ಟರು. ಚಿತ್ರದುರ್ಗ, ಗದಗದವರು ಜನರ ಕಣ್ಣಲ್ಲಿ ಖಳನಾಯಕರಾದರು. ರಂಭಾಪುರಿ ಶ್ರೀಗಳಂತೆ ಚಾಣಾಕ್ಷತನವನ್ನು ಪ್ರದರ್ಶಿಸದೆ ಯಶಸ್ಸು ಹತ್ತಿರದಲ್ಲಿದೆ ಎನ್ನುವಾಗ (ಬಹುಶಃ ಎಂ.ಪಿ.ಪ್ರಕಾಶರ ಆದೇಶದ ಮೇರೆಗೆ ಇರಬಹುದು) ಪುಸ್ತಕದ ಲೇಖಕರ ಪರವಾಗಿ ಹೇಳಿಕೆ ನೀಡಿ ಆಕೃತಿಯಲ್ಲಿ ಹುಲಿ, ಮಾತಿನಲ್ಲಿ ನರಿ ಎಂಬುದನ್ನು ತೋರಿಸಿಕೊಂಡರು. ಮಠಾಧಿಪತಿಗಳಾಗಿ ತಮ್ಮ ಸಾಮಾಜಿಕ ಹೊಣೆ, ಧಾರ್ಮಿಕ ಕರ್ತವ್ಯ ಏನೆಂಬುದನ್ನು ಅರಿಯದೆ ವರ್ತಿಸಿದ ಅಜ್ಞಾನಿಗಳಾದರು.

4. ಮತಾಂಧ ವಿಚಾರವಾದಿಗಳು

ಈ ಉಪ ಶೀರ್ಷಿಕೆ ನೋಡಿ ಓದುಗರು ಗಾಬರಿಯಾಗಬಹುದು. ನನಗೆ ಪದಗಳ ಪ್ರಯೋಗ ಗೊತ್ತಿಲ್ಲವೆಂದು ಭಾವಿಸಬಹುದು. ಏಕೆಂದರೆ ವಿಚಾರವಾದಿಗಳು ತಾವು ಮತಾಂಧತೆಯ ವಿರುದ್ಧ ಹೋರಾಡುವ ಪ್ರಗತಿಪರರು, ಜಾತ್ಯತೀತತೆಯ ಸಂರಕ್ಷಕರು ಎಂದು ಭಾವಿಸಿಕೊಂಡು ಬಿಟ್ಟಿದ್ದಾರೆ. ಮತ ಎಂದರೆ ಧಾರ್ಮಿಕ ಪಂಥ ಎಂಬುದು ಒಂದು ಅರ್ಥವಾದರೆ ಮತ ಎಂದರೆ ಅಭಿಪ್ರಾಯ ಎಂದೂ ಅರ್ಥ. ತಮ್ಮ ಮೂಗಿನ ನೇರಕ್ಕೆ ಮಾತನಾಡುವವರನ್ನು ಸತ್ಯದ ಪ್ರತಿಪಾದಕರೆಂದು ಅದಕ್ಕೆ ಭಿನ್ನವಾದ ವಿಚಾರಧಾರೆ ಹೊಂದಿದವರೆಲ್ಲ ಧರ್ಮಾಂಧರೆಂದು ಈ ಅಭಿ "ಮತ" ಹೊಂದಿದ ಸಾಹಿತಿಗಳು ನಿರ್ಧರಿಸಿ ಬಿಟ್ಟಿದ್ದಾರೆ.

ಇವರ ಸಾಲಿನಲ್ಲಿ ಪ್ರಮುಖರು ಚಂದ್ರಶೇಖರ್ ಪಾಟೀಲ್, ಯು.ಆರ್.ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಕೆ.ಮರುಳಸಿದ್ಧಪ್ಪ, ಇಂದುಧರ ಹೊನ್ನಾಪುರ ಮುಂತಾದವರು. ತಮ್ಮನ್ನು ನಿಂದಿಸಿದರೆಂದು ಚಂಪಾ ಮತ್ತು ಯು.ಆರ್.ಅನಂತ ಮೂರ್ತಿ ಉಭಯತರು ನಾಯಿ-ನರಿ, ಹಾವು-ಹದ್ದು ಎಂದೆಲ್ಲ ಪರಸ್ಪರ ಬೈದಾಡಿಕೊಂಡರು. ಇವರ ಆತ್ಮಾಭಿಮಾನಕ್ಕೆ ಧಕ್ಕೆ ಬಂದುದಕ್ಕೆ ಇಷ್ಟು ಬೈದಾಡಿಕೊಂಡು ಮದಿಸಿದ ಗೂಳಿಗಳಂತೆ ಪತ್ರಿಕೆಗಳಲ್ಲಿ ಕಾಳಗ ಮಾಡಿದರು. ತಮ್ಮ ಧರ್ಮಗುರುವಿನ ನಿಂದೆಯನ್ನು ಅನುಯಾಯಿಗಳು ಏಕೆ ಸಹಿಸಬೇಕು? ಸಾಹಿತಿಗಳಿಗೆ ಯಾರನ್ನು ಬೇಕಾದರೂ ನಿಂದಿಸುವ ಹಕ್ಕಿದೆಯೆ?

ವಿಕ್ರಾಂತ ಎಂಬ ವಾರ ಪತ್ರಿಕೆಯಲ್ಲಿ (3-8-2007, 50ನೆಯ ಸಂಚಿಕೆ) ಕೆ.ಮರುಳು ಸಿದ್ಧಪ್ಪ ಎಂಬ ಸಾಹಿತಿ (ಪುಟ 8) ಬರೆಯುತ್ತಾರೆ. "ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಲ್ಲಿರುವ ಒಂದು ಕೋಟಿಗಿಂತ ಹೆಚ್ಚಿರುವ ಲಿಂಗಾಯತರನ್ನು ಪ್ರತಿನಿಧಿಸೋಕೆ ಈ ಖಂಡ್ರೆ, ಮಾತೆ ಮಹಾದೇವಿಗಳೆಲ್ಲ ಯಾರು? ಬಸವಣ್ಣನ ವಚನಗಳನ್ನೇ ಕದ್ದ ಮಾತೆ ಮಹಾದೇವಿ ಮೇಲೆ ಮೊದಲು ಕ್ರಮ ತೆಗೆದುಕೊಳ್ಳಬೇಕು............"

ಎಷ್ಟೇ ಕೋಟಿ ಜನರಿರಬಹುದು ಯಾರ ಮಾತಿಗೆ ಗೌರವ ಕೊಟ್ಟು ಜನರು ಚಳುವಳಿಯನ್ನು ಅನುಸರಿಸುವರೋ ಅವರೇ ನಾಯಕರು. ನಾಯಕತ್ವ ಕೊಡಲ್ಪಡುವುದಿಲ್ಲ ತನ್ನ ಕಾರ್ಯ ಸಾಧನೆಯಿಂದ ಜನಪ್ರಿಯತೆ ಗಳಿಸಿಕೊಳ್ಳಬೇಕು. ಈ ದಿಶೆಯಲ್ಲಿ ಬಸವ ಧರ್ಮ ಪೀಠ ಲಿಂಗಾಯತ ಸಮಾಜದ ಸಚೇತಕ ಶಕ್ತಿಯಾಗಿ, ಬಸವಾನುಯಾಯಿಗಳ ಆಶಾಕಿರಣವಾಗಿ, ವೀರಶೈವ ಮಹಾಸಭೆ ವೀರಶೈವರ ಪ್ರತಿನಿಧಿಯಾಗಿ ಹೊಮ್ಮಿದರೆ ಇದಕ್ಕೇಕೆ ಮರುಳು ಸಿದ್ಧಪ್ಪನವರಿಗೆ ಸಂಕಟವಾಗಬೇಕು?

ಈ ವಿಚಾರವಾದಿಗಳು- ಇಂಥ ಕೆಲವರನ್ನು ವಿಕಾರವಾದಿಗಳು/ವಿತಂಡವಾದಿಗಳು ಎಂದು ನಾನು ಕರೆಯುತ್ತೇನೆ. ಇವರು ಪೂರ್ವಾಗ್ರಹ ಪೀಡಿತರು ತಮ್ಮ ಮೂಗಿನ ನೇರಕ್ಕೆ ಮಾತನಾಡಿ, ಕಣ್ಣಿಗೆ ಪಟ್ಟಿ ಕಟ್ಟಿದ ಕುದುರೆಯಂತೆ ಸಾಗುವವರು. ಇವರು ತಾವು ನಂಬಿದ್ದನ್ನು ಕಕ್ಕುವರೇ ವಿನಾ ಸತ್ಯವನ್ನು ತಿಳಿಯಲು ಅಸಮರ್ಥರಾದವರು. ನಾನು ಬಸವಣ್ಣನವರ ವಚನಗಳನ್ನು ಕದ್ದಿದ್ದೇನೆಂದು ಬರೆದಿರುವರು. ಇವರ ಜ್ಞಾನ ಎಷ್ಟೊಂದು ಆಳವಿಲ್ಲದ್ದು (shallow) ಎಂದು ಇದರಿಂದ ತಿಳಿಯುತ್ತದೆ. ಬಸವ ವಚನ ದೀಪ್ತಿ -ಪುಸ್ತಕದ ಹೆಸರು. ಬಸವಣ್ಣನವರ ಸಮಗ್ರ ವಚನಗಳ ಸಂಗ್ರಹ ಎಂದೇ ಪುಸ್ತಕದ ಮೇಲೆ ಬರೆದಿರುವುದು. ಅಂದಾಗ ಈ ಮರುಳು ಸಾಹಿತಿಗೆ ಪುಸ್ತಕದ ಮುನ್ನುಡಿ ಸಹ ಓದುವ ಸೌಜನ್ಯವಿಲ್ಲ. ಆನು ದೇವಾ ಪುಸ್ತಕದ ಬಗ್ಗೆ ಸಂವಾದ, ಚರ್ಚೆಯಾಗಲಿ ಎಂದು ಉದಾರತೆಯನ್ನು ತೋರಿದ ಎಂ.ಪಿ.ಪ್ರ, ಶಿವಮೂರ್ತಿ ಸ್ವಾಮಿ, ಗದಗಿನ ಸ್ವಾಮಿಗಳು, ಈ ಮರುಳು ಸಿದ್ಧಪ್ಪನಂಥವರು "ಲಿಂಗದೇವ " ಪರಿಕಲ್ಪನೆ (Concept) ಯನ್ನು

ವಿವರಿಸುತ್ತೇನೆ ಎಂದರೂ ಅವಕಾಶಕೊಡದೆ ಇಂದಿಗೂ ಟೀಕಿಸುತ್ತಿದ್ದಾರೆ. ಇಲ್ಲಿ ವ್ಯಕ್ತಿದ್ವೇಷವಿದೆಯೇ ವಿನಾ ಪುಸ್ತಕದ ಬಗ್ಗೆ ವಿಶ್ಲೇಷಣೆಯಿಲ್ಲ.

1. ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ
2. ಲಿಂಗದೇವನ ಪೂಜಿಸಿ ಕುಲವನರಸುವರೆ?

ಗುರು ಬಸವಣ್ಣನವರು ಸೃಷ್ಟಿಕರ್ತನಿಗಿಟ್ಟ ಹೆಸರು ಲಿಂಗದೇವ, ಅಂಗದ ಮೇಲೆ ಧರಿಸಿ ಲಿಂಗಾಯತರು ಪೂಜಿಸುವುದೇ ಲಿಂಗದೇವರನ್ನು. ಲಿಂಗಾಯತ ಧರ್ಮದ ದೇವರ ಹೆಸರೇ "ಲಿಂಗದೇವ". ಎಂಥಾ ಅದ್ಭುತ ಒಂದು ಪದವನ್ನು ಗುರು ಬಸವಣ್ಣನವರ ವಚನಗಳ ಗಣಿಯಿಂದ ವಜ್ರದಂತೆ ತೆಗೆದುಕೊಟ್ಟರೆ ಅದನ್ನು ಅರ್ಥ ಮಾಡಿಕೊಳ್ಳದೆ ಮರ್ಕಟನ ಕೈಲಿ ಸಿಕ್ಕ ಮಾಣಿಕ್ಯದಂತೆ ಮಾಡಿದರು. ಪವಿತ್ರಾತ್ಮ ಬಸವಣ್ಣನವರನ್ನು ಮಾದಾರ ಜಾತಿಯವನು, ದೇವರ ಸಂತಾನ, ಗಂಡು ಬಸವ ಇತ್ಯಾದಿ ಕೀಳು ಶಬ್ದಗಳಿಂದ ಬರೆದ ಬಂಜಗೆರೆಯ ಪುಸ್ತಕ ಈ ವಿಕಾರವಾದಿ ಸಾಹಿತಿಗಳಿಗೆ ಬಲು ಮಾನ್ಯ ! ಒಂದು ಧರ್ಮದ ದೇವರ ಕಲ್ಪನೆಯನ್ನು ಸಾಣೆ ಹಿಡಿದ ವಜ್ರದಂತೆ ಬಿಂಬಿಸುವ "ಲಿಂಗದೇವ" ಇವರಿಗೆ ಅರ್ಥವಾಗದು.

ಲಿಂಗದೇವ, ಲಿಂಗಾನಂದ ಪದಗಳ ವ್ಯತ್ಯಾಸವರಿಯದ ಮಂದಮತಿಗಳಿವರು. ಇಂಥ ಸಾಹಿತಿಗಳಿಗೇ ಅರ್ಥವಾಗದ ಪರಿಕಲ್ಪನೆ ಕನ್ನಡವೇ ಬರದ ವೀರಶೈವ ಮಹಾಸಭಾಧ್ಯಕ್ಷ ಶ್ರೀಭೀಮಣ್ಣ ಖಂಡ್ರೆಯವರಿಗೆ ಅರ್ಥವಾಗುವುದುಂಟೆ? ಒಂದು ಸಮಾಧಾನಕರ ಸಂಗತಿ ಎಂದರೆ ಬಸವ ವಚನ ದೀಪ್ತಿ ಹೊರಬಂದಾಗ (1996) ಇದ್ದಾಗಿನ ಅಜ್ಞಾನ, ಆಕ್ರೋಶ, ಈಗ ಸಾಕಷ್ಟು ಕರಗಿ ಹೋಗಿ ಹೆಚ್ಚಿನ ಜನರು ಅರ್ಥ ಮಾಡಿಕೊಳ್ಳತೊಡಗಿದ್ದಾರೆ. ಬೇರೆ ರೀತಿಯಲ್ಲಿ ಅಸಹನೆ, ದ್ವೇಷವಿರುವವರು ಇನ್ನೂ ಅರ್ಥ ಮಾಡಿಕೊಂಡಿಲ್ಲ, ಮಾಡಿಕೊಳ್ಳುವುದೂ ಇಲ್ಲ. ಇನ್ನು ಕೆಲವರಿಗೆ ಕೊಂಚ ಕೊಂಚ ಅರ್ಥವಾದರೂ, ಅರ್ಥವಾಗದೆ ಇರುವವರನ್ನು ಎದುರು ಹಾಕಿಕೊಳ್ಳಲು ಧೈರ್ಯವಿರುವುದಿಲ್ಲ.

ವಿಕ್ರಾಂತ ಪತ್ರಿಕೆಯಲ್ಲಿ (ಪುಟ 10) ಶ್ರೀ ಚನ್ನವೀರ ಕಣವಿಯವರ ಬಗ್ಗೆ ಒಬ್ಬರು ವಿಶ್ಲೇಷಿಸಿದ್ದಾರೆ. (ಮಲ್ಲಿ- ಪಿ.ಕೆ.ಮಲ್ಲನಗೌಡರು ಇರಬಹುದು). ಕಣವಿಯವರ ಮಾತುಗಳು: "ಸರಕಾರಕ್ಕೆ ಉಳಿದಿದ್ದೊಂದೇ ಈ ಮುಟ್ಟುಗೋಲು ಮಾರ್ಗ. ಇದೊಂದು ಆಧಾರಗಳೇ ಇಲ್ಲದ ನಿರಾಧಾರ ಕೃತಿ. ಸಂಶೋಧನೆಗೆ ಒಳಪಡದ ವಿಷಯಗಳಿವೆ, ಇಲ್ಲಿ ಅನುಮಾನಗಳಿವೆ. ಸಾರ್ವಜನಿಕರ ಭಾವನೆಗಳನ್ನು ಗೌರವಿಸುವುದು ಸರ್ಕಾರದ ಕರ್ತವ್ಯ. ಕುವೂರಸ್ವಾಮಿ ಮತ್ತಿತರರೆಲ್ಲ ಅನಕ್ಷರಸ್ಥರೇನಲ್ಲ ಅವರೂ ಓದಿದ್ದಾರೆ. ಅವರಿಗೆ Convince ಆಗಿರುವುದರಿಂದ ಮುಟ್ಟುಗೋಲು ಹಾಕಿದ್ದಾರೆ."

ಈ ಮಾತುಗಳನ್ನು ವಿಶ್ಲೇಷಿಸಿ ಸಿಕ್ಕಾಪಟ್ಟೆ ಬರೆದು, ಶ್ರೀ ಚನ್ನವೀರ ಕಣವಿಯಂತಹ ಸೌಮ್ಯವಾದಿ, ಸಮನ್ವಯ ಕವಿಯನ್ನು ಸಹ ಮೂಲಭೂತವಾದಿಯನ್ನಾಗಿ ಮಾಡುವ ಹುನ್ನಾರ ತೋರಿದ್ದಾರೆ. ಈ ಲೇಖನವನ್ನು ಹೀಗೆ ಕೊನೆಗೊಳಿಸಿದ್ದಾರೆ, "ನಾವು ಮಾತನಾಡುತ್ತಿರುವುದು ಖಂಡ್ರೆಯವರ ಜೊತೆಗೋ ಚನ್ನವೀರ ಕಣವಿಯವರ ಜೊತೆಗೋ ಎಂದು ಒಂದು ಕ್ಷಣ ಅನುಮಾನವಾಯಿತಾದರೂ, ಅಪ್ಪಟ ಲಿಂಗಾಯತ ಸಾಹಿತಿಗಳನೇಕರು ಪಟ್ಟ ಭದ್ರ ಶಕ್ತಿಗಳ ದೌರ್ಜನ್ಯವನ್ನು ಸಹಿಸುತ್ತಲೇ ಇರುವುದು ನೆನಪಾಗಿ ಬೇಸರವೆನಿಸಿತು"

ಇದು ಒಂದು ರೀತಿ ವಿಚಾರವಾದಿಗಳು ಮಾಡುವ ದೌರ್ಜನ್ಯವಲ್ಲವೆ? ಚಂಪಾ ಮುಂತಾದವರ ಮೂಗಿನ ನೇರಕ್ಕೆ ಮಾತನಾಡಿದರೆ ಅವರು ಪ್ರಗತಿಪರರು !ಧರ್ಮದ ಪರವಾಗಿ ಮಾತನಾಡಿದರೆ ಮೂಲಭೂತವಾದಿಗಳು !! ಧರ್ಮದ ಬಗ್ಗೆ ಸಹಾನುಭೂತಿಯಿಂದ, ಶ್ರೀ ಚನ್ನವೀರ ಕಣವಿಯವರಂತೆ ಮಾತನಾಡಿದರೆ ಅವರು ಪಟ್ಟಭದ್ರ ಶಕ್ತಿಗಳ ದೌರ್ಜನ್ಯವನ್ನು ಸಹಿಸಿಕೊಳ್ಳುವ ನಿಸ್ಸಹಾಯಕರು !!! ಪಾಟೀಲ್ ಪುಟ್ಟಪ್ಪನವರ ಬಗ್ಗೆಯೂ ಇದೇ ರೀತಿ ಟೀಕಿಸಿದರು. ಈ ಲೇಖಕರದು ಎಂಥಾ ಉದ್ಧಟತನ ನೋಡಿದಿರಾ?

ಚಂಪಾ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

ಧಾರವಾಡದಲ್ಲಿ ಒಮ್ಮೆ ಪ್ರವಚನ ಮಾಡುತ್ತಾ ಪ್ರವಚನಗಳ ಕೆಸೆಟ್ಟು ಮಾಡಿದೆವು. ಕಡಪಾ ಮೈದಾನ, ಮೇನ್ ರೋಡ್ ಪಕ್ಕ ವಾಹನಗಳ ವಿಪರೀತ ಗದ್ದಲ. ನನಗೋ ಜನರ ಮುಂದೆ ಪ್ರವಚನ, ಸೌಂಡ್

ಪ್ರೂಫ್ ರೆಕಾರ್ಡಿಂಗ್ ರೂಂನಲ್ಲಿ ಮಾಡುವುದಕ್ಕಿಂತ ಹೆಚ್ಚು ಪ್ರಿಯ. ಅದಕ್ಕಾಗಿ ಒಂದು ಟೇಬಲ್‌ಗೆ ಗಾಜಿನ ಫ್ರೇಮ್ ಮಾಡಿ, ಮೈಕ್‌ಗೆ ವಾಹನಗಳ ಸದ್ದು ಬರದಂತೆ ಮಾಡಿದ್ದೆವು. ಚಂಪಾ ಈ ಯಾವುದನ್ನೂ ತಿಳಿದು ಕೊಳ್ಳದೆ ಬುಲೆಟ್ ಪ್ರೂಫ್ ಬಾಕ್ಸಿನಲ್ಲಿ ಜೀವ ಭಯದಿಂದ ಪ್ರವಚನ ಮಾಡುತ್ತಿದ್ದಾರೆಂದು ಟೀಕಿಸಿದ್ದರು.

ಸಂವಿಧಾನ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ``ಆನು ದೇವಾ'' ಮುಟ್ಟುಗೋಲಿನಿಂದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ ಎಂದು ಚಂಪಾ ಮತ್ತಿತರರು ಬೊಬ್ಬೆ ಹೊಡೆಯುತ್ತಿದ್ದಾರೆ. ವೋಚರ್ ಜಗನ್ನಾಥ ಎಂಬ ಪುಸ್ತಕವನ್ನು ಶ್ರೀ ಹರಿಕೃಷ್ಣ ಪುನರೂರು ಅವರು ಅಧ್ಯಕ್ಷರಾದಾಗ ಪ್ರಕಟಿಸಲಾಗಿತ್ತು. ಇದರಲ್ಲಿ ಚಂಪಾ ಅವರಿಗೆ ಮುಜುಗರ ತರುವ ವಿವರಗಳಿದ್ದವು. ಚಂಪಾ ಅಧ್ಯಕ್ಷರಾಗುತ್ತಲೇ ಮಾಡಿದ ಮೊದಲನೆ ಕೆಲಸ ``ವೋಚರ್ ಜಗನ್ನಾಥ'' ಪುಸ್ತಕವನ್ನು ಚಲಾವಣೆಯಿಂದ ಹಿಂಪಡೆದುದು. ಆಗೆಲ್ಲಿ ಹೋಗಿತ್ತು ಚಂಪಾರ ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಜ್ಞೆ!

ಸಮಾಜ ಜಾಗೃತ ಸ್ಥಿತಿಯಲ್ಲಿರಬೇಕು

ಒಬ್ಬ ಸಾಮಾನ್ಯ ಲೇಖಕ ಧರ್ಮಗುರು ಬಸವಣ್ಣನವರ ಚರಿತ್ರೆ ಮತ್ತು ಚಾರಿತ್ರ್ಯ ವಧೆ ಮಾಡಿದ ಒಂದು ಕ್ಷುಲ್ಲಕ ಪುಸ್ತಕವನ್ನು ನಿಷೇಧಿಸಲು ಸರ್ಕಾರದ ಕಣ್ತೆರೆಸಲು ಒಂದು ದೊಡ್ಡ ಸಮಾಜಕ್ಕೆ 3 ತಿಂಗಳು 9 ದಿವಸ ಬೇಕಾದುದು ನಾಚಿಕೆಗೇಡಿನ ಸಂಗತಿ. ಲಿಂಗಾಯತ ಸಮಾಜದೊಳಗಣ ಅನೈಕ್ಯತೆ, ವಿಚಾರ ಭಿನ್ನಾಭಿಪ್ರಾಯಗಳು, ಒಳಪಂಗಡಗಳ ಸಂಘರ್ಷ, ಬಹುಪಾಲು ಜನರ ನಿರಭಿಮಾನ - ನಿರಾಸಕ್ತಿ ಈ ವಿಳಂಬಕ್ಕೆ ಕಾರಣ. ಇನ್ನು ಮುಂದೆ ಹೀಗೆ ಆಗಬಾರದು. ಸಮಾಜ ಜಾಗೃತ ಸ್ಥಿತಿಯಲ್ಲಿರಬೇಕು. ಅನಾಥ ಮಕ್ಕಳನ್ನು ಬೀದಿಯಲ್ಲಿ ಎಲ್ಲರೂ ಬಡಿದುಕೊಂಡು ಓಡಾಡುವಂತೆ ಬಸವಾದಿ ಪ್ರಮಥರು, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ ಮುಂತಾದವರ ಬಗ್ಗೆಯೇ ಪುನಃ ಪುನಃ ಸಾಹಿತಿಗಳು ಬರೆಯುವುದು ಏಕೆ ? ಈ ಪಾಪ ಕಾರ್ಯಕ್ಕೆ ಸಮಾಜದ ನಿರಭಿಮಾನವೇ ಕಾರಣವಾಗುವುದಲ್ಲವೆ? ಇನ್ನು ಮುಂದೆ ಸಾಹಿತಿಗಳು ಈ ಕುಚೋದ್ಯತನ ಪ್ರದರ್ಶಿಸುವ ದಾರ್ಷ್ಟ್ಯ ತೋರದಂತೆ ಸಮಾಜವು ಎಚ್ಚರಿಕೆ ವಹಿಸುವುದು ಮಾತ್ರವಲ್ಲ ಸಂಘಟಿತ ಮತ್ತು ಜಾಗೃತ ಸ್ಥಿತಿಯಲ್ಲಿ ಇರಬೇಕು.

ಶ್ರೀ ಪ್ರೊ. ಡಾ|| ಮುದಿಗೊಂಡ ಶಿವಪ್ರಸಾದ



ಡಾ.ಮುದಿಗೊಂಡ ಶಿವಪ್ರಸಾದ ತೆಲಗು ಸಾಹಿತ್ಯದಲ್ಲಿ ಖ್ಯಾತ ನಾಮರು. ದಿ 23-12-1940 ರಂದು ಜನಿಸಿದ ಇವರು ಎಂ.ಎ.ಪಿಹೆಚ್.ಡಿ ಮಾಡಿಕೊಂಡು, ತೆಲುಗು ಪ್ರಾಧ್ಯಾಪಕರಾಗಿ ಉಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಕಾಯಕ ಮಾಡಿದ್ದಾರೆ. ಸ್ವತಃ 30 ಪುಸ್ತಕಗಳನ್ನು ಬರೆದ ಇವರು ರಾಷ್ಟ್ರಕವಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಇವರ ಮಾರ್ಗ-ದರ್ಶನದಲ್ಲಿ 25 ಜನ ಅಭ್ಯರ್ಥಿ ಗಳು ಎಂ.ಫಿಲ್ ಮತ್ತು ಡಾಕ್ಟರೇಟ್ ಪದವಿಗಳನ್ನು ಪಡೆದುಕೊಂಡಿದ್ದಾರೆ. ಬ್ರಿಟನ್, ಜರ್ಮನಿ, ಯು.ಎಸ್.ಎ.ಗಳಲ್ಲಿ ಸಂಚರಿಸಿ, ತತ್ವಜ್ಞಾನ ಮತ್ತು ಸಾಹಿತ್ಯ ಕುರಿತು ನೂರಾರು ಉಪನ್ಯಾಸ ನೀಡಿದ್ದಾರೆ. ಅಥೆನ್ಸ್ ಅಕ್ಯಾಡಮಿ ಇಂಟರ್ ನ್ಯಾಷನಲ್ ಎಂಬ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯನ್ನು ಹೈದರಾಬಾದಿನಲ್ಲಿ ಸ್ಥಾಪಿಸಿ, ಸಂಸ್ಥಾಪಕ ಅಧ್ಯಕ್ಷರಾಗಿ ಭಾರತ ಮತ್ತು ಗ್ರೀಕ್ ರಿಪಬ್ಲಿಕ್ ಮಧ್ಯೆ ಸ್ನೇಹ ಸೇತುವೆ ನಿರ್ಮಿಸಲು ಕಾರಣರಾಗಿದ್ದಾರೆ.

ಇವರ ಪತ್ನಿ ಶ್ರೀಮತಿ ಡಾ|| ಉಮಾದೇವಿ ಪಾಲ್ಕುರಿಕೆ ಸೋಮನಾಥನ ಕೃತಿಯ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದರೆ, ಶ್ರೀ ಡಾ|| ಮುದಿಗೊಂಡ ಶಿವಪ್ರಸಾದ್ ವಿಶ್ವಗುರು ಬಸವಣ್ಣನವರ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದು ಅವರು ಬರೆದ ಕಲ್ಯಾಣ ವಿಜಯಂ ಎಂಬ ಪುಸ್ತಕ ಕಾಲೇಜಿನಲ್ಲಿ ಪಠ್ಯವಾಗಿತ್ತು.

ಇಂತಹ ಮಹನೀಯರು ಬಸವ ಪಂಚಮಿಯ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗಿಗಳಾಗುತ್ತಿದ್ದು ಅವರನ್ನು ಸನ್ಮಾನಿಸಲಾಗುತ್ತಿದೆ.

ಅಭಿನಂದನೀಯ ಹೋರಾಟಗಾರ ಶ್ರೀ ದಯಾನಂದ ಸ್ವಾಮೀಜಿ

-ಮಾತಾಜಿ

ಕೆಲವೊಮ್ಮೆ ಸುಳ್ಳಿನ ಅಬ್ಬರದಲ್ಲಿ, ಕೀರ್ತಿಗಾಗಿ ಹಪಾಪಿಸುವ ಜನರ ಭರಾಟೆಯಲ್ಲಿ ನಿಜವಾಗಿ ದುಡಿದವರು ತೆರೆಯ ಹಿಂದೆ ಸರಿಸಲ್ಪಡುತ್ತಾರೆ; ಕೆಲವೊಮ್ಮೆ ಅವಮಾನಿಸಲ್ಪಡುತ್ತಾರೆ. ಮೌಲ್ಯಗಳ ಉಳುವಿಗಾಗಿ ಏನಾದರೂ ಹೋರಾಟ ಮಾಡಬೇಕೆಂದರೆ ತಟ್ಟನೆ ನೆನಪಾಗುವುದು ಪೂಜ್ಯ ದಯಾನಂದ ಸ್ವಾಮಿಗಳು.

ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಾಗಿ ಶ್ರೀ ಐ.ಎಂ.ಮಗದುಮ್ ಇರುವ ತನಕ ಶ್ರೀ ದಯಾನಂದ ಸ್ವಾಮಿಗಳ ಪ್ರತಿಭೆ ಮತ್ತು ಕ್ರಿಯಾಶೀಲತೆಯನ್ನು ಚನ್ನಾಗಿ ಬಳಸಿಕೊಂಡರು. ಅವರು ದಿವಂಗತರಾದ ಮೇಲೆ ಮಹಾಸಭೆಯವರು ಅಷ್ಟೊಂದು ಆತ್ಮೀಯತೆ ತೋರಲಿಲ್ಲವಾಗಿ ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘದ ಮುಖ್ಯಸ್ಥರು ಸಾರ್ಥಕವಾದ ರೀತಿಯಲ್ಲಿ ಶ್ರೀ ದಯಾನಂದ ಸ್ವಾಮಿಗಳ ಸೇವೆಯನ್ನು ಬಳಸಿಕೊಂಡರು. ಜೈನ್ ಸಮಾಜದ ಮುಖಂಡರ ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿ ಮೆಚ್ಚುವಂಥದು. ಶ್ರೀ ಉತ್ತಮ್ ಚಂದ್ ದುಗ್ಗಡ್, ಶ್ರೀ ಉತ್ತಮ ಚಂದ ಚಾಜೆಡ್, ವಯೋವೃದ್ಧ ಶ್ರೀಗೋಯಂಕಾ ಮುಂತಾದವರು ಅಲ್ಲಿಯ ಮುಖ್ಯಸ್ಥರು.

ಕರ್ನಾಟಕ ಸರ್ಕಾರ ಶಾಲಾ ಮಕ್ಕಳಿಗೆ ಬಿಸಿಯೂಟದಲ್ಲಿ ಕೋಳಿ ಮೊಟ್ಟೆ ಕೊಡುವ ಯೋಜನೆ ರೂಪಿಸಿದಾಗ ನನಗೆ ತುಂಬಾ ಆಘಾತವಾಯಿತು. ಏನು ಮಾಡಲಿ ಎಂದು ಚಟಪಟಿಕೆ. ದಯಾನಂದ ಸ್ವಾಮಿಗಳನ್ನು ಮಾತನಾಡಿಸಿ ಬಹಳ ಕಾಲವಾಗಿತ್ತು. ಫೋನ್ ಮಾಡಿ, ಇಂಥ ಸಮಸ್ಯೆ ಮೇಲೆರಗಿದೆ. ಇಂಥ ಅಧಃಪತನ ನೋಡಿಕೊಂಡು ಸುಮ್ಮನೆ ಹೇಗಿರುವುದು? ದಯಾನಂದ ಸ್ವಾಮಿ ಜೈನ್ ಸಮಾಜದ ಮುಖಂಡರೊಡನೆ ಮಾತನಾಡಿದರು. ಅವರು ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದರು. ಉಭಯ ಸಂಸ್ಥೆಗಳ ಜೊತೆಗೆ ಸುಮಂಗಲಿ ಸೇವಾಶ್ರಮ, ಅಕ್ಕಮಹಾದೇವಿ ಸಮಾಜದವರು ಸಹ ಸೇರಿದರು. ಧರಣಿ ಸತ್ಯಾಗ್ರಹ, ಪ್ರತಿಭಟನಾ ಮೆರವಣಿಗೆ ಎಲ್ಲ ಮಾಡಲಾಯಿತು. ಸರ್ಕಾರವು ಕೋಳಿ ಮೊಟ್ಟೆ ಕೊಡುವ ಯೋಜನೆ ಕೈಬಿಟ್ಟಿತಲ್ಲದೆ ನಮ್ಮ ಮನವಿಯಲ್ಲಿ ಕಾಣಿಸಿದ್ದ ಎಸ್.ಎಸ್.ಎಲ್.ಸಿ ವರೆಗಿನ ಮಕ್ಕಳಿಗೆ ಸಹ ಬಿಸಿಯೂಟದ ಯೋಜನೆ ವಿಸ್ತರಿಸಿತು. ಜೈನ್ ಸಮಾಜದವರ ಮಾನವೀಯತೆ ಮೆಚ್ಚಿಕೊಳ್ಳುವಂಥದು. ಪ್ರತಿಭಟನಾ ಮೆರವಣಿಗೆ, ಧರಣಿಯಲ್ಲಿ ಭಾಗವಹಿಸಿದ ಎಲ್ಲರಿಗೆ ಕುಡಿಯುವ ನೀರಿನ ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದರು. ನಿರೀಕ್ಷೆಗೆ ಮೀರಿ ನಮ್ಮ ಜನ ಸೇರಿದಾಗ ಮೊದಲೇ ಸಿದ್ಧಪಡಿಸಿದ ಊಟದ ಪ್ಯಾಕೆಟ್ ಮುಗಿದಾಗ, ಬೇಜವಾಬ್ದಾರಿಯಿಂದ ಮುಗಿದು ಹೋಯಿತು ಎಂದು ಕೈ ಜಾಡಿಸದೆ ಹೋಟೆಲ್ಲಿನಿಂದ ತರಿಸಿ ಎಲ್ಲರಿಗೂ ಊಟ ಮಾಡಿಸಿದರು. ಸ್ಪರ್ಧೆಯ ಮೇಲೆ ದಾನಿಗಳು ಊಟದ, ನೀರಿನ ವ್ಯವಸ್ಥೆ ಮಾಡಿದರು. ಯಶಸ್ಸು ದೊರೆತಾಗ ನಮ್ಮನ್ನು, ದಯಾನಂದ ಸ್ವಾಮಿಗಳನ್ನು ಮುಕ್ತಕಂಠದಿಂದ ಕೊಂಡಾಡಿದರು.

ನಂತರ ಆನು ದೇವಾದ ಸಮಸ್ಯೆ ಭುಗಿಲೆದ್ದಿತು. ದಿ. 14-4-2007 ಪುಸ್ತಕ ಬಿಡುಗಡೆಯ ದಿನ ನಮ್ಮ ಆಕ್ಷೇಪ. ದಿ.22ರಂದು ರಾಜಾಜಿನಗರದ ಬಸವ ಮಂಟಪದಿಂದ ನವರಂಗ್ ಸರ್ಕಲ್‌ವರೆಗೆ ಮೆರವಣಿಗೆ, ವೃತ್ತದಲ್ಲಿ ಪ್ರದರ್ಶನ ಮತ್ತು ರಾಸ್ತಾರೋಕ್. ಮೇ 1, 2, 3ರ ಕಲ್ಯಾಣ ಪರ್ವದಲ್ಲಿ ನಿರ್ಣಯ. ಬಸವ ಕಲ್ಯಾಣದಿಂದ ಹಿಂತಿರುಗಿದ ಮೇಲೆ ಚಳುವಳಿ ಕಾವೇರ ತೊಡಗಿತು. ಜೂನ್ 18ರಂದು ಬಸವ ಸರ್ಕಲ್‌ದಲ್ಲಿ ಧರಣಿ ಸತ್ಯಾಗ್ರಹ ಜುಲೈ 5 ರಂದು ಬೃಹತ್ ಪ್ರತಿಭಟನೆ ಮಾಡುವುದಾಗಿ ಘೋಷಿಸಿ ವೀರಶೈವ ಮಹಾಸಭೆಯವರು ಮುಂದೂಡಿದರು. ರಾಷ್ಟ್ರೀಯ ಬಸವ ದಳ ಅಂದು ಬೃಹತ್ ಪ್ರತಿಭಟನಾ ಮೆರವಣಿಗೆ ಮಾಡಿ, ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ನಡೆಸಿತು. ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದರು. ರಾಷ್ಟ್ರೀಯ ಬಸವ ದಳದ ಬ್ಯಾನರ್ ಕೆಳಗೆ ಪ್ರಾರಂಭವಾದ ಚಳುವಳಿಗೆ, ವಿಶ್ವ ಬಸವ ಧರ್ಮ ಮಹಾಸಭಾದ ಪ್ರಧಾನ ಸಂಘಟಕ ಶ್ರೀ ದಯಾನಂದ ಸ್ವಾಮಿಗಳು ಬೆಂಬಲಿಸಿದರು. ಅಂದೇ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ ಮತ್ತು ಶ್ರೀ ಚಂದ್ರಕಾಂತ ಬೆಲ್ಲದ ನಮ್ಮ ವೇದಿಕೆಗೆ ಬಂದರು. ಸುಮಂಗಲಿ ಸೇವಾಶ್ರಮದ ಶೀ.ಎಸ್.ಜಿ.ಸುಶೀಲಮ್ಮನವರು ಬೆಂಬಲಿಸಿದರು. ವೀರಶೈವ ಮಹಾಸಭಾ ಪುಟ್ಟಣ್ಣ ಚೆಟ್ಟಿ ಪುರಭವನದ ಬಳಿ ಅನಿರ್ದಿಷ್ಟಾವಧಿಯ ಧರಣಿ ಸತ್ಯಾಗ್ರಹ ಪ್ರಾರಂಭಿಸಿತು. ದಿ.23 -7- 07 ರಂದು ಸರ್ಕಾರವು ಪುಸ್ತಕವನ್ನು ನಿಷೇಧಿಸಿ ಮುಟ್ಟುಗೋಲು ಆಜ್ಞೆ ವಿಧಿಸಿತು.

ಪೂಜ್ಯ ದಯಾನಂದ ಸ್ವಾಮೀಜಿ ``ಆನು ದೇವಾ'' ಕುಚೋದ್ಯದ ಪುಸ್ತಕವೆಂದು ಅರಿಯುತ್ತಲೇ ಅದರ ಬಗ್ಗೆ ಕಳವಳಗೊಂಡು ಜನಜಾಗೃತಿಗಾಗಿ ಸಂಚಾರ ಹೊರಟರು. ವಿಶ್ವ ಬಸವ ಧರ್ಮ ಮಹಾಸಭಾದಿಂದ ಜಾಗೃತಿ ಯಾತ್ರೆ ಕೈಗೊಂಡು ಬಸವಣ್ಣನವರ ಅಜ್ಜಿಯ ಮನೆ ಇದ್ದ ಇಂಗಳೇಶ್ವರ, ತಂದೆಯ ಮನೆ ಇದ್ದ ಬಾಗೇವಾಡಿ ಮುಂತಾದ ಕಡೆ ತೀವ್ರಗತಿಯಲ್ಲಿ ಸಂಚರಿಸಿ, ಜನರನ್ನು ಜಾಗೃತಿಸಿ, ಸಂಘಟಿಸಿ ಬಂದ್‌ಗಳನ್ನು ಯಶಸ್ವಿಗೊಳಿಸಿದರು.

ಬಿಜಾಪುರಕ್ಕೆ ಬಂದರು. ಅಲ್ಲಿ ಪ್ರಮೋದ್ ಮುತಾಲಿಕ್ ಅವರ ಬೆಂಬಲ ಸಿಕ್ಕಿತು.ರಾಜ್ಯದಾದ್ಯಂತ ಸಂಚರಿಸ ಬೇಕಾಗಿದೆ ಎಂದಾಗ ಬಳ್ಳಾರಿ, ಗುಲಬರ್ಗಾ, ಬೀದರ್ ಕಡೆ ಹೋಗಲು ತಿಳಿಸಿದೆ. ಬಳ್ಳಾರಿಯಲ್ಲಿ ರಾಷ್ಟ್ರೀಯ ಬಸವ ದಳದ ಕಾರ್ಯಾಲಯ ಇದೆ ಹೋಗಿ ಪತ್ರಿಕಾ ಗೋಷ್ಠಿ ಕರೆಯಿರಿ ಎಂದೆ. ಸ್ವಾಮಿಗಳು ಹೋಗಿ ವಿವಿಧ ಸಂಘಟನೆಗಳವರನ್ನು ಸಂಪರ್ಕಿಸಿದಾಗ ಅವರೆಲ್ಲ ಸಂತೋಷದಿಂದ ಪ್ರತಿಭಟಿಸಲು ಸಿದ್ಧರಾದರು. ದಿನಾಂಕವು ಘೋಷಿತವಾಯಿತು. ಅಷ್ಟರಲ್ಲಿ ಮಾದಿಗರ ಸಮಾಜದ ಒಂದು ಸಭೆಯಲ್ಲಿ ಗೃಹ ಸಚಿವ ಎಂ.ಪಿ.ಪ್ರಕಾಶ್ ಹೇಳಿದ ಮಾತು ಬಳ್ಳಾರಿಯ ಜನರನ್ನು ಮಾತ್ರವೇ ಅಲ್ಲದೆ ಇಡೀ ರಾಜ್ಯದ ಲಿಂಗಾಯತರನ್ನು ಕೆರಳಿಸಿತು. ವಾತಾವರಣ ಬಹಳ ಕಾವೇರಿತ್ತು. ಬರೀ ಪುಸ್ತಕದ ಬಗ್ಗೆ ಮಾತನಾಡಿದರೆ ಬಹಳ ಚನ್ನಾಗಿತ್ತು. ಶ್ರೀ ದಯಾನಂದ ಸ್ವಾಮಿಗಳು ದುಡುಕಿ ಗೃಹ ಸಚಿವರ ರಾಜೀನಾಮೆ ಕೇಳಿದರು. ಸಿಂಹವು ಬೇಟೆಯನ್ನು ತಿಂದು ಬಿಟ್ಟಾಗ ಉಳಿದುದನ್ನು ನರಿಗಳು ತಿನ್ನುವಂತೆ ಗೃಹ ಸಚಿವರಾಗಿ ಎಂ.ಪಿ.ಪ್ರಕಾಶ್ ಅನುಭವಿಸುವ ಅಧಿಕಾರದ ಆನಂದವನ್ನು ಅವರ ಚೇಲಾಗಳು, ಸ್ಥಳೀಯವಾಗಿ ಆನಂದಿಸುವರಷ್ಟೆ. ಅಂಥವರು ಪ್ರಕಾಶರನ್ನು ಭೇಟಿಯಾಗಲು, ಅವರು ಗದುಗಿಗೆ ಬರುವವರಿದ್ದ ಕಾರಣ, ಅಲ್ಲಿಗೆ ಹೋದರು. ಆಗ ಪ್ರಕಾಶ್ ಅವರು "ದಯಾನಂದ ಸ್ವಾಮಿ ಮಾತೆ ಮಹಾದೇವಿಯವರ ಚೇಲಾ. ಅವರನ್ನೇಕೆ ಬಳ್ಳಾರಿಗೆ ಬಿಟ್ಟುಕೊಂಡಿರಿ?" ಎಂದು ಕೆರಳಿಸಿದರು. ಬಳ್ಳಾರಿಯಿಂದ ಕಳಿಸುವಂತೆ ಅವರ ಅನುಯಾಯಿಗಳಿಗೆ ತಿಳಿಸಿದರು. ಅದೇ ಸಮಯದಲ್ಲಿ ಪುಸ್ತಕದ ವಿರುದ್ಧ ಆಕ್ಷೇಪ ಎತ್ತುವವರಿಗೆ ಪ್ರಕಾಶ್ ಜೊತೆ ಭೇಟಿ ಮಾಡಿಸಿರಿ ಎಂದರೆ ಗದುಗಿನ ಶ್ರೀಗಳು ಭೇಟಿ ಮಾಡಿಸಲು ಅವಕಾಶ ಕೊಡಲಿಲ್ಲವಂತೆ! ಅಂದರೆ ಗದಗಿನ ಶ್ರೀಗಳಿಗೆ ಗುರು ಬಸವಣ್ಣನವರ ಘನತೆಯನ್ನು ಎತ್ತಿ ಹಿಡಿಯುವುದಕ್ಕಿಂತ ಎಂ.ಪಿ.ಪ್ರಕಾಶರ ಮತ್ತು ಬಂಜಗೆರೆ ಜಯಪ್ರಕಾಶರ ಅಭಿಪ್ರಾಯವನ್ನು ಎತ್ತಿ ಹಿಡಿಯುವುದೇ ಮುಖ್ಯವಾಗಿತ್ತು.

ಎಂ.ಪಿ.ಪ್ರಕಾಶರ ರಾಜಕೀಯ ಅಭಿಮಾನಗಳು ಬಳ್ಳಾರಿಗೆ ವಾಪಸು ಬಂದವರೇ ಶ್ರೀ ದಯಾನಂದ ಸ್ವಾಮಿಗಳಿಗೆ ಧಮಕಿ ಹಾಕಿ ಚಳುವಳಿಯ ಜನಜಾಗೃತಿಯಲ್ಲಿ ನಿರತರಾಗಿದ್ದವರನ್ನು ಜೀವ ಬೆದರಿಕೆ ಹಾಕಿ ಬಳ್ಳಾರಿಯಿಂದ ಹೊರಗೆ ಕಳಿಸಿದರು. ಅಲ್ಲಿಂದ ಸೀದಾ ಬಂದ ಅವರು ಜೂನ್ 18ರ ಧರಣಿ ಸತ್ಯಾಗ್ರಹದಲ್ಲಿ ಭಾಗಿಗಳಾದರು. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಹೀಗೆ ಮಾಡಿ ದಯಾನಂದ ಸ್ವಾಮಿಗಳನ್ನು ಚಳುವಳಿಯಿಂದ ದೂರ ಸರಿಸಬೇಕು ಎಂಬುದು ಎಂ.ಪಿ.ಪ್ರಕಾಶ್ ಅವರ ಉದ್ದೇಶವಾಗಿತ್ತು.

ಒಂದು ದಿವಸ ವೀರಶೈವ ಮಹಾಸಭೆಯವರು ನಡೆಸುತ್ತಿದ್ದ ಧರಣಿ ಸತ್ಯಾಗ್ರಹದಲ್ಲಿ ಭಾಗಿಗಳಾಗಲು ಹಲವಾರು ಮಠಾಧೀಶರು ಬೇರೆ ಬೇರೆ ಊರುಗಳಿಂದ ಬಂದಿದ್ದು ಬೆಳಿಗ್ಗೆಯೇ ಎಂ.ಪಿ.ಪ್ರಕಾಶ್ ಅವರನ್ನು ಕಂಡು ಮನವಿ ಸಲ್ಲಿಸಲು ಯೋಜನೆ ರೂಪಿಸಿದರು. ಈ ವಿಷಯ ತಿಳಿದು ನಾನು ಹೇಳಿದೆ, "ಎಂ.ಪಿ.ಪ್ರಕಾಶ್‌ಮನೆಗೆ ನೀವು ಹೋಗಬೇಡಿ. ತುಂಬಾ ಮತ್ಸರ ಬುದ್ಧಿಯ ವ್ಯಕ್ತಿ. ನಿಮ್ಮ ಮೇಲೆ ಭಯಂಕರ ದ್ವೇಷವಿದೆ." ಆದರೆ, ಉಳಿದ ಸ್ವಾಮಿಗಳನ್ನು ಒತ್ತಾಯ ಮಾಡಿ ದಯಾನಂದ ಸ್ವಾಮಿಗಳನ್ನು ಜೊತೆಗೆ ಕರೆದೊಯ್ದಿದ್ದಾರೆ ಇವರನ್ನು ನೋಡುತ್ತಲೇ ಆವೇಶ ಭರಿತರಾಗಿ ಎಂ.ಪಿ.ಪ್ರಕಾಶ್ ಅವರು, ನೀವು ಹಾಕಿರುವ ಕಾವಿಗಾದರೂ ಬೆಲೆ ಬೇಡವೆ? ಸ್ವಲ್ಪ ಶಾಂತಿ ಸಮಾಧಾನ ಕಲಿಯಿರಿ. ನನ್ನ ಕ್ಷೇತ್ರ ಬಳ್ಳಾರಿಗೇ ಬಂದು ನನ್ನ ತೇಜೋವಧೆ ಮಾಡಿದ್ದೀರಾ? ಎಂದು ಕೂಗಾಡಿದ್ದಾರೆ. ದಯಾನಂದ ಸ್ವಾಮಿಗಳು ನಿಜ ಸಂಗತಿ ತಿಳಿಸಬೇಕೆಂದರೆ ಅವಕಾಶ ಕೊಡದಂತೆ ಕೂಗಾಡಿದಾಗ ಉಳಿದ ಸ್ವಾಮಿಗಳು ಶಾಂತಿ ಎಂದು ದಯಾನಂದ ಸ್ವಾಮಿಗಳು ಮಾತನಾಡದಂತೆ ತಡೆಹಿಡಿದಿದ್ದಾರೆ.

ಎಂ.ಪಿ.ಪ್ರಕಾಶ್ ಪತ್ರಿಕಾ ಹೇಳಿಕೆ ಕೊಟ್ಟಾಗ ದಯಾನಂದ ಸ್ವಾಮಿಗಳು ಹುಬ್ಬಳ್ಳಿಯಲ್ಲಿದ್ದರು. ಪತ್ರಿಕಾ ಹೇಳಿಕೆ ಓದಿ ತಪ್ಪರಾಗಿ ಬಳ್ಳಾರಿಗೆ ನಡೆದರು (ಪ್ರಜಾವಾಣಿ 28-5-2007)

"ಬಸವಣ್ಣನವರ ಜಾತಿ ಮೂಲದ ಕುರಿತು ವಿವಾದಕ್ಕೆ ಕಾರಣವಾಗಿರುವ ಬಂಜಗೆರೆ ಜಯಪ್ರಕಾಶ್ ಅವರ ಆನು ದೇವಾ ಹೊರಗಣವನು ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ಬೇಡಿಕೆಯನ್ನು ಗೃಹಸಚಿವ ಎಂ.ಪಿ.ಪ್ರಕಾಶ್ ಅವರು ತಳ್ಳಿ ಹಾಕಿದ್ದು, ತಾವು ಆ ಕೃತಿಯ ಪರವಾಗಿ ನಿಲ್ಲುವುದಾಗಿ ಹೇಳಿದ್ದಾರೆ. ಮಾದಾರ ಚನ್ನಯ್ಯ ಗುರು ಪೀಠ ಹಿತ ಸಂರಕ್ಷಣಾ ಸಮಿತಿಯ ವತಿಯಿಂದ ನಗರದಲ್ಲಿ (ಬಳ್ಳಾರಿ) ಭಾನುವಾರ ಹಮ್ಮಿಕೊಂಡಿದ್ದ ಮಾದಿಗರ ಸ್ವಾಭಿಮಾನ ಸಮಾವೇಶ ಹಾಗೂ ಮಾದಿಗ ಸಮಾಜದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

.....................ಬಸವಣ್ಣನವರ ಅಂಕಿತವನ್ನೇ ಬದಲಾಯಿಸಿದ ಮಾತೆ ಮಹಾದೇವಿ ಅವರೂ ಈ ಕೃತಿಯ ಬಗ್ಗೆ ವಿರೋಧ ವ್ಯಕ್ತಪಡಿಸಿರುವುದು ಹಾಸ್ಯಾಸ್ಪದವಾಗಿದೆ..... ಬಸವಣ್ಣನವರ ಮೂಲದ ಕುರಿತು ನಿರ್ಧಾರಕ್ಕೆ ಬರಲು

ಯಾವುದೇ ಸಮಿತಿಯನ್ನು ರಚಿಸುವ ಅಗತ್ಯವಿಲ್ಲ." ಎಂದು ತಿಳಿಸಿದರು.

"ನೀವು ಧರಿಸಿರುವ ಕಾವಿಗೆ ತಕ್ಕಂತೆ ನಡೆದುಕೊಳ್ಳಿ," ಎಂದು ದಯಾನಂದ ಸ್ವಾಮಿಗಳನ್ನು ಅವಮಾನಿಸಿದ ಎಂ.ಪಿ.ಪ್ರಕಾಶ್ ತಮ್ಮ ಗೃಹ ಸಚಿವ ಹುದ್ದೆಗೆ ತಕ್ಕ ಗೌರವದಿಂದ ವರ್ತಿಸಿದ್ದಾರೆಯೆ? ಸಮಾಜದಲ್ಲಿ ತೀವ್ರ ಪ್ರತಿಭಟನೆ, ಆಕ್ರೋಶ ವ್ಯಕ್ತವಾಗುವಾಗ ನಾನು ಕೃತಿ ಪರವಾಗಿ ನಿಲ್ಲುವೆ ಎನ್ನುವುದು ಅವಿವೇಕತನವಲ್ಲವೆ? ಧರ್ಮಗುರು ಬಸವಣ್ಣ ಮತ್ತ ತಾನು ಹುಟ್ಟಿದ ಲಿಂಗಾಯತ ಸಮಾಜದ ಆತ್ಮಗೌರವಕ್ಕೆ ವಿರುದ್ಧವಾಗಿ ಯಕಃಶ್ಚಿತ್ ಒಬ್ಬ ಸಾಹಿತಿ ಬಂಜಗೆರೆ ಜಯಪ್ರಕಾಶರ ಹಿತಾಸಕ್ತಿ ಕಾಪಾಡಲು ಗೃಹಮಂತ್ರಿ ಸಿದ್ಧವಾದುದೇಕೆ? ಬುದ್ಧಿವಂತರು, ವಿವೇಕಿಯೂ ಆಗಿದ್ದಲ್ಲಿ ಒಳಗೆ ಪಿತೂರಿ ಮಾಡಿದ್ದರೂ ಬಹಿರಂಗದಲ್ಲಿ ಮೌನವಾಗಿರಬಹುದಿತ್ತು. ಇಂದು ಎಲ್ಲರಿಗಿಂತ ಹೆಚ್ಚಾಗಿ ಮುಖಭಂಗ ಹೊಂದಿ ಖಳನಾಯಕರಾದುದು ಎಂ.ಪಿ.ಪ್ರಕಾಶ್. ಕಡೆ ಕ್ಷಣದವರೆಗೆ 23-7-2007ರಂದು ನಡೆದ ಕ್ಯಾಬಿನೆಟ್ ಮೀಟಿಂಗ್‌ದಲ್ಲಿ ಪುಸ್ತಕ ಮುಟ್ಟುಗೋಲು ವಿರೋಧಿಸಿದರು ಕಡೆಗೆ ಒಂಟಿಯಾದ ಎಂ.ಪಿ.ಪ್ರಕಾಶರ ಅಭಿಪ್ರಾಯ ಕಡೆಗಣಿಸಿ ಉಳಿದವರೆಲ್ಲಾ ಒಮ್ಮತದಿಂದ ಮುಟ್ಟುಗೋಲು ಆಜ್ಞೆ ಘೋಷಿಸಿದರು. ಈ ಸ್ವಧರ್ಮ ಘಾತುಕತನ ಸರಿಯೆ? ಮಾತೆ ಮಹಾದೇವಿ ವಿರೋಧಿಸಿರುವುದು ಹಾಸ್ಯಾಸ್ಪದ ಎಂದಿದ್ದಾರೆ. ನಿಜವಾದ ಅಧಿಕಾರ ಹಕ್ಕು ಇದ್ದುದು ನನಗೆಯೆ?

ವಿಶ್ವಗುರು ಬಸವಣ್ಣನವರು ನವ ಧರ್ಮ ದ್ರಷ್ಟಾರರಾಗಿ ಪ್ರತಿಪಾದಿಸಿದ ಏಕದೇವೋಪಾಸಕ ಲಿಂಗತತ್ವವನ್ನು ಜಗತ್ತಿಗೆ ತೋರಿಸಿಕೊಡಲು ಲಿಂಗದೇವ ಎಂಬ ಪವಿತ್ರ ನಾಮವನ್ನು ವಚನಾಂಕಿತವಾಗಿ ಇಟ್ಟು, ಇದಕ್ಕೆ ಸುದೀರ್ಘ ಮುನ್ನುಡಿ ಬರೆದೆ. ಇದನ್ನು ಅರಿಯುವ ಪ್ರಯತ್ನವನ್ನೇ ಮಾಡದೆ ಅಸಹನೆಯಿಂದ ಬಸವ ವಚನ ದೀಪ್ತಿಯನ್ನು ಮುಟ್ಟುಗೋಲು ಹಾಕಲಾಯಿತು. ಗುರು ಬಸವಣ್ಣನವರನ್ನು, ಅಕ್ಕ ನಾಗಲಾಂಬಿಕೆಯನ್ನು ಅವರ ಮಾತಾಪಿತೃಗಳ ಪಾವಿತ್ರ್ಯತೆಯನ್ನು ಪ್ರಶ್ನಿಸಿ ಸಂಶಯ ಹುಟ್ಟುವಂತೆ ಬರೆದ ಹೀನ ಪುಸ್ತಕವನ್ನು ಸರ್ಕಾರ ನಿರ್ಬಂಧಿಸದಿರುವುದನ್ನು ಪ್ರಶ್ನಿಸುವ ಅಧಿಕಾರ ಎಲ್ಲರಿಗಿಂತಲೂ ಹೆಚ್ಚಾಗಿ ನನಗೇ ಇರುವುದು. 90 ಪರ್ಸೆಂಟ್ ಅಂಕ ತೆಗೆದ ಅಭ್ಯರ್ಥಿಯನ್ನು ಕಡೆಗಣಿಸಿ, ಫೇಲ್ ಆದವನಿಗೆ (ಗೃಹಮಂತ್ರಿ) ಸಹಾನುಭೂತಿ ತೋರಿಸಿ, ನೌಕರಿಗೆ ಆಯ್ಕೆ ಮಾಡಿದರೆ ನ್ಯಾಯವಾದ ಅಭ್ಯರ್ಥಿ ನ್ಯಾಯಾಲಯದ ಮೊರೆಹೋಗನೆ?

ದಯಾನಂದ ಸ್ವಾಮಿಗಳು ಒಬ್ಬ ಜಂಗಮರಾಗಿ ಪುಸ್ತಕದ ಮುಟ್ಟುಗೋಲಿಗೆ ಆಗ್ರಹಿಸಿ ಹೋರಾಡಿದರೆ ಅದು ಲಾಂಛನಕ್ಕೆ ವಿರುದ್ಧವಾದ ಅಥವಾ ಅಪಚಾರ ಮಾಡುವ ಕೃತಿ ಏನಲ್ಲ. ಗಣಾಚಾರ ನಮ್ಮ ಧರ್ಮದ ಆಚಾರಗಳಲ್ಲಿ ಒಂದು. ಗುರು-ಲಿಂಗ-ಜಂಗಮಕ್ಕೆ ಅವಮಾನವಾದಾಗ ಪ್ರತಿಭಟಿಸಲೇ ಬೇಕು. ವಚನ ಸಾಹಿತ್ಯದ ಉಳಿವಿಗಾಗಿ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಿದೇವರು, ಚನ್ನಬಸವಣ್ಣ ಖಡ್ಗ ಹಿಡಿದು ಹೋರಾಡಿದರು. ಇಷ್ಟೆಲ್ಲ ಧರ್ಮ ಗುರು ನಿಂದೆಯಾದರೂ ಪ್ರತಿಭಟಿಸದೆ ದಿವ್ಯ ಮೌನದಲ್ಲಿದ್ದವರು, ಬಂಜಗೆರೆಯ ಪುಸ್ತಕವನ್ನು ಬೆಂಬಲಿಸಿದ ಮಠಾಧಿಪತಿಗಳು ಲಾಂಛನ ದ್ರೋಹಿಗಳು. ಅವರಿಗೆ ಮೊದಲು ಎಂ.ಪಿ.ಪ್ರಕಾಶರು ಬುದ್ಧಿ ಹೇಳಲಿ.

ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಭಯಂಕರ ಕೀಳಾದ ವರದಿಯನ್ನು ಕೊಟ್ಟು, ಎಂ.ಪಿ.ಪ್ರಕಾಶರು ಬೈಯುತ್ತಲೇ ದಯಾನಂದ ಸ್ವಾಮಿ ನಾಪತ್ತೆಯಾದರು ಎಂದು ಬರೆಯಲಾಗಿದೆ. ವಿಪರ್ಯಾಸವೆಂದರೆ ಪಕ್ಕದಲ್ಲಿ ದೊಡ್ಡ ಛಾಯಾಚಿತ್ರವಿದೆ. ಅದರಲ್ಲಿ ದಯಾನಂದ ಸ್ವಾಮಿಗಳು ಮತ್ತಿತರ ಸ್ವಾಮಿಗಳು ಗೃಹ ಮಂತ್ರಿಗಳಿಗೆ (ವ್ಯರ್ಥವಾಗಿ) ಮನವಿ ಅರ್ಪಿಸುವ ದೃಶ್ಯವಿದೆ. ಪತ್ರಿಕಾ ಪ್ರತಿನಿಧಿಗಳ ಮೇಲೆ ಸತ್ಯ ಅವಲಂಬಿತವಾಗಿರುತ್ತದೆ ಎಂಬುದಕ್ಕೆ ಇದು ಉದಾಹರಣೆ. ಕಡೆಯವರೆಗೂ ಇದ್ದೇ ಎಲ್ಲರೊಡನೆ ಶ್ರೀ ದಯಾನಂದ ಸ್ವಾಮಿಗಳು ಬಂದಿದ್ದಾರೆ.

ಬಸವ ಧರ್ಮದ ವೀರ ಸೇನಾನಿ ದಯಾನಂದ ಸ್ವಾಮೀಜಿ

ಆವೇಶದಲ್ಲಿ ಕೆಲವೊಂದು ಸಲ ದುಡುಕುತ್ತಾರೆ; ಇದರಿಂದ ಟೀಕಿಸಲ್ಪಡುತ್ತಾರೆ ಎಂಬುದನ್ನು ಬಿಟ್ಟರೆ ಶ್ರೀ ದಯಾನಂದ ಸ್ವಾಮಿಗಳ ಬಸವ ಧರ್ಮ ನಿಷ್ಠೆ ಮೆಚ್ಚುವಂಥದ್ದು. ಏಕಾಂಗಿಯಾಗಿ ಇಂಗಳೇಶ್ವರ, ಬಾಗೇವಾಡಿ, ಬಿಜಾಪುರ, ಬಳ್ಳಾರಿ - ಹೀಗೆ ಹೋಗಿ ಅಲ್ಲಿಯ ಜನರಿಗೆ ನಿಜ ಸಂಗತಿ ತಿಳಿಸಿ ಜಾಗೃತಗೊಳಿಸಿದರು. ಬಂದ್‌ಗಳು ಯಶಸ್ವಿಯಾದವು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಬಂಜಗೆರೆಯನ್ನು ಸಮರ್ಥಿಸುವವರ ಗುಂಪನ್ನೇ ಆಹ್ವಾನಿಸಿ, ಪುಸ್ತಕದ ಪರವಾಗಿ ಮಾತನಾಡಲು ವ್ಯವಸ್ಥೆ ಮಾಡಿದಾಗ ಈ ಚಕ್ರವ್ಯೂಹದೊಳಕ್ಕೆ ನುಗ್ಗಿ ಚಂಪಾರ ತಂತ್ರವನ್ನು ಬಯಲು ಮಾಡಿದ ಧೈರ್ಯಶಾಲಿ ದಯಾನಂದ ಸ್ವಾಮಿಗಳು. ಸಿಗಬೇಕಾದಷ್ಟು ಕೀರ್ತಿ, ಪ್ರಚಾರ ಸಿಗದೆ ಹೋದರೂ ಗುರು ಬಸವಣ್ಣನವರ ಮೇಲಿನ ಶ್ರದ್ಧೆಯಿಂದ ಆತ್ಮಸಾಕ್ಷಿಯಾಗಿ, ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಡುವ ಶ್ರೀ ದಯಾನಂದ ಸ್ವಾಮೀಜಿಯನ್ನು ಬಸವ ಧರ್ಮದ ವೀರ ಸೇನಾನಿ ಎಂದರೆ ಉತ್ಪ್ರೇಕ್ಷೆಯಾಗದು.

ಪೂಜ್ಯ ಮಾತಾಜಿಯವರಿಗ್ಗೆ ಅಭಿನಂದನಾ ಪತ್ರ

ಬಂಜೆಗೆರೆ ಜಯಪ್ರಕಾಶ್‌ರವರ "ಆನುದೇವ ಹೊರಗೆಣನವನು" ಮುಟ್ಟುಗೋಲಾಗಲು ಸತತ

ಪರಿಶ್ರಮದ ಫಲ ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರಿಗೆ ಸಲ್ಲುತ್ತದೆ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮ ಒಂದೆಂಬ
ಛಲವಿಲ್ಲದವರ ಮೆಚ್ಚ ನಮ್ಮ ಲಿಂಗದೇವ.

ಎಂದು ಧರ್ಮಪಿತ, ಮಹಾಮಾನವತಾವಾದಿ ಗುರು ಬಸವಣ್ಣನವರು ಶರಣನಾದವನಿಗೆ ಇರಬೇಕಾದ 'ಛಲ'ಗಳ ಬಗ್ಗೆ ಹೇಳುತ್ತಾ ಕೊನೆಯಲ್ಲಿ ಛಲವಿಲ್ಲದವರ ಮೆಚ್ಚ ನಮ್ಮ ಲಿಂಗದೇವಾ ಎಂದು ಹೇಳಿ, ಮನುಷ್ಯನಾದವನಿಗೆ, ಶರಣನಾದವನಿಗೆ, ಗುರುವಾದವರಿಗೂ ಸಹ ಛಲವಿರಬೇಕು ಎಂಬ ಅಂಶವನ್ನೂ ಇಲ್ಲಿ ಎತ್ತಿ ತೋರಿಸಿದ್ದಾರೆ. ಛಲವಿಲ್ಲದವನದು ಹೇಡಿಯ ಲಕ್ಷಣ ಎಂದೂ ಹೇಳಿದ್ದಾರೆ.

ಕೀಳು ಛಲದಿಂದ ಗತಿಗೆಟ್ಟ ಬಂಜೆಗೆರೆ ಜಯಪ್ರಕಾಶ.

ಎಲ್ಲರಲ್ಲೂ ಛಲವಿರಬೇಕು ನಿಜ. ಆದರೆ ಎಂತಹ ಛಲವಿರಬೇಕು. ಏತಕ್ಕಾಗಿ ಇರಬೇಕು ಎಂಬ ಬಗ್ಗೆ ನಮಗೆ ಸರಿಯಾದ ಕಲ್ಪನೆ ಇರುವುದು ಅವಶ್ಯಕ. ಏಕೆಂದರೆ ಈ ಛಲವನ್ನು ಒಳ್ಳೆಯದಕ್ಕೂ ಉಪಯೋಗಿಸ ಬಹುದು ; ಕೆಟ್ಟದ್ದಕ್ಕೂ ಉಪಯೋಗಿಸಿಕೊಳ್ಳಬಹುದು. ಕೆಟ್ಟದ್ದನ್ನು ಮಾಡಲು ಛಲತೊಟ್ಟರೆ ಆಗ ಬಾರದ್ದು ಆಗಿ ಹೋಗುತ್ತದೆ. ಅದು ಬೇರೆಯವರಿಗೂ ಹಾನಿವುಂಟು ಮಾಡುತ್ತದೆ. ಉದಾ : ಛಲವಂತ ಮಲ್ಲನೆನಿಸಿಕೊಂಡಿದ್ದ ದುರ್ಯೋಧನ ಅಂತಹ ಛಲತೊಟ್ಟು ಬಹಳ ಹಾನಿಗೆ ಕಾರಣನಾದ. ಅನ್ಯಾಯವಾಗಿ ಸಜ್ಜನರಾದ ಪಾಂಡವರು ಪಡಬಾರದ ಪಾಡು ಪಟ್ಟರು. ಕುರುಕ್ಷೇತ್ರಕ್ಕೆ ಕಾರಣನಾದ. ಅವನು ಹಿಡಿದ ಛಲ ಯಾರೂ ಮೆಚ್ಚವಂತಹುದಲ್ಲ.

ಅದೇ ರೀತಿ ಇಂದು ಬಂಜೆಗೆರೆ ಜಯಪ್ರಕಾಶ್‌ರವರು 'ಆನು ದೇವಾ ಹೊರಗಣವನು' ಎಂಬ ಪುಸ್ತಕ ಬರೆದು ಗುರು ಬಸವಣ್ಣನವರ ಹಾಗೂ ಅಕ್ಕನಾಗಲಾಂಬಿಕಾ ತಾಯಿಯವರ ಚಾರಿತ್ರ್ಯ ವಧೆ ಮಾಡಿ, ತಾವು ಬರೆದಿರುವುದೇ ಸರಿ ಎಂದು ವಾದಿಸಿ ತಮ್ಮ ಕೀಳು ಅಭಿರುಚಿಯನ್ನು ತೋರಿಸಿ, ಕೀಳು ಮಟ್ಟದ ಛಲವನ್ನು ತಳೆದು ಯಾರು ಮೆಚ್ಚದ ಕೆಲಸವನ್ನು ಮಾಡಿ ಜನರಿಂದ, ಭಕ್ತವೃಂದದಿಂದ ಮತ್ತು ದೇವನಿಂದ ತಿರಸ್ಕೃತರಾಗಿದ್ದಾರೆ. ಇಂಥವರನ್ನು ದೇವರೂ ಮೆಚ್ಚಲಾರ, ಇನ್ನು ಮುಂದೆ ಮಹಾಪುರುಷರ ಬಗ್ಗೆ ಬರೆಯುವಾಗ ಸದಾ ಎಚ್ಚರಿಕೆಯಿಂದ ಬರೆಯಲಿ.

ನ್ಯಾಯಕ್ಕಾಗಿ ಛಲತೊಟ್ಟು ವಿಜಯಶಾಲಿಯಾದ ಗುರು ಮಾತಾಜಿ.

ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರಲ್ಲಿ ಕಂಡು ಬರುವ ಸದ್ಗುಣಗಳಲ್ಲಿ ಅತ್ಯಂತ ಮೆಚ್ಚುಗೆಯ ಗುಣ ತತ್ವಕ್ಕೆ, ಧರ್ಮಕ್ಕೆ, ಚ್ಯುತಿ ಬಂದಾಗ ಹಸಿವು, ನಿದ್ರೆ, ತೃಷೆಯನ್ನು ಲೆಕ್ಕಿಸದೆ ಹೋರಾಟಕ್ಕೆ ನಿಲ್ಲುವ ಪುರುಷ ಸಿಂಹದಂಥ ಧೀರಯೋಗಿಣಿಯ ಒಂದು ದಿಟ್ಟ ಸಾಹಸಮಯ ವ್ಯಕ್ತಿತ್ವ. ಗುರುತರವಾದ ಸತ್ಯಕ್ಕೋಸ್ಕರ ಹೋರಾಡುವ ಛಲ.

ಛಲದಿಂದ ಒಳ್ಳೆಯ ಕೆಲಸಗಳುಆಗುತ್ತವೆ ಎನ್ನುವುದಕ್ಕೆ ಉದಾ: ಚಾಣುಕ್ಯನು ಮದಾಂಧರಾಗಿದ್ದ ನಂದರನ್ನು ನಿರ್ಮೂಲನ ಮಾಡುವ ಛಲ ತೊಟ್ಟದ್ದರಿಂದ, ದುರಾಡಳಿತಗಾರರೂ, ಅವಿವೇಕಿಗಳೂ, ಸುಖಾಪೇಕ್ಷಿಗಳೂ ಆಗಿದ್ದ ನಂದರ ನಿರ್ಮೂಲವಾಯ್ತು. ಇದರಿಂದ ವಿವೇಕಿಯೂ, ದಕ್ಷನೂ, ಪ್ರಜಾಹಿತ ಸಂರಕ್ಷನೂ ಆದ ಚಂದ್ರಗುಪ್ತನ ಆಡಳಿತಕ್ಕೆ ಅವಕಾಶವಾಯಿತು.

ಹಾಗೆಯೇ ಗುರು ಮಾತಾಜಿಯವರು 'ಬಂಜೆಗೆರೆ ಜಯಪ್ರಕಾಶ್' ಬರೆದ ಮುಟ್ಟಕ್ಕೆ ತೋಳೆಯುವ ಕೃತಿಯನ್ನು ಓದಿ ಗುರು ಬಸವಣ್ಣನವರ ಜನನದ ಬಗ್ಗೆ ಅನೇಕ ಸಂಶಯಾತ್ಮಕ ಘಟನೆಗಳನ್ನು ಚಿತ್ರಿಸಿ, ಜೊತೆಗೆ ....ಚಾರಿತ್ಯಕ್ಕೂ ಮಸಿ ಬಳಿದಿರುವ ಇದನ್ನು ಮುಂದಿನ ಜನಾಂಗದ ಮೇಲೆ ಆಗುವ ಅನಾಹುತವನ್ನು ತಪ್ಪಿಸಲು ಆತ್ಮಾಭಿಮಾನಿ, ತತ್ವಾಭಿಮಾನಿಯಾದ ಮಾತಾಜಿಯವರು ಸತತವಾಗಿ ಮೂರು ತಿಂಗಳ ಕಾಲ ಹೋರಾಟ ಮಾಡಿದ ಫಲದಿಂದ ಇಂದು ತಮ್ಮ ಸತ್ಯ ನಿಷ್ಠೆಯ ಛಲದಿಂದ ಜಯ ಶಾಲಿಯಾಗಿ ಅಪಾರ ಜನಮನ್ನಣೆಗೆ ಮತ್ತು ಪರಮಾತ್ಮನ ಕೃಪೆಗೆ ಪಾತ್ರರಾಗಿದ್ದಾರೆ. ಇಂತಹ ಗುರುವನ್ನು ಪಡೆದ ನಾವೆಲ್ಲಾ ಭಾಗ್ಯಶಾಲಿಗಳು. ಇದು ಭದ್ರಾವತಿ ರಾಷ್ಟ್ರೀಯ ಬಸವದಳದ ಅಭಿನಂದನ ಪತ್ರ.

- ಶಾರದ ಬಸವರಾಜ್, ರಾ.ಬ.ದಳ, ಭದ್ರಾವತಿ.

ತನುವಿನ ಕೋಪ ತನ್ನ ಹಿರಿಯತನದ ಕೇಡು

- ಮಾತಾಜಿ

ವಿಶ್ವಗುರು ಬಸವಣ್ಣನವರ ದಿವ್ಯವಾಣಿ ಹೇಳುತ್ತದೆ :

ತನುವಿನ ಕೋಪ ತನ್ನ ಹಿರಿಯತನದ ಕೇಡು
ಮನದ ಕೋಪ ತನ್ನ ಅರುಹಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಡದೆ
ನೆರಮನೆಯ ಸುಡುವುದೇ ಲಿಂಗದೇವ ?

ಈ ಮಾತಿಗೆ ಅತ್ಯುತ್ತಮ ನಿದರ್ಶನ ಎಂ.ಪಿ.ಪ್ರಕಾಶರ ಹಿರಿಯತನದ ಕೇಡು. ಈಗಾಗಲೇ ಶ್ರೀ ದಯಾನಂದ ಸ್ವಾಮಿಗಳ ಕುರಿತ ಲೇಖನದಲ್ಲಿ ಅವರ ವೀರಭದ್ರಾವತಾರದ ಮಾತುಗಳ ಬಗ್ಗೆ ಬರೆಯಲಾಗಿದೆ. ಇಂಥದೇ ಮತ್ತೊಂದು ಪ್ರಸಂಗ ಜರುಗಿತು. ಸೋಮವಾರ ದಿ : 23-7-2007 ರಂದು ಬಂಜಗೆರೆಯ ಪುಸ್ತಕ "ಆನುದೇವಾ" ಮುಟ್ಟುಗೋಲು ಹಾಕಲ್ಪಟ್ಟಿತು. ಚಳುವಳಿಯಲ್ಲಿ ಭಾಗವಹಿಸಿದ ಎಲ್ಲರಿಗೂ ಸಮಾಧಾನ, ಸಂತೋಷ ಉಂಟಾದವು.

ಸಚಿವ ಸಂಪುಟದ ಸಭೆ ನಡೆದಾಗ ಎಂ.ಪಿ. ಪ್ರಕಾಶ್ ಕಡೆಯ ಕ್ಷಣದವರೆಗೂ ಪುಸ್ತಕ ಮುಟ್ಟುಗೋಲಿಗೆ ಒಪ್ಪಿಯೇ ಇಲ್ಲ. ಹೊರಗಡೆ ಸಾರ್ವಜನಿಕರ ಬಸವಾಭಿಮಾನಿಗಳ ಆಕ್ರೋಶ ತೀವ್ರಗೊಳ್ಳುತ್ತಿತ್ತು. ಬುಧವಾರ ದಿ. 25 ರಂದು ಬೃಹತ್ ರ‍್ಯಾಲಿ ಸಹ ಸಂಯೋಜಿತವಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಿಕಾರ ಎಂ.ಪಿ. ಪ್ರಕಾಶರಿಗೆ ಜಯಪ್ರಕಾಶ್ ಬಗ್ಗೆ ವಿಶೇಷ ಮಮಕಾರ. ಪರಿಸ್ಥಿತಿ ಕೈಮೀರುತ್ತಿರುವುದನ್ನು ಕಂಡು ಎಂ.ಪಿ. ಪ್ರಕಾಶರ ಅಭಿಪ್ರಾಯವನ್ನು ಕಡೆಗಣಿಸಿ ಉಳಿದವರು ಪುಸ್ತಕ ಮುಟ್ಟುಗೋಲಿನ ನಿರ್ಧಾರ ತೆಗೆದುಕೊಂಡರು.

ಬಸವ ಧರ್ಮ ಪೀಠ ಮತ್ತು ರಾಷ್ಟ್ರೀಯ ಬಸವ ದಳದಿಂದ ಅಭಿನಂದನೆ ಸಲ್ಲಿಸಬೇಕೆಂದು ಶರಣರುಗಳಾದ ದೇವಿಕಾ ಶರಣಪ್ಪ, ಶ್ರೀಕಂಠ ಕುಮಾರ್, ಲೀಲಾವತಿ ಕರಡಿ, ಇಂದು ಶೇಖರ್ ಮುಂತಾದ ಕೆಲವರು ವಿಧಾನ ಸಭೆಗೆ ಹೋಗಿದ್ದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿ, ಕನ್ನಡ-ಸಂಸ್ಕೃತಿ ಸಚಿವ ಮಹದೇವ ಪ್ರಸಾದ, ಬಿ.ಜೆ.ಪಿ. ಅಧ್ಯಕ್ಷ ಸದಾನಂದ ಗೌಡರು, ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಇಷ್ಟು ಜನರನ್ನು ನೆನಪಿನ ಕೊಡುಗೆ ನೀಡಿ ಅಭಿನಂದಿಸಲು ಹೋಗಿದ್ದರು. ಆಗ ಆಕಸ್ಮಿಕವಾಗಿ ಎಂ.ಪಿ. ಪ್ರಕಾಶ್ ಹೊರಬಂದವರು ಇವರು ನಿಂತಲ್ಲಿಂದ ಮುಂದೆ ಸಾಗಿ ಹೋದವರು. ಪುನಃ ವಾಪಸು ಬಂದು ಮುಂದೆ ನಿಂತು ಇವರ ಸ್ಕಾರ್ಫ್ ನೋಡಿ, "ನೀವು ಬಸವ ದಳದವರಾ ?" ಎಂದು ಕೇಳಿದರಂತೆ. "ನಾವು ರಾಷ್ಟ್ರೀಯ ಬಸವ ದಳದವರು" ಎಂದು ನಮ್ಮವರು ಹೇಳಿದ್ದಾರೆ. ತಕ್ಷಣ ಆಕ್ರೋಶದಿಂದ "ನೀವು ನನ್ನ ಬಗ್ಗೆ ಅಪಪ್ರಚಾರ ಮಾಡಿದ್ದೀರಿ. ನನ್ನ ಮತ ಕ್ಷೇತ್ರದಲ್ಲಿ ತೇಜೋವಧೆ ಮಾಡಿದ್ದೀರಿ. ನಾನು ಎಷ್ಟು ಕಷ್ಟಪಟ್ಟು ಈ ಸ್ಥಾನಕ್ಕೆ ಬಂದಿದ್ದೇನೆ ಗೊತ್ತಾ ? ನಾನು ಗೃಹಮಂತ್ರಿ, ಮನಸ್ಸು ಮಾಡಿದರೆ ಏನೆಲ್ಲ ಮಾಡಬಹುದು." ಎಂದು ಪೂತ್ಕರಿಸಿದ್ದಾರೆ. ವಿಪರೀತ ಜನ ಸಂದಣಿಯಿದ್ದ ಕಾರಣ ನಮ್ಮವರು ಮರು ಮಾತನಾಡಿಲ್ಲ. "ತನುವಿನ ಕೋಪ ತನ್ನ ಹಿರಿಯತನದ ಕೇಡು" ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಬಳ್ಳಾರಿಯಲ್ಲಿ ದಿ. 27-5-2007 ರಂದು ಹುಚ್ಚುಚ್ಚಾರ ಹೇಳಿಕೆ ಕೊಟ್ಟರು. ಇದು ಅವರೇ ಮಾಡಿಕೊಂಡ ಪ್ರಮಾದ. ಪತ್ರಿಕೆಗಳು ವ್ಯಾಪಕವಾಗಿ ಸುದ್ದಿ ಮಾಡಿದವು. ತಮ್ಮ ಧರ್ಮ - ಸಮಾಜಗಳನ್ನೂ ಕಡೆಗಣಿಸಿ ಬಂಜಗೆರೆಯ ಪುಸ್ತಕ ಸಮರ್ಥಿಸಿ ಮಾತನಾಡಿದ್ದು ಇಡೀ ಸಮುದಾಯವನ್ನೇ ಕೆರಳಿಸಿ ಎಂ.ಪಿ. ಪ್ರಕಾಶರನ್ನು ಖಳನಾಯಕರನ್ನಾಗಿ ಮಾಡಿತು. ನಂತರವಾದರೂ ತಿದ್ದಿಕೊಂಡರೆ? ಸಮರ್ಥಿಸಿಕೊಳ್ಳುತ್ತಲೇ ಹೋದರು. ಆ ಸಭೆಯಲ್ಲಿ ನಮ್ಮ ಹೆಸರನ್ನು ಎತ್ತಿ ಮಾತನಾಡುವ ಅಗತ್ಯವೇನಿತ್ತು? "ಮನದ ಕೋಪ (ದ್ವೇಷ) ಅರಿವಿನ ಕೇಡು." ಎಂಬುದಕ್ಕಿದು ಸಾಕ್ಷಿ. ಮಾತು ತನ್ನ ನಾಲಿಗೆಯ ಒಳಗೆ ಇದ್ದಾಗ ವ್ಯಕ್ತಿ ಅದರ ಒಡೆಯ (Master) ನಾಲಿಗೆಯಿಂದ ಮಾತು ಜಾರಿ ಹೋದ ಮೇಲೆ ವ್ಯಕ್ತಿ ಅದರ ದಾಸ (Slave). ಈ ಭಾಷಣವು ಅವರು ಇಡೀ ಜೀವನದಲ್ಲಿ ಗಳಿಸಿಕೊಂಡಿದ್ದ 'ನಾಜೂಕಯ್ಯನ' ಪಾತ್ರಕ್ಕೆ ಮಸಿ ಹಚ್ಚಿತು. ಹೀಗೆ ಎಂ.ಪಿ. ಪ್ರಕಾಶರ ತೇಜೋವಧೆಯನ್ನು ಅವರ ನಾಲಿಗೆಯೇ ಮಾಡಿದೆಯೇ ವಿನಾ ಬೇರಾರಲ್ಲ!

ಕಣ್ಣು ನಾಲಿಗೆ ಮನವು ತನ್ನವೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನನೇ ಕೊಲುಗು ಸರ್ವಜ್ಞ॥

ನಾನು ಎಷ್ಟು ಕಷ್ಟಪಟ್ಟು ಈ ಸ್ಥಾನಕ್ಕೆ ಬಂದಿದ್ದೇನೆ ಗೊತ್ತಾ? ಎಂಬ ಪ್ರಶ್ನೆ ಬಹಳ ವಿಲಕ್ಷಣವಾದುದು. ಅವರು ಯಾವ ರೀತಿ ಕಷ್ಟಪಟ್ಟರೋ ನಮಗೇನುಗೊತ್ತು? ಏನು ಬಹಳಷ್ಟು ಹಣ ಖರ್ಚು ಮಾಡಿದರೋ, ಯಾರದಾದರೂ ಕೈಕಾಲು ಹಿಡಿದರೋ. ಇದೇ ರೀತಿ ಆವೇಶದಲ್ಲಿ ಕೂಗಾಡಿದಾಗ ಹೊರಬಂದರೆ ಮಾತ್ರ ನಿಜ ಸಂಗತಿ ನಮಗೆ ಗೊತ್ತಾದೀತು, ಇಲ್ಲದಿದ್ದರೆ ಹೇಗೆ ಸಾಧ್ಯ ?

ನಾನು ಗೃಹ ಮಂತ್ರಿ ಮನಸ್ಸು ಮಾಡಿದರೆ ಏನು ಬೇಕಾದೂ ಮಾಡಬಲ್ಲೆ ಎಂಬ ಆಕ್ರೋಶದ ಮಾತುಗಳು ದರಹಂಕಾರದಿಂದ ತುಂಬಿದವು. ಗೃಹ ಮಂತ್ರಿಯಾಗಿಯೂ ಜಯಪ್ರಕಾಶರ ಪುಸ್ತಕವನ್ನು ಉಳಿಸಿ ಕೊಳ್ಳಲಾಗಲಿಲ್ಲವಲ್ಲ!

"ಬಹು ದೀರ್ಘಕಾಲ ಒಟ್ಟಿದ ಬಣವೆ ಒಂದು ಮಿಡುಕುರಿಯಲ್ಲಿ ಬೇಯುವಂತೆ'' ಏನೇನೋ ಮಾಡನಾಡಿ ಎಂ. ಪಿ.ಪ್ರಕಾಶರು ತಮ್ಮ ವ್ಯಕ್ತಿತ್ವಕ್ಕೆ ಕುಂದು ತಂದುಕೊಂಡು ಲಿಂಗಾಯತರ ಮನದಲ್ಲಿ ಖಳನಾಯಕನಾಗಿ ನಿಂತರು. ಬಂಜಗೆರೆ ಜಯಪ್ರಕಾಶರ ಸಖ್ಯ ಈ ಸ್ಥಿತಿಗೆ ತಂದಿತು. ಅದಕ್ಕೆ ಧರ್ಮಪಿತರು ಹೇಳಿರುವುದು :

ಅರೆ ಭಕ್ತರಾದವರ ನೆರೆ ಬೇಡ, ಹೊರೆ ಬೇಡ ;
ದಾರಿ ಸಂಗಡ ಬೇಡ ; ದೂರ! ನುಡಿಯಲು ಬೇಡ
ಲಿಂಗದೇವನ ಶರಣರಲ್ಲಿ
ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯ.

ಬಸವಣ್ಣನವರು ಕುರುಬ ಜಾತಿಯವರೆ?

- ಮಾತಾಜಿ

ಬಂಜಗೆರೆ ಜಯಪ್ರಕಾಶರ ಉದ್ದೇಶ ಅಗ್ಗದ ಪ್ರಚಾರ ಮತ್ತು ತನ್ಮೂಲಕ ಪುಸ್ತಕ ಮಾರಾಟ ಹೆಚ್ಚಿಸುವುದು. ಹೀಗಾಗಿ ದಿ. 14-4-2007 ರಂದು ಪುಸ್ತಕ ಬಿಡುಗಡೆ ಆಗುವ ಒಂದು ದಿವಸ ಮೊದಲೇ ಕನ್ನಡ ಪ್ರಭಾ ಬಸವಣ್ಣ ಬ್ರಾಹ್ಮಣನಲ್ಲ ಮಾದಿಗ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿತು. ಮರುದಿನ ಪುಸ್ತಕ ಬಿಡುಗಡೆಯಾಗಿ ಎಲ್ಲ ಪತ್ರಿಕೆಗಳಲ್ಲಿ ಬಂದಿತು. ದಿ. 23.7.2007 ರಂದು ಮುಟ್ಟುಗೋಲು ನಿರ್ಧಾರ ಪ್ರಕಟವಾಗಿ 3 ತಿಂಗಳು 9 ದಿವಸ ನಡೆದ ಚಳುವಳಿ ಅಂತ್ಯಗೊಂಡಿತು. ಧರಣೆ ಸತ್ಯಾಗ್ರಹದ ಶಸ್ತ್ರವನ್ನು ಕೆಳಗಿಟ್ಟು ಸ್ವಲ್ಪ ದಣಿವಾರಿಸಿಕೊಳ್ಳುವಾಗಲೇ ಅದೇ ಕನ್ನಡ ಪ್ರಭಾ ಬಸವಣ್ಣ ಕುರುಬ ಕುಲದವರೆ ? ಎಂದು ಪ್ರಕಟಿಸಿದ್ದಲ್ಲದೆ 2006ರ ಮೇ ತಿಂಗಳಲ್ಲೇ ಪ್ರಕಟವಾದ ಈ ಪುಸ್ತಕಕ್ಕೆ ಪ್ರತಿಭಟನೆ ಏಕಿಲ್ಲ ಎಂದು ಚುಚ್ಚಿದೆ ಕೂಡ.

ಕುರುಬರ ಹೆಜ್ಜೆಗಳು - ಒಂದು ಅಧ್ಯಯನ ಎಂಬ ಒಂದು 408 ಪುಟದ ಪುಸ್ತಕವನ್ನು ಚಂದ್ರಕಾಂತ ಬಿಜ್ಜರಗಿ ಎಂಬ ಬಿಜಾಪುರದ ಲೇಖಕರು ಬರೆದಿದ್ದು ಅವರೇ ಶೈಲಚಂದ್ರ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಅವರು ಆರಿಸಿಕೊಂಡ ವಿಷಯ ಬಹಳ ವಿಸ್ತೃತ, ನಮಗೆ ಯಾವುದೇ ರೀತಿ ಸಂಬಂಧವಿಲ್ಲದ್ದು ಬಹಳಷ್ಟು ಇದೆ. ಈ ಲೇಖಕರ ಪ್ರಕಾರ ಇಡೀ ಭಾರತದ ಸಮಾಜವೇ ಮೂಲತಃ ಕುರುಬ ಸಮಾಜ ಎನ್ನುವಂತೆ ಹುಚ್ಚುಚ್ಚಾರ ಬರೆದಿದ್ದಾರೆ. ರಾಜ ಮನೆತನಗಳೆಲ್ಲ ಕುರುಬ ಜನಾಂಗದವು, ಕೌರವ - ಪಾಂಡವರು, ನಂದ ಮತ್ತು ಮೌರ್ಯರು ಎಲ್ಲರೂ ಕುರುಬ ಮೂಲದವರೆ!

ಈ ತರ್ಕಹೀನ ಪುಸ್ತಕದ 7ನೆಯ ಅಧ್ಯಾಯದಲ್ಲಿ ಪ್ರಸಿದ್ಧ ಕುರುಬ ಕುಲಪುರುಷರು ಎಂಬ ಶೀರ್ಷಿಕೆಯಡಿಯಲ್ಲಿ 1. ಬಸವಣ್ಣ, 2. ಛತ್ರಪತಿ ಶಿವಾಜಿ, 3. ರೇವಣಸಿದ್ಧ 4. ಸಿದ್ಧರಾಮೇಶ್ವರ, 5. ಅಮೋಘ ಸಿದ್ಧ ಇವರ ಬಗ್ಗೆ ಬರೆಯಲಾಗಿದೆ.

ಶ್ರೀ ಸಿದ್ಧರಾಮೇಶ್ವರರು ಮೂಲತಃ ಕುಡು ಒಕ್ಕಲಿಗ ಜಾತಿಯವರು. ನಂತರ 'ಲಿಂಗಾಯತ ಧರ್ಮಾನುಯಾಯಿಯಾದರು. ಅವರ ಪ್ರಭಾವದಿಂದ ಅಸಂಖ್ಯಾತರು ಲಿಂಗಾಯತ ಧರ್ಮದ ಅನುಯಾಯಿಗಳಾದರು. ಇಂದಿಗೂ ಸಿದ್ದರಾಮೇಶ್ವರರ ವಂಶಜರು ಕುಡು ಒಕ್ಕಲಿಗ ಜಾತಿಯವರಿದ್ದಾರೆ.

ಅವರು ಇಷ್ಟಲಿಂಗಧಾರಿಗಳಾಗಿದ್ದಾರೆ. ಸಿದ್ಧರಾಮೇಶ್ವರರ ಗದ್ದುಗೆಯ ಪೂಜಕರು ಹಂಡೆ ಕುರುಬರು. ಅವರು ಇಷ್ಟಲಿಂಗ ಧಾರಿಗಳು. ಬಹುಶಃ ಶರಣಕುಲ ತಿಲಕ ಸಿದ್ಧರಾಮೇಶ್ವರರ ಸೇವೆಯಲ್ಲಿ ಹಂಡೆ ಕುರುಬರು ಇದ್ದುದರಿಂದ ಅವರಿಗೇ' ಪೂಜೆಯ ಅಧಿಕಾರ ಬಂದಂತೆ ಕಾಣುತ್ತದೆ. ಶ್ರೀ ರೇವಣಸಿದ್ಧರಂತೂ ಕುರುಬ ಜನಾಂಗ ಜನಿತರು.

ರೇವಣ್ಣ ಎನ್ನುವ ಹೆಸರು ಅವರಲ್ಲಿ ಚಿರಪರಿಚಿತ. ಅವರು ಮೊದಲು ಸಿದ್ಧ ಮಾರ್ಗಾನುಯಾಯಿಯಾದರು ನಂತರ ಲಿಂಗಾಯತ ಧರ್ಮಾನುಯಾಯಿಯಾದರು. ಪಾತಾಳ ಗಂಗೆಯ ದಂಡೆಯ ಮೇಲೆ ವಿರಕ್ತ ಜ್ಞಾನಿ ನಿರ್ಲಜ್ಜ ಶಾಂತಿಮಯ್ಯನಿಂದ ರೇವಣಸಿದ್ಧರಿಗೆ ದೀಕ್ಷೆಯಾಯಿತು. ಇವರು ಅನುಭವ ಮಂಟಪದ ಶರಣರಲ್ಲಿ ಪ್ರಮುಖರು. ಇವರು ಪೂರ್ವಾಶ್ರಮದಲ್ಲಿ ಕುರುಬರಾದ್ದರಿಂದ ಹಾಲುಮತ ಪುರಾಣ ಎಂಬ ಪುರಾಣವೇ ರೇವಣಸಿದ್ಧರ ಬಗ್ಗೆ ರಚನೆಯಾಗಿದೆ.

ದೊಡ್ಡ ವ್ಯಕ್ತಿಗಳಾದ ಬಸವಣ್ಣ, ಶಿವಾಜಿ, ಕೌರವ - ಪಾಂಡವರು ಎಲ್ಲರನ್ನೂ ಕುರುಬ ಕುಲದಲ್ಲಿ ಹುಟ್ಟಿಸಿ ಈ ಜಾತಿಯನ್ನು ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರು ರಾಜಕೀಯವಾಗಿ ಬಲಿಷ್ಠ ಮಾಡಲು ಪ್ರಯತ್ನಿಸಿದಂತೆ ಚಂದ್ರಕಾಂತ ಬಿಜ್ಜರಗಿ ಐತಿಹಾಸಿಕವಾಗಿ ಬಲಶಾಲಿಯನ್ನಾಗಿ ಮಾಡಲು ಹೊರಟಿದ್ದಾರೆ.

ವಿದ್ಯೆ ಜಾಸ್ತಿಯಾದಂತೆ ಜಾತ್ಯತೀತ ಗುಣೈಕ ದೃಷ್ಟಿಕೋನ ಜಾಸ್ತಿಯಾಗಬಹುದು ಎಂದು 70ರ ದಶಕದಲ್ಲಿ ನಾವು ಆಲೋಚಿಸುತ್ತಿದ್ದೆವು. ವಿದ್ಯೆಯು ವೃದ್ಧಿಯಾದಂತೆ ಸ್ವತಂತ್ರ ತಲೆಗಳಿಗಿಂತ ಕುತಂತ್ರ ತಲೆಗಳ ಸಂಖ್ಯೆ ವೃದ್ಧಿಯಾಗುತ್ತಿದೆ. ಕುರುಬರ ಹೆಜ್ಜೆಗಳು ಎಂಬ ಈ ಪುಸ್ತಕದಲ್ಲಿ ಪುಟ 243 ರಿಂದ 275ರವರೆಗೆ ಗುರು ಬಸವಣ್ಣನವರ ಬಗ್ಗೆ ಇದೆ.

ಗುರು ಬಸವಣ್ಣನವರನ್ನು ಕುರಿತ ಹಲವಾರು ಕಾವ್ಯಗಳನ್ನು ಲೇಖಕರು ಪ್ರಸ್ತಾಪಿಸಿರುವರಾದರೂ ಮುಖ್ಯ ಆಕರ ಕುರುಬರು ಹಾಡುವ ಜನಪದ ಗೀತೆ. ಪ್ರೊ.ಸುಧಾಕರ ಎಂಬ ಬಂಜಗೆರೆ ಜಯಪ್ರಕಾಶ ಜಾಡಿನ ಲೇಖಕರು ಈ ಪುಸ್ತಕಕ್ಕೆ ಅಭಿಪ್ರಾಯ ಬರೆದಿದ್ದು "ನಮ್ಮವನೋ ಬಸವಣ್ಣ ನಮ್ಮವನೋ'' ಎಂಬ ಹಾಡನ್ನು ಕುರುಬರು ಹಾಡುವುದನ್ನು ಕೇಳಿದ್ದಾಗಿ (ಪುಟ XII) ಬರೆದಿದ್ದಾರೆ. ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು ಎಂಬಂತೆ 'ಬಸವಣ್ಣ' ಎಂದು ಬಂದುದನ್ನೆಲ್ಲ ಕಲ್ಯಾಣ ಬಸವಣ್ಣನ ತಲೆಗೆ ಕಟ್ಟುವ ಹವ್ಯಾಸ ಇವರದಾದಂತೆ ತೋರುತ್ತದೆ. ಏಕೆಂದರೆ ಹಾಡು ಕೇಳಿದ ಈ ಮಹನೀಯರಿಗೆ ಹಾಡಿನ ನಾಯಕನ ಹೆಸರು, ಊರು, ಕೇರಿ ಮುಂತಾಗಿ ತಿಳಿಯಲು ಸಮಯ ಸಿಗಲಿಲ್ಲವಂತೆ। ಇತಿಹಾಸದಲ್ಲಿ ಕಲ್ಯಾಣದ ಬಸವಣ್ಣನವರ ನಂತರ ಊರು ಊರಿಗೆ, ಮನೆ ಮನೆಗೆ ಬಸವಣ್ಣ ಎಂಬ ಹೆಸರು ಜನಪ್ರಿಯವಾಯಿತು.

ಚಂದ್ರಕಾಂತ್ ಬಿಜ್ಜರಗಿ ಪ್ರಸ್ತಾಪಿಸಿರುವ ವಿಷಯಗಳಲ್ಲಿ 3 ಮುಖ್ಯವಾದವು.

1. ಬಸವರಸರ ತಂದೆ ಮಾದರಸ ಬಾಗೇವಾಡಿಯ ಕುರುಬ ಗೌಡ, ಹಾಲು ಮತದವನು. ತಾಯಿ ಮಾದಲಾಂಬಿಕೆ ಶೈವ ಬ್ರಾಹ್ಮಣಳು. ಬೇಗನೆ (ಬ್ರಾಹ್ಮಣ) ಗಂಡ ತೀರಿ ಹೋಗಲು ಅವಳ ತಲೆ ಕೂದಲು ತೆಗೆಯಲು ಕುಲಬಾಂಧವರು ಒತ್ತಾಯಿಸುವಾಗ ಅಳುತ್ತಿದ್ದ ಆಕೆಯನ್ನು ಕುರುಬ ಗೌಡನು ಆಡಳಿತಾಧಿಕಾರಿಯಾಗಿದ್ದವನು ಮದುವೆಯಾಗಿ 2 ಮಕ್ಕಳನ್ನು ಪಡೆದನು. ಅಕ್ಕನಾಗಲಾಂಬಿಕೆ ಮತ್ತು ಬಸವಣ್ಣ ಆ ಇಬ್ಬರು ಮಕ್ಕಳು (ಪುಟ 266).

2. ಬ್ರಾಹ್ಮಣ ತಾಯಿಗೆ ಮಗನಿಗೆ ಮುಂಜಿ ಮಾಡಿಸುವ ಆಸೆ. ಆದರೆ ಶೂದ್ರ ಜನಿತ ಮಗನಿಗೆ ಮುಂಜಿ ಮಾಡಲು ಸಾಂಪ್ರದಾಯಿಕ ಬ್ರಾಹ್ಮಣರು ಯಾರೂ ಒಪ್ಪಲಿಲ್ಲ. ಬೇರೆ ಊರಿನಿಂದ ಶಾಸ್ತ್ರಿಗಳನ್ನು ಕರೆಸಿ ಜನಿವಾರ ಧಾರಣೆ ಮಾಡುವಾಗ ಊರ ಬ್ರಾಹ್ಮಣರೆಲ್ಲ ಮನೆ ಮುಂದೆ ಘೇರಾಯಿಸಿ ದೊಡ್ಡಗುಲ್ಲೆಬ್ಬಿಸಿದರು. ಇದರಿಂದ ನೊಂದ ಬಸವಣ್ಣ ತೊಟ್ಟ ಜನಿವಾರವನ್ನು ಕಿತ್ತೆಸೆದು ಊರು ಬಿಟ್ಟು ಹೊರಟ. ಇವನ ಹಿಂದೆ ನಾಗಮ್ಮಳೂ ಹೊರಟು ಹೋದಳು. ಮುಂದೆ ನಾಗಮ್ಮ ಬೇರೊಂದು ಜಾತಿಯ ತರುಣನನ್ನು ಪ್ರೀತಿಸಿದಾಗ ಬಸವಣ್ಣನೇ ಮುಂದೆ ನಿಂತು ಇಬ್ಬರಿಗೂ ಮದುವೆ ಮಾಡಿದನು. ಹಳ್ಳಿಗಾಡಿನ ಕುರುಬರು ತಮ್ಮ ಮಕ್ಕಳಿಗೆ ಅಕ್ಕಮ್ಮ, ನಾಗಮ್ಮ ಎಂದು ಹೆಸರಿಡುವುದು ತಾವು ಬಸವಣ್ಣನ ಕಳ್ಳು ಬಳ್ಳಿಯವರು ಎಂದು ಪರೋಕ್ಷವಾಗಿ ಸೂಚಿಸುತ್ತದೆ. (267).

3. ಪ್ರೊ. ಸುಧಾಕರ ಜಾನಪದ ಕಥೆಯ ಮೂಲಕ ಹೇಳಿದ ಈ ನಿರೂಪಣೆಯ ಆಧಾರದ ಮೇಲೆ ಚಂದ್ರಕಾಂತ ಬಿಜ್ಜರಗಿ ಊಹೆಗಳನ್ನು ಹರಿಯ ಬಿಟ್ಟಿದ್ದಾರೆ. ಕುರುಬರಲ್ಲಿ ಬಸವ ಗೋತ್ರ ಎಂಬುದಿದೆ.

ಬಸವಣ್ಣನ ತಂದೆ ಮಾದರಸ ಗೌಡ ಅದೇ ಬೆಡಗಿನ ಹೆಸರನ್ನು ಮಗನಿಗೆ ಇಟ್ಟಿದ್ದಾನೆ. (274)

4. ಕಡೆಗಾಲದಲ್ಲಿ ಬಸವಣ್ಣ ಕೂಡಲ ಸಂಗಮದಲ್ಲಿ ಐಕ್ಯನಾಗಲಿಲ್ಲ. ಲಿಂಗಾಯತ ಮತ್ತು ಬ್ರಾಹ್ಮಣರ ಗುಂಪು ಸೇರಿಕೊಂಡು 1167ರಲ್ಲಿ ಅವರನ್ನು ಹತ್ಯೆ ಮಾಡಿದರು (ಪುಟ 267)

ಪುಸ್ತಕ ವಿಮರ್ಶೆ

ವಿಶ್ವಗುರು ಬಸವಣ್ಣನವರು ಎಲ್ಲ ಜಾತಿಜನಾಂಗಗಳವರಿಗೆ ಆಹುತಿಯಾಗುತ್ತಿದ್ದಾರೆ. ಕುರುಬ ಜನಾಂಗದ ಮಹತ್ವವನ್ನು ಹೆಚ್ಚಿಸಲು ಚಂದ್ರಕಾಂತ ಬಿಜ್ಜರಗಿಯವರು ಬಸವಣ್ಣನವರ ತಂದೆಯನ್ನು ಮಾದರಸ ಗೌಡ - ಕುರುಬ ಗೌಡನನ್ನಾಗಿ ಮಾಡಿದ್ದಾರೆ. ಅಂದು ವರ್ಣಾಶ್ರಮ ವ್ಯವಸ್ಥೆ ಕಟ್ಟುನಿಟ್ಟಾಗಿದ್ದು ಗೌಡರು, ರಾಜರು, ಚಕ್ರವರ್ತಿಗಳು ಭುಜಬಲ ಪರಾಕ್ರಮದಿಂದ ಕ್ಷತ್ರಿಯ, ಶೂದ್ರ ಮುಂತಾಗಿ ಯಾವುದೇ ಕುಲದವರಾಗಿದ್ದರೂ. ಬ್ರಾಹ್ಮಣರನ್ನು ರಾಜಗುರುವಾಗಿ ಹೊಂದಿ ಅವರು ಹಾಕಿದ ಶಾಸನವನ್ನು ದಾಟುತ್ತಿರಲಿಲ್ಲ. ಮಾದರಸ ಕುರುಬಗೌಡ ಎಂಬ ನಿರಾಧಾರ ಸತ್ಯವನ್ನು ಒಪ್ಪಿಕೊಂಡರೂ ಅವನು ಬ್ರಾಹ್ಮಣ ವಿಧವೆಯನ್ನು ಮದುವೆಯಾಗುವ ಧೈರ್ಯ ತೋರಬಹುದಿತ್ತೆ? ಎಂತೆಂತಹ ಅಸಂಗತ ಮತ್ತು ನೀಚ ಊಹೆಗಳನ್ನು ಈ ಲೇಖಕರುಗಳು ಮಾಡುತ್ತಾರೆ. ಬ್ರಾಹ್ಮಣ ಕನ್ಯೆ ಶೂದ್ರಗೌಡನ ವಿವಾಹವಾದರೆ ಅವರಿಗೆ ಸಾಮಾಜಿಕ ಬಹಿಷ್ಕಾರ ಪ್ರಾಪ್ತವಾಗುತ್ತಿತ್ತಲ್ಲದೆ, ಇದು ಮರಣದಂಡನೆ ಮಟ್ಟಕ್ಕೂ ಹೋಗುತ್ತಿತ್ತು. ಬಾಗೇವಾಡಿಗೆ ಕುರುಬ ಗೌಡ ಪುರವರಾಧೀಶ್ವರ ಎಂದು ಒಪ್ಪಿಕೊಂಡರೂ ಅವನೇ ಅಂತಿಮ ರಾಜನಲ್ಲ. ಅಂದಾಗ ಚಾಲುಕ್ಯ ಚಕ್ರವರ್ತಿಗಳಿಗೆ ಈ ಫಿರ್ಯಾದು ಹೋಗುತ್ತಿರಲಿಲ್ಲವೆ? ಏನಾದರೂ ಬರೆದರೂ ಸ್ವಲ್ಪವಾದರೂ ನಂಬುವಂತಿರಬೇಕು.

ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದವರಿಗೆ ಉಪನಯನ ಎಂದಾದರೂ ಸಾಧ್ಯವೆ ? ಅಕ್ಕಮ್ಮ, ನಾಗಮ್ಮ ಎಂಬ ಹೆಸರು ಸಾರ್ವತ್ರಿಕ. ಕುರುಬರಲ್ಲೇ ಏಕೆ ಎಲ್ಲಾ ಜನಾಂಗದವರಲ್ಲೂ ಉಂಟು. ಕುರುಬರಲ್ಲಿ ದನಗಾಹಿ ಕುರುಬರು, ಕುರಿ ಕಾಯುವ ಕುರುಬರು ಎಂಬ ವಿಭೇದಗಳಿವೆ. ಪಶುಪಾಲನೆ ಮಾಡುವ ಕುರುಬರಿಗೆ ಬಸವ ಗೋತ್ರದವರು ಎಂಬ ಬೆಡಗು ಬಂದಿರುವ ಸಾಧ್ಯತೆ ಇದೆ. ಸಂಸ್ಕೃತದಲ್ಲಿ ವೃಷಭ ಎಂಬುದು ಎಷ್ಟು ಪರಿಚಿತವೋ, ಪ್ರಿಯವೋ ದ್ರವಿಡ ಭಾಷೆಯಲ್ಲಿ 'ಬಸವ' ಅಷ್ಟೇ ಪರಿಚಿತ. ಆದ್ದರಿಂದ ಕುರುಬರಲ್ಲಿ ಬಸವ ಬೆಡಗು ಇರುವ ಕಾರಣ ಬಸವಣ್ಣನವರು ಕುರುಬರು ಎಂಬುದು ಹಾಸ್ಯಾಸ್ಪದ ತರ್ಕ.

ನಾಗಮ್ಮ ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿದಳು. ಬಸವಣ್ಣನವರು ಅವರಿಗೆ ಮದುವೆ ಮಾಡಿಸಿದರು ಎಂಬುದು ಅಷ್ಟೇ ಹಾಸ್ಯಾಸ್ಪದ. ಇಂದಿನಂತೆ ಯಾರೋ ಅನ್ಯಜಾತಿಯವರನ್ನು ಪ್ರೀತಿಸುವುದು ಅವರು ಮದುವೆಯಾಗುವುದು ಸುಲಭ ಸಾಧ್ಯವಿರಲಿಲ್ಲ. ಜಾತೀಯ ಚೌಕಟ್ಟು ಅಷ್ಟು ಬಿಗಿಯಾಗಿದ್ದಿತು. ನಾಗಲಾಂಬಿಕೆಗೆ ಕೂಡಲ ಸಂಗಮದ ಅಗ್ರಹಾರದ ಶಿವಸ್ವಾಮಿ ಎಂಬ ಹುಡುಗನಿಗೆ ಮದುವೆ ಕೊಡಲಾಗಿತ್ತು. ಪ್ರೌಢ ಚಿಂತಕಳಾದ ನಾಗಲಾಂಬಿಕೆ ಕೇವಲ ಗೃಹಕೃತ್ಯಗಳಲ್ಲಿ ಸೀಮಿತಳಾಗದೆ ಬಸವಣ್ಣನವರ ಕ್ರಾಂತಿ ಪಥದಲ್ಲಿ ಹೆಗಲುಕೊಡಲು ತಮ್ಮನೊಡನೆ ಮಂಗಳವೇಡೆಗೆ ಹೊರಟು ಹೋದಳು. ನಂತರ ಶಿವಸ್ವಾಮಿಯೂ ಬಂಧು ಬಸವ ಪರಿವಾರವನ್ನು ಸೇರಿಕೊಂಡನು. ಅಕ್ಕನಾಗಲಾಂಬಿಕೆ - ಶಿವಸ್ವಾಮಿಯವರ ಸುಪುತ್ರರೇ ಚನ್ನಬಸವಣ್ಣನವರು.

ಶ್ರೇಷ್ಠ ಸಮಾಜ ಸುಧಾರಕರಾದ ಬಸವಣ್ಣನವರು ಉನ್ನತ ಮಟ್ಟದ ಯೋಗಿಯೂ ಅಹುದು. ಅವರು ಇಚ್ಛಾಮರಣಿಯಾಗಿ ಯೋಗ ಶಕ್ತಿಯಿಂದ ಲಿಂಗದೇವನಲ್ಲಿ ಲೀನವಾಗಿದ್ದಾರೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.

ಚನ್ನಬಸವಣ್ಣನವರ ಮಾತಿನಂತೆ ಬಸವಣ್ಣನವರು ಅಪೂರ್ವ ಯೋಗಿಗಳು. ಆದ್ದರಿಂದ ಬ್ರಾಹ್ಮಣರು - ಲಿಂಗಾಯತರು ಬಸವಣ್ಣನವರನ್ನು ಹತ್ಯೆ ಮಾಡಿದ್ದಾರೆ ಎಂಬುದು ಮಹಾನ್ ಸುಳ್ಳು. ಹತ್ಯೆಯೇ ಆಗಿದ್ದರೆ ಆ ಸ್ಥಳವನ್ನೇ ಪವಿತ್ರ ಕ್ಷೇತ್ರವನ್ನಾಗಿ ಅನುಯಾಯಿಗಳು ಗುರುತಿಸಿ ಸಂರಕ್ಷಿಸಿರುತ್ತಿದ್ದರು. ಚಂದ್ರಕಾಂತ ಬಿಜ್ಜರಗಿಯವರ ಈ ಅಸಂಬದ್ಧ ಪುಸ್ತಕವನ್ನು ಉದಾಸೀನ ಮಾಡಿ ಗಮನಿಸದಿರುವುದು ಸೂಕ್ತ ಪರಿಹಾರ.

ಪ್ರಗತಿ ಪರ ಚಿಂತಕರ ಕ್ರೂರ ಅಟ್ಟಹಾಸ

-ಮಾತಾಜಿ

ಬೆಂಗಳೂರು ನಗರದಲ್ಲಿ ನಾಯಿಗಳ ದಾಳಿಗೆ ತುತ್ತಾಗಿ ಮುಗ್ಧ ಮಕ್ಕಳು ಸಾಯುತ್ತಿರುವ ದೃಶ್ಯ ಭಯಂಕರ. ಹಸಿ ಮಾಂಸದ ರುಚಿನೋಡಿದ ನಾಯಿಗಳು ಮಕ್ಕಳು ಆಟವಾಡುವಾಗ, ಓಡಾಡುವಾಗ, ಎಳೆದಾಡಿ, ಕಚ್ಚಿ ಮಾಂಸವನ್ನು ತಿನ್ನುವ ದೃಶ್ಯ ಕಲ್ಪಿಸಿಕೊಳ್ಳಲೂ ಭಯಂಕರ. ಅದೇ ರೀತಿ ಪ್ರಗತಿಪರ ಚಿಂತಕರು ಎಂದು ತಮಗೆ ತಾವೇ ಭಾವಿಸಿಕೊಂಡು ಆನು ದೇವಾ ಪುಸ್ತಕದ ಮುಟ್ಟುಗೋಲು ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತಾ ಬಸವಣ್ಣನವರ ಬಗ್ಗೆ ಅತಿ ಭಯಂಕರ, ಕ್ರೂರ ಅಭಿಮಾನವನ್ನು ತೋರಿಸುತ್ತಿರುವ ಸಾಹಿತಿಗಳ ಹೇಳಿಕೆಗಳನ್ನು ಓದಿದಾಗ ವಿಶ್ವಗುರು ಬಸವಣ್ಣನವರನ್ನು ಬಂಜಗೆರೆ ಜಯಪ್ರಕಾಶರಿಂದ ಹಿಡಿದು ಅನೇಕ ಪ್ರಗತಿಪರ ಚಿಂತಕರು ವಿಮರ್ಶಿಸುವ ಪರಿ, ಮಗುವೊಂದನ್ನು ನಾಯಿಗಳು ಎಳೆದಾಡಿ, ಕಚ್ಚಿ ತಿನ್ನುವಂತೆ ಎನಿಸಿ ಅತೀವ ಸಂಕಟವೆನಿಸುತ್ತದೆ.

ಜನರು ಲಂಕೇಶ್, ಲಂಕೇಶ್ ಪತ್ರಿಕೆ, ವಿಕ್ರಾಂತ, ಅಗ್ನಿ ಮುಂತಾದ ಹಲವಾರು ಪತ್ರಿಕೆಗಳನ್ನು ತಂದು ಅವುಗಳು ಆನು ದೇವಾ ಪುಸ್ತಕವನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿದ್ದನ್ನು ಹೇಗೆ ವಿಶ್ಲೇಷಿಸಿವೆ ಎಂಬುದನ್ನು ನೋಡಲು ಕೊಟ್ಟರು. ಅಗ್ನಿಯ ಸಂಪಾದಕರಾದ ಶ್ರೀಧರ ಅತಿ ಭಯಂಕರ ಅಭಿಮಾನವನ್ನೇ ತೋರಿಸುತ್ತ ಬರೆಯುತ್ತಾರೆ.(ಪುಟ 10)

"ಬಸವ ನನಗೆ ಮಹಾಪುರುಷನಂತೆ, ದಿವ್ಯ ಪುರುಷನಂತೆ ಎಂದೂ ಗೋಚರಿಸಿಲ್ಲ. ಅತ್ಯಂತ ಸಾಮಾನ್ಯ ನನ್ನ ದೊಡ್ಡಪ್ಪ, ಚಿಕ್ಕಪ್ಪಂದಿರಂತೆ ಕಾಣುತ್ತಾನೆ." ಈ ಏಕ ವಚನದ ಬಳಕೆಯೇ ನಮಗೆ ರಕ್ತದೊತ್ತಡವನ್ನು ಜಾಸ್ತಿ ಮಾಡುತ್ತದೆ. ಏಕೆಂದರೆ ನಮಗೆ ಧರ್ಮಪಿತ ಬಸವಣ್ಣನವರು ಕೇವಲ ಒಬ್ಬ ಮಾನವತಾವಾದಿ, ಸಮಾಜ ಸುಧಾರಕರು ಮಾತ್ರವಲ್ಲ ದಾರ್ಶನಿಕರು, ನವ ಧರ್ಮ ದ್ರಷ್ಟಾರರು, ಮಂತ್ರ ಪುರುಷ. ಸೃಷ್ಟಿಕರ್ತನ ನಂತರದ ಸ್ಥಾನ ಬಸವಣ್ಣನವರಿಗೆ. ಕೆಲವೊಮ್ಮೆ ಇವರಿಗೇ ಅಗ್ರಸ್ಥಾನ. ಇವರು ಶರಣರ ಹೃದಯ ಮಧ್ಯದ ಪರಂಜ್ಯೋತಿ.

ಒಂದು ಶವವನ್ನು ಪೋಸ್ಟ್ ಮಾರ್ಟಮ್ ಮಾಡುವಾಗ ವೈದ್ಯನು ಭಾವಶೂನ್ಯನಾಗಿ ಮಾಡುತ್ತಾನೆ. ಆ ರೀತಿ ಪ್ರಗತಿಪರ ಚಿಂತಕರೆನ್ನುವವರು ಬಸವಣ್ಣನವರನ್ನು ವಿಶ್ಲೇಷಿಸುತ್ತಾರೆ. ಆದರೆ ನಾವು ಪ್ರೀತಿಪಾತ್ರ ತಾಯಿತಂದೆಯರನ್ನು ಗೌರವಿಸುವ ಜೋಪಾನ ಮಾಡುವ ಮಕ್ಕಳಂತೆ ಭಾವಿಸುತ್ತೇವೆ.

ನಮ್ಮನ್ನು ಮತಾಂಧರೆಂದು, ಜಾತಿವಾದಿಗಳೆಂದು ವಿಶ್ಲೇಷಿಸಿರುವ ಅಗ್ನಿ ಪತ್ರಿಕೆಯ ಸಂಪಾದಕರು, ಇನ್ನಿತರರು ಬಂಜಗೆರೆಯವರನ್ನು ಬಹಳ ಮೃದು ಭಾಷಿಯೆಂದು, ಪ್ರಾಮಾಣಿಕ ಮತ್ತು ಗಂಭೀರ ಚಿಂತಕರೆಂದು ಪ್ರಮಾಣ ಪತ್ರ ನೀಡಿದ್ದಾರೆ. ಒಂದನ್ನೂ ದೃಢವಾಗಿ ಆಧಾರಪೂರ್ವಕವಾಗಿ ಹೇಳದೆ ಎಲ್ಲರ ಮೇಲೆ ಕೆಸರು ಚೆಲ್ಲುತ್ತಾ ಅನುಮಾನಿತ ಸತ್ಯ, ಸಂಭಾವ್ಯ ಸತ್ಯ ಎಂದು ಸಂದೇಹದ ಅಲೆ ಎಬ್ಬಿಸುವ ಬಂಜಗೆರೆಯದು ಗಂಭೀರ ಹುಡುಕಾಟವೆ? ಆಗ್ನಿ ಪತ್ರಿಕೆಯ ಪುಟ 3ರಲ್ಲಿ ಬಸವರಾಜು ಎಂಬ ಒಬ್ಬರು ಬರೆದಿದ್ದಾರೆ. "ಆನು ದೇವಾದ ವಿರುದ್ಧ ಇಡೀ ಲಿಂಗಾಯತ ಸಮುದಾಯವೇ ಸಿಡಿದೆದ್ದು ನಿಂತರೆಂದಲ್ಲ; ಸಭ್ಯ ಲಿಂಗಾಯತ ಸ್ವಾಮಿಗಳಾದ ಸಿದ್ಧಗಂಗಾದ ಶಿವಕುಮಾರ ಸ್ವಾಮಿಗಳು, ಗದುಗಿನ ತೋಂಟದಾರ್ಯರು, ಸುತ್ತೂರು ಸ್ವಾಮಿಗಳು, ಪಂಡಿತಾರಾಧ್ಯರು, ಮುರುಘರಾಜೇಂದ್ರರು ಅಪಸ್ವರವನ್ನೇನೂ ಎತ್ತಿರಲಿಲ್ಲ." ಎಂದು ಬರೆದಿದ್ದಾರೆ.

ಈ ವಿಷಯದಲ್ಲಿ ಪ್ರತಿಕ್ರಿಯೆ 3 ಪ್ರಕಾರ ಇದೆ. 1. ಹೋರಾಟ 2. ತಟಸ್ಥ 3. ಆಂತರಿಕ ಪ್ರೋತ್ಸಾಹ. ಲೇಖಕರಿಗೆ ಗೊತ್ತಿಲ್ಲ ಚಿತ್ರದುರ್ಗ ಹಾಗೂ ಗದಗಿನ ಶ್ರೀಗಳದು ಬಂಜಗೆರೆಗೆ ಆಂತರಿಕ ಪ್ರೋತ್ಸಾಹ. ಸಿದ್ಧಗಂಗಾ ಮತ್ತು ಸುತ್ತೂರು ಶ್ರೀಗಳದು ತಟಸ್ಥ ನೀತಿ. ಪಂಡಿತಾರಾಧ್ಯರು ಟಿ.ವಿ.ಯೊಂದರ ಸಂವಾದದಲ್ಲಿ ಬಂಜಗೆರೆಯ ಅಭಿಪ್ರಾಯವನ್ನು ವಿರೋಧಿಸಿದರು ಎಂದು ಕೇಳಿದೆ. ನನಗೆ ಅದನ್ನು ನೋಡಲು ಆಗಲಿಲ್ಲ.

ನಿಷ್ಕ್ರಿಯ, ತಟಸ್ಥ ನೀತಿಯನ್ನು ಸಭ್ಯತೆ ಎಂದು ಹೊಗಳುವ ಕೆಲವರ ತಂತ್ರದಿಂದ ತತ್ವ ನಿಷ್ಠರೇನೂ ಎದೆಗೆಡಬೇಕಾಗಿಲ್ಲ. ಜಂಗಮನ ಕರ್ತವ್ಯ ಧರ್ಮ ಪ್ರಚಾರ ಮತ್ತು ಧರ್ಮ ಸಂರಕ್ಷಣೆ. ಪ್ರಾಣದಲ್ಲಿ ನಿರ್ಭಯ, ಚಿತ್ತದಲಿ ನಿರಪೇಕ್ಷೆ ಜಂಗಮನ ಲಕ್ಷಣ. ಪ್ರಗತಿಪರರ ದಾರಿ ತಪ್ಪಿಸುವ ಹೊಗಳಿಕೆಗೆ ನಾವು ಕಿವಿಗೊಡಬೇಕಾಗಿಲ್ಲ.

ಬಸವಾದಿ ಪ್ರಮಥರೊಡನೆ ಭಾವನಾತ್ಮಕ, ಭಾಕ್ತಿಕ ಸಂಬಂಧ ಎಷ್ಟಿದೆ ಎಂಬುದರ ಮೇಲೆ ನಮ್ಮ ಪ್ರತಿಕ್ರಿಯೆಗಳು, ಹೋರಾಟಗಳು ನಿಂತಿರುತ್ತವೆ. ಶರಣರು, ಲಿಂಗಾಯತ ಧರ್ಮ, ಸಮಾಜಗಳಿಗೆ ಏನೂ ಸಂಬಂಧವಿರದವರೆಲ್ಲ ಏನೇನೋ ಬದ್ಧಿವಾದ ಹೇಳಲು ಬರುವುದು ಚೋದ್ಯದ ಸಂಗತಿಯೇ ಸರಿ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ ಅಗ್ನಿ ಪತ್ರಿಕೆಯಲ್ಲಿ ಹೇಳಿದ್ದಾರೆ: "ನಾನು ಆನು ದೇವಾ.... ಕೃತಿಯನ್ನು ನಾಲ್ಕು ಬಾರಿ ಓದಿದ್ದೇನೆ. ಇದರಲ್ಲಿ ಒಂದಕ್ಕೆ ಒಂದು ಲಿಂಕೇ ಸಿಕ್ಕಿಲ್ಲ. ಬಂಜಗೆರೆ ಅನುಮಾನಿತ ಸತ್ಯ ಅನ್ನಾರೆ. ಬಸವಣ್ಣ ಮಾದಿಗ ಜನಾಂಗಕ್ಕೆ ಸೇರಿದ ತಂದೆಯ ಮಗ ಅನ್ನೋದರ ಜೊತೆಗೆ ಇತರೆ ವಚನಗಳ ಒಳ ತಿರುಳನ್ನೂ ಒರೆಗೆ ಹಚ್ಚಬೇಕಿತ್ತು.

ಇದು ಕೃತಿಯ ಬಗ್ಗೆ ನನಗೆ ಇರುವ ಅಭಿಪ್ರಾಯ; ಅದು ಇರಲಿ. ಹೀಗೆ ಅಭಿಪ್ರಾಯಕ್ಕೆ ಸಹಮತ ಇಲ್ಲ ಅಂದಮಾತ್ರಕ್ಕೆ ಒಂದು ಕೃತಿಯನ್ನು ಮುಟ್ಟುಗೋಲು ಹಾಕುವುದು ಎಷ್ಟು ಸರಿ? ಇದು ಜಾತಿ ಮನಸ್ಸುಗಳ ಸಂಚು. ಎಲ್ಲಾ ಜನರ ಮನಸ್ಸಿನ ಭಿತ್ತಿಯಲ್ಲಿ ಶಾಶ್ವತವಾಗಿ ಬೇರುಬಿಟ್ಟಿರುವ ಬಸವಣ್ಣನ ಅಂಕಿತವನ್ನೇ ಬದಲಾಯಿಸಿ ದ್ರೋಹ ಬಗೆದು ಎಲ್ಲರ ಅವಕೃಪೆಗೆ ಒಳಗಾದ ಮಾತೆ ಮಹಾದೇವಿ ಯೋಗ್ಯರಲ್ಲ. ಇವರೆಲ್ಲಾ ಈಗ ಗಾಳಿ ಬಂದಕಡೆ ತೂರಿಕೊಂಡು "ಆನು ದೇವಾ...." ಮುಟ್ಟುಗೋಲಿಗೆ ಅರಚಿದ್ದು ಹಾಸ್ಯಾಸ್ಪದ ಸಂಗತಿ. ಇದು ದುಷ್ಟರಷ್ಟೇ ಮಾಡುವ ಕೆಲಸ."

ಬಸವಣ್ಣನ ಅಂಕಿತ ತಿದ್ದಿರುವ ಬಗ್ಗೆ ಮಾತನಾಡಿದ್ದಾರೆ. ಈ ತಾಯಿ ಬಸವಣ್ಣನವರ ತತ್ವಜ್ಞಾನ, ಸಿದ್ಧಾಂತ, ದರ್ಶನ ಶಾಸ್ತ್ರದ ಬಗ್ಗೆ ಎಷ್ಟು ಅಧ್ಯಯನ ಮಾಡಿದ್ದಾರೆ? "ಎಲ್ಲರ ಅವಕೃಪೆಗೆ ಒಳಗಾದ ಮಾತೆ ಮಹಾದೇವಿ ಯೋಗ್ಯರಲ್ಲ...... ಇದು ದುಷ್ಟರಷ್ಟೆ ಮಾಡುವ ಕೆಲಸ "ಎಂದಿದ್ದಾರೆ. ಅನೇಕ ಮಠಾಧೀಶರಂತೆ ರಾಜಕಾರಣಿಗಳು, ಸಾಹಿತಿಗಳ ಶಿಫಾರಸಿಗಾಗಿ ಬದುಕಿರುವವರು ನಾವಲ್ಲ. ನಾವು ಯೋಗ್ಯರೋ ಅಲ್ಲವೋ ಎಂಬ ಬಗ್ಗೆ ಪ್ರಮಾಣ ಪತ್ರ ಅನುಗ್ರಹಿಸಬೇಕಾದವರು ಗುರು ಬಸವಣ್ಣನವರು ಮತ್ತು ಸಮಾಜ. ಸತ್ಯ, ಅಹಿಂಸೆ, ಸುಸಂಸ್ಕಾರದ ತರಬೇತಿಯನ್ನು ಜನರಿಗೆ ನೀಡುತ್ತಿರುವ ನಮ್ಮನ್ನು ದುಷ್ಟರೆನ್ನಬೇಕಾದರೆ ಬಿ.ಟಿ.ಲಲಿತಾ ನಾಯಕ್ ಎಂಥಾ ಅಪ್ರಬುದ್ಧ, ಬಾಲಿಶ ಮತಿಯವರಿರಬೇಕು! ಗಾಜಿನ ಮನೆಯಲ್ಲಿ ನಿಂತು ಕಲ್ಲು ಎಸೆಯುವ ಈ ರಾಜಕಾರಣಿಯ ಮಗ ಸಂವಿಧಾನ ಶಿಲ್ಪಿ ಡಾ|| ಅಂಬೇಡ್ಕರರ ಮೂರ್ತಿಗೆ ಚಪ್ಪಲಿ ಹಾರ ಹಾಕಿದಾಗ ಜನರು ರೊಚ್ಚಿಗೆದ್ದು ಪ್ರತಿಭಟಿಸಿದಾಗ ನೈತಿಕ ಹೊಣೆ ಹೊತ್ತು ಸಚಿವ ಪದವಿಗೆ ರಾಜೀನಾಮೆ ಕೊಟ್ಟವರು ಇವರು! ಮಗನಲ್ಲಿ ಇಂಥ ಕುಸಂಸ್ಕಾರ ಬೆಳೆಯಲು ತಾಯಿಯಾದ ಇವರು ಕಾರಣರಲ್ಲವೆ?

ಪ್ರಗತಿಪರ ಚಿಂತಕರ ಸಹಾನುಭೂತಿ, ಗೌರವ ನಮಗೂ ಬೇಡ, ಬಸವಾದಿ ಶರಣರಿಗೂ ಅಗತ್ಯವಿಲ್ಲ. ಬರಬೇಕಾದ ಸಾಹಿತ್ಯ ಬಂದಿದೆ. ಸಭ್ಯ, ಸುಸಂಸ್ಕೃತ ಸಾಹಿತಿಗಳು ಬರೆದಿರುವ ಸಾಹಿತ್ಯ ವಿಪುಲವಾಗಿರುವಾಗ ಜನರು ಅದನ್ನು ಓದಿ ತಿಳಿದುಕೊಳ್ಳುವರು, ಹರ್ಷಿಸುವರು. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂಶೋಧನೆಯ ಸೋಗಿನಲ್ಲಿ ಬಸವಾದಿ ಶರಣರನ್ನು ಬಂಜಗೆರೆ ಜಯಪ್ರಕಾಶ್ ಮತ್ತು ಅವರ ಸಹ ಚಿಂತಕರು ಹರಿದು ಚಿಂದಿ ಮಾಡುವುದು ಬೇಡ.

☺ ಸಮಸ್ಯೆ ? - ಸಮಾಧಾನ ! ☹

☐ ಸೂರ್ಯಕಾಂತ ಪಟ್ನೆ, ಬೀದರ್

? ಕುರುಬರ ಹೆಜ್ಜೆಗಳು ಎನ್ನುವ ಒಂದು ಪುಸ್ತದಲ್ಲಿ ಚಂದ್ರಕಾಂತ ಬಿಜ್ಜರಗಿ ಎಂಬ ಲೇಖಕರು ಬಸವಣ್ಣನವರು ಕುರುಬ ತಂದೆ ಶೈವ ಬ್ರಾಹ್ಮಣ ತಾಯಿಯಿಂದ ಹುಟ್ಟಿದ್ದಾರೆಂದು ಬರೆದಿದ್ದಾರಂತೆ. ಇದೇನು ಒಬ್ಬರಾದ ಮೇಲೆ ಒಬ್ಬರು ಬಸವಣ್ಣನವರಿಗೇ ತಗುಲಿಕೊಳ್ಳುತ್ತಿದ್ದಾರಲ್ಲ?

★ ಇವನಾರವ ಇವನಾರವ ಎಂದು ಭೇದವೆಣಿಸದೆ ಇವನಮ್ಮವ ಇವನಮ್ಮವ ಎಂದು ಎಲ್ಲರನ್ನು ಆದರಿಸಿದ್ದು ಬಸವಣ್ಣನವರ ತಪ್ಪು. ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಎಂದು ದಲಿತರನ್ನು ಆದರಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಲೆಳಸಿದ್ದು ಮತ್ತೊಂದು ತಪ್ಪು. ಗುರು ಬಸವಣ್ಣನವರು ಎಲ್ಲರವರಾಗಬೇಕೆಂದೇ

ಬಯಸಿದ್ದರು. ಆದ್ದರಿಂದ ಎಲ್ಲ ಜಾತಿ ಜನಾಂಗದವರೂ ನಮ್ಮವರು ಎಂದು ಆದರಿಸಲಿ, ಗೌರವಿಸಲಿ. ಆದರೆ ಪವಿತ್ರಾತ್ಮರಾದ ಅವರ ತಾಯಿ ತಂದೆಯರಿಗೆ ಕಲಂಕ ಹಚ್ಚುವ ದುರ್ಬುದ್ಧಿ ಏತಕ್ಕೆ? ವಿಶ್ವ ಕರ್ಮ ಸಮಾಜದ ಒಬ್ಬರು ಬಸವಣ್ಣ ನಮ್ಮ ಜಾತಿಯವರು ಎಂದು ಬರೆದಿದ್ದಾರೆ. ಇವರುಗಳ ಪ್ರೇಮ - ಅಭಿಮಾನ ಪೂತನಿ ಶ್ರೀ ಕೃಷ್ಣನಿಗೆ ಎದೆಗೆ ವಿಷ ಸವರಿಕೊಂಡು ಹಾಲು ಕುಡಿಸಿದಂತಹ, ಅಫಜಲಖಾನನು ಶಿವಾಜಿಯನ್ನು ಅಪ್ಪಿಕೊಂಡಂತಹ ಅಭಿಮಾನವಾಗಿದೆ. ಇದು ಖಂಡನಾರ್ಹ.

☐ ದೇವಿಕಾ ಶರಣಪ್ಪ, ಬಸವೇಶ್ವರ ನಗರ, ಬೆಂಗಳೂರು

? ಬಂಜಗೆರೆಯ ಪುಸ್ತಕವನ್ನು ಸಮರ್ಥಿಸಿಕೊಳ್ಳುವವರು, ಅದರ ಅಭಿಪ್ರಾಯವನ್ನು ಒಪ್ಪದೆ ಇದ್ದರೂ ಮುಟ್ಟುಗೋಲು ಹಾಕಬಾರದಿತ್ತು ಎನ್ನುವವರು, ಪುಸ್ತಕದಲ್ಲಿ ಬಸವಣ್ಣನವರಿಗೆ ಅಗೌರವವಾಗುವುದು ಏನೂ ಇಲ್ಲ ಎಂದು ಬಸವಣ್ಣನವರನ್ನು ಮಾತ್ರ ಬಾಯಿ ತುಂಬಾ ಹೊಗಳುತ್ತಾರೆ. ಇದೇನಿದು ವಿಪರ್ಯಾಸ?

★ ನನಗೆ ಸಾಹಿತಿಗಳ ಬಗ್ಗೆ ವಿದ್ಯಾರ್ಥಿ ಜೀವನದಿಂದಲೂ ಬಹಳ ಗೌರವವಿತ್ತು. ಆದರೆ ಚಂಪಾ, ಬಂಜಗೆರೆಯಂಥವರ ಬರಹಗಳು, ನಡೆ-ನುಡಿ -ವರ್ತನೆ ನೋಡಿದಾಗ ಅಸಹ್ಯವೆನಿಸುತ್ತದೆ. ಜಿ.ಕೆ.ಗೋವಿಂದ ರಾವ್ ಎಂಬ ಲೇಖಕರೊಬ್ಬರು, "ಆನು ದೇವಾ ಹೊರಗಣವನು, ನನ್ನನ್ನು ನಿನ್ನ ಹತ್ತಿರದವನನ್ನು ಮಾಡಿ ಕೊಳ್ಳಲೇ ಇಲ್ಲ ಯಾಕೆ? ಎಂದು ಕಳಕಳಿಸಿದರು. ಈಗ 850 ವರ್ಷಗಳ ನಂತರ ತಮ್ಮ ಭಕ್ತರೂ ತಮ್ಮನ್ನು ಹತ್ತಿರ ಮಾಡಿಕೊಳ್ಳಲಿಲ್ಲವಲ್ಲ ಎಂದು ಮರುಗುವಂತಾಗಿರಬೇಕು. ದೇವರಿಂದಲೂ ಭಕ್ತರಿಂದಲೂ ದೂರವೇ ಉಳಿದ ಈ ಏಕಾಂಗಿತನ ಬಸವಣ್ಣನವರು ಮಾತ್ರ ಅನುಭವಿಸಲು, ಧಾರಣ ಮಾಡಲು ಸಾಧ್ಯ" ಎಂದು ಬರೆಯುತ್ತಾರೆ. (ಪ್ರಜಾವಾಣಿ. ದಿ. 27-7-2007)

ದಾರ್ಶನಿಕ ಚಿಂತಕ, ನವ ಧರ್ಮ ದ್ರಷ್ಟಾರ ಬಸವಣ್ಣನವರು ದೇವರಿಗೂ ಪ್ರಿಯವಾದವರು, ಭಕ್ತರಿಗೂ ಪ್ರಿಯವಾದವರು. ಅವರ ಮಾನವೀಯ ಸಾಮಾಜಿಕ ಕಳಕಳಿಯಿಂದ ಬರೆದ ವಚನಗಳು ಬಂಜಗೆರೆ, ಗೋವಿಂದರಾವರಂಥ ಪಾಪಿ ಲೇಖಕರ ಕೈಗೆ ಅಸ್ತ್ರಗಳಾಗಿ ಸಿಕ್ಕಿ ಬಸವಣ್ಣನವರನ್ನು ಚುಚ್ಚಲು ಬಳಕೆ -ಯಾಗುತ್ತವೆ ಎಂದು ಬಸವಣ್ಣನವರು ಖಂಡಿತಾ ಊಹಿಸಿರಲಿಕ್ಕಿಲ್ಲ. "ಅವನು ಬಹಳ ಒಳ್ಳೆಯವನು, ಸಭ್ಯ. ಆ ಸೂಳೆ ಮಗನನ್ನು, ಮಾದಾರ ಚೋದನನ್ನು ಹೊಡೀರಲೆ " ಎಂಬಂತಿದೆ ಬಂಜಗೆರೆ, ಗೋವಿಂದರಾವ್ ಮುಂತಾದವರ ತಂತ್ರ. ಜೀವಿತ ಕಾಲದಲ್ಲೇ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಅನುಯಾಯಿಗಳನ್ನು ಗಳಿಸಿಕೊಂಡ ಮಹಾಪುರುಷ ಬಸವಣ್ಣನವರು ಭಕ್ತರಿಗೆ ಬಹಳ ಪ್ರಿಯರಾದ್ದರಿಂದಲೇ ವೀರಶೈವ ವಾದಿಗಳಾದಿಯಾಗಿ ಇಡೀ ಲಿಂಗಾಯತ ಸಮಾಜ, ತಮ್ಮಲ್ಲಿನ ಅಭಿಪ್ರಾಯ ಭೇದ ಮರೆತು ಪುಸ್ತಕ ಮುಟ್ಟುಗೋಲಿಗಾಗಿ ಹೋರಾಡಿದ್ದು.

☐ ರಾಮಲಿಂಗಪ್ಪ ದೇವಣೆ, ಅಧ್ಯಕ್ಷ, ಲಿಂಗಾಯತ ಸಮಾಜ, ಬೀದರ್

? ಅಂಬೇಡ್ಕರ್ ಜಯಂತಿಯಂದು ಆನು ದೇವಾ ಪುಸ್ತಕ ಬಿಡುಗಡೆಯಾದ ದಿನದಂದೇ ಆಕ್ಷೇಪ ವ್ಯಕ್ತಪಡಿಸಿ (ಕನ್ನಡ ಪ್ರಭಾ), ದಿ. 22-4-2007ರಂದು ಮೊದಲನೇ ಪ್ರತಿಭಟನೆ, ರಾಸ್ತಾರೋಕ್ ಮಾಡಿ ದಿ.23-7-2007 ರವರೆಗೆ ಅವಿರತವಾಗಿ ಶ್ರಮಿಸಿ ಪುಸ್ತಕ ಮುಟ್ಟುಗೋಲಿಗೆ ಮುಖ್ಯ ಕಾರಣರಾಗಿದ್ದೀರಿ. ನಿಮಗೆ ವಿಶೇಷ ಸನ್ಮಾನ ಮಾಡಬೇಕೆಂದು ಭಕ್ತರೆಲ್ಲರ ಆಕಾಂಕ್ಷೆ, ಒಪ್ಪಿಗೆ ನೀಡಿ.

★ ಇದೇ ರೀತಿ ಬಹಳ ಜನ ಬಹಳ ಊರಿನಿಂದ ಕೋರಿದ್ದಾರೆ. ಪುಸ್ತಕ ಮುಟ್ಟುಗೋಲು ಆಗಿದ್ದು ಸಮಾಧಾನ ತಂದಿದೆಯಾದರೂ. ಒಬ್ಬ ಯಕಃಶ್ಚಿತ್ ಸಾಮಾನ್ಯ ವ್ಯಕ್ತಿಯ ಧರ್ಮಗುರು ನಿಂದಾತ್ಮಕ ಪುಸ್ತಕ ನಿಷೇಧಿಸಲು ಒಂದು ದೊಡ್ಡ ಸಮುದಾಯ ಸುಮಾರು 3 ತಿಂಗಳ ಕಾಲ ಹೋರಾಡಬೇಕಾದುದು ನಮಗೆ ನಾಚಿಕೆ ತಂದಿದೆ. ಸಿಖ್ಖರು, ಮುಸಲೀಮರಾಗಿದ್ದರೆ 24 ಗಂಟೆಗಳೊಳಗೆ ಆ ಮುಟ್ಟುಗೋಲು ಕ್ರಿಯೆ ನಡೆಯುತ್ತಿತ್ತು. ಸಮಾಜದೊಳಗಣ ನಿರ್ಲಿಪ್ತತೆ, ನಿರಭಿಮಾನ, ಅನೈಕ್ಯತೆ ತೊಲಗಿದರೆ ಮಾತ್ರ ಜೀವಂತ ಸಮಾಜವಾಗಲು ಸಾಧ್ಯ. ಪುಸ್ತಕ ವಿರುದ್ಧದ ಹೋರಾಟದಲ್ಲಿ 3 ತಿಂಗಳು ವ್ಯರ್ಥವಾಗಿ ಹೋಗಿ ಬಿಟ್ಟಿವೆ. ಇನ್ನು ಸನ್ಮಾನಕ್ಕೆಂದು ಮತ್ತಷ್ಟು ಸಮಯವನ್ನು ವ್ಯಯಿಸುವುದೆ?

☐ ಕರಿಬಸಪ್ಪ ಕೋರಿಶೆಟ್ಟರು, ಧಾರವಾಡ

? ಪುಸ್ತಕ ಮುಟ್ಟುಗೋಲು ಹಾಕಿದ್ದು ನಮಗೆ ಸಂತೋಷ ತಂದಿದೆ. ವಿಜಯೋತ್ಸವ ಆಚರಿಸಬಾರದು

ಎಂದು ತಾವು ಸೂಚಿಸಿದ್ದಾಗಿ ತಿಳಿಯಿತು. ಏಕೆ?

★ ವಿಜಯೋತ್ಸವವೆಂದು ಅದ್ದೂರಿಯಾಗಿ ಆಚರಿಸದೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮ ಮಾಡಿರಿ ಎಂದು ಹೇಳಿದೆ. ಮೇಲಿನ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಇರುವಂತೆ, ಒಂದು ಸಣ್ಣ ಕೆಲಸಕ್ಕೆ 3 ತಿಂಗಳು ಹೋರಾಡಿ ವಿಜಯೋತ್ಸವ ಆಚರಿಸಿಕೊಳ್ಳುವುದು ಸಣ್ಣತನ. ಸ್ವತಃ ಗೃಹ ಮಂತ್ರಿಯೇ ಅಡ್ಡಗಾಲು ಹಾಕಿದರೂ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಂಡಿದ್ದಕ್ಕೆ ಅದನ್ನೇ ಅಭಿನಂದಿಸಿರಿ.

✉ ಬಸವರಾಜ ಹಿರೇಕೊಪ್ಪಲು, ಬೆಂಗಳೂರು

? ಬೆಂಗಳೂರು ನಿವಾಸಿಯಾದ ನಾನು ದ್ವಿಚಕ್ರ ವಾಹನದಲ್ಲಿ ಓಡಾಡುವಾಗ ಪುರಭವನದ ಬಳಿ ಧರಣಿ ಸತ್ಯಾಗ್ರಹದ ಶಾಮಿಯಾನಾ ನೋಡಿದೆ. ದೊಡ್ಡ ಬ್ಯಾನರ್‌ಗಳನ್ನು ಕಟ್ಟಿದ್ದರು. ಅವುಗಳಲ್ಲಿ ಸಿದ್ಧಗಂಗಾ ಶ್ರೀಗಳು, ಸುತ್ತೂರು ಶ್ರೀಗಳ ದೊಡ್ಡ ಭಾವಚಿತ್ರ ನೋಡಿದೆ. ಅವರು ಮಾತ್ರ ಎಲ್ಲೆಲ್ಲಿಯೂ ತುಟಿ ಪಿಟಕ್ ಎಂದುದು ಕೇಳಬರಲಿಲ್ಲ. ಅಂದಾಗ ಅವರ ಚಿತ್ರಗಳೇಕೆ ?

★ ಕೆಲವರು ಏಕಲವ್ಯನಂತಹ ಅಭಿಮಾನಿ ಶಿಷ್ಯರಿರುತ್ತಾರೆ. ದ್ರೋಣಾಚಾರ್ಯ ಏನೂ ಕಲಿಸದೆ ಇದ್ದರೂ ದ್ರೋಣಾಚಾರ್ಯರ ಅನುಗ್ರಹವೇ ಸಾಕೆಂದು ತಾವೇ ಪ್ರಯತ್ನಿಸುತ್ತಾರೆ. ಅದೇ ರೀತಿ ಬಹುಶಃ ಇಂಥಾ ಶಿಷ್ಯರುಗಳೇ ಗುರುಗಳ ಭಾವ ಚಿತ್ರ ಹಾಕಿ ಅವರಿಗೆ ಗೌರವ ಸಲ್ಲಿಸಿರಬಹುದು . ಕೆಲವರು ಮೌನದಲ್ಲೇ ಚಾಣಾಕ್ಷತನ ತೋರುವರು. ಕೆಲಸ ಆದರೆ ನಾವು ತೆರೆಯ ಹಿಂದೆ ಪ್ರಯತ್ನಿಸಿದೆವು ಎನ್ನುವರು. ಕೆಲಸ ಆಗದೆ ಇದ್ದರೆ ನಮಗೆ ಗೊತ್ತಿತ್ತು ಆಗಲ್ಲ ಅಂತ. ಅದಕ್ಕೇ ಮೌನ ತಾಳಿದ್ದೆವು ಎನ್ನುತ್ತಾರೆ.

✉ ರಾಜಶೇಖರ ಪಾಟೀಲ್ , ಗುಲಬರ್ಗಾ

? ಆನು ದೇವಾ ಪುಸ್ತಕ ಮುಟ್ಟುಗೋಲು ಸರ್ಕಾರ ಮಾಡಿದ ತಪ್ಪು ಕೆಲಸ ಎಂಬ ಅರ್ಥದಲ್ಲಿ ಗದುಗಿನ ಸ್ವಾಮಿಗಳು ಭಾಷಣ ಮಾಡಿದ್ದಾರೆ. ಇದೇನಿದು ಇಡೀ ಸಮಾಜದ ಅಭಿಪ್ರಾಯವೇ ಒಂದು ರೀತಿಯದಾದರೆ ಇವರದೇ ಮತ್ತೊಂದು. ಇದರಿಂದ ನಮಗೆ ನೋವಾಗುತ್ತದೆ.

★ ಶ್ರೀಗಳ ಪ್ರೀತಿಪಾತ್ರ ಆಪ್ತ ಸಚಿವ ಎಂ.ಪಿ.ಪ್ರಕಾಶರಿಗೆ ತೀವ್ರ ಮುಖಭಂಗವಾಗಿದೆ ತಾನೆ? ಅದಕ್ಕೆ ಅವರನ್ನು ಸಂತೈಸಲು, ಬಂಜಗೆರೆ ಜಯಪ್ರಕಾಶರನ್ನು ಸಮಾಧಾನ ಪಡಿಸಿ, ಪ್ರಗತಿಪರ ಸಾಹಿತಿಗಳ ಸರ್ಟಿಫಿಕೇಟ್ ಪಡೆಯಲು ಹಾಗೆ ಹೇಳಿರಬಹುದು.

✉ ಧರ್ಮಣ್ಣ ಮಾಸ್ಟರ್, ಕಣಮಸ, ಆಳಂದ

? ಶಾಲಾ ತನಿಖೆಗೆ ಬಂದ ಓರ್ವರು ಕೋಳಿಮೊಟ್ಟೆ ಮಕ್ಕಳಿಗೆ ಬಿಸಿಯೂಟದಲ್ಲಿ ಸಿಗುವುದನ್ನು ನೀವು ತಪ್ಪಿಸಿದಿರಿ. ಹಸುವಿನಿಂದ ಬರುವ ಹಾಲು ಮಾಂಸವಲ್ಲವೆ? ಗಿಡದಲ್ಲಿ ಸಹ ಜೀವವಿರುತ್ತದೆ ಲಿಂಗಾಯತರಲ್ಲೇ ಎಷ್ಟು ಜನ ಮಾಂಸಾಹಾರ ಮಾಡುತ್ತಿಲ್ಲ ಎಂದು ವಿರಾಮದ ವೇಳೆಯಲ್ಲಿ ಪ್ರಶ್ನಿಸಿದರು. ಇದಕ್ಕೆ ಏನುತ್ತರ?

★ ದೊಡ್ಡವರಾದ ಮೇಲೆ ಏನುಬೇಕಾದರೂ ಆಯ್ಕೆ ಮಾಡಿಕೊಳ್ಳಲಿ. ಚಿಕ್ಕಮಕ್ಕಳಿಂದಲೇ ಇವರು ಮಾಂಸಾಹಾರಿ, ಇವರು ಸಸ್ಯಾಹಾರಿ ಎಂದು ವರ್ಗೀಕರಿಸುವುದು ಸಲ್ಲದು. ಗಿಡದಲ್ಲಿ ಪ್ರಾಣವಿದೆ ಜೀವವಿಲ್ಲ, ಹಸುವನ್ನು ಕೊಂದು ಹಾಲು ತೆಗೆಯುವುದಿಲ್ಲ ಕೆಚ್ಚಲನ್ನು ಹಿಂಡಿ ಹಾಲು ತೆಗೆಯುತ್ತೇವೆ. ಆದರಿಂದ ಅದಕ್ಕೂ ಹಿತ, ಜಗತ್ತಿಗೆ ಉಪಯೋಗ.

✉ ವೀರೇಶ್ ತಿಮ್ಮಪ್ಪನಹಳ್ಳಿ, ಕುಂಬಳಗೋಡು

? ಬಂಜಗೆರೆ ಜಯಪ್ರಕಾಶ್ ಪ್ರಾಮಾಣಿಕತೆ ಹಾಗೂ ಮುಗ್ಧ ಭಾವನೆಯಿಂದ ಆನು ದೇವಾ ಬರೆದಿದ್ದಾರೆ. ಅದರಲ್ಲಿ ಬಸವಣ್ಣನವರಿಗೆ ಅಗೌರವ ತೋರಿಸುವಂಥದು ಏನು ಇಲ್ಲ ಎಂದು ಕೆಲವರ ವಾದ. ಏನಂತೀರಿ?

★ ಸಂಜಯ್ ದತ್ ಮುಗ್ಧ ಭಾವನೆಯಿಂದಲೇ, ಭಾರತದ ಮೇಲಿನ ಅಭಿಮಾನದಿಂದ (?) ಪಾಕಿಸ್ತಾನ ತಯಾರಿತವಾದ ಎ.ಕೆ.ರೈಫಲ್ ಮತ್ತು ಪರವಾನಗಿ ರಹಿತ ಬಂದೂಕು ಇಟ್ಟುಕೊಂಡಿದ್ದರು. ಕಾನೂನು ಬಾಹಿರವಾದ ನಿಷಿದ್ಧ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡದ್ದು ಶಿಕ್ಷಾರ್ಹ ಅಪರಾಧವಾಯಿತೆಂದು ನ್ಯಾಯಾಲಯ ತೀರ್ಪಿತಿತಲ್ಲವೆ ?

ವಚನ ದುಂದುಭಿ -6

-ಸಚ್ಚಿದಾನಂದ

1. ಭಕ್ತಿ ಎಂಬ ಸಂಪತ್ತಿಗೆ ಯಾವುದು ತೆರಿಗೆ ?
2. "ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು" ಈ ನುಡಿ ಯಾರ ವಚನದಲ್ಲಿದೆ?
3. ತರಂಗಿಣಿ ಕಾದಂಬರಿಯು ಯಾವ ಯಾವ ಭಾಷೆಗಳಿಗೆ ಭಾಷಾಂತರಗೊಂಡಿದೆ ?
4. ವಚನ ಸಂಗಮ ಯಾವ ಯಾವ ಭಾಷೆಗಳಿಗೆ ಭಾಷಾಂತರಗೊಂಡಿದೆ ?
5. ಶರಣ ಮೇಳದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದಂದು ಸಮುದಾಯ ಪ್ರಾರ್ಥನೆಯ ನಂತರ ನಡೆಯುವ ಧಾರ್ಮಿಕ ವಿಧಿ ಯಾವುದು ?
6. ಬಸವ ಧರ್ಮ ಪೀಠವು ಹಿರಿಯರಿಗಾಗಿ ಸಂಘಟಿಸಿದ ಸಂಘಟನೆಯ ಹೆಸರೇನು?
7. ಲಿಂಗಾಯತ ಧರ್ಮದ ಪರಂಪರೆ ಯಾವುದು ?
8. ಮಾತಾಜಿಯವರು ಬಸವಣ್ಣನವರ ಬಗ್ಗೆ 63 ಗುಣಗಳನ್ನು ಗುರುತಿಸಿ ವಿವರವಾಗಿ ಬರೆದ ಪುಸ್ತಕ ಯಾವುದು ?
9. ಲಿಂಗಾಯತ ಧರ್ಮೀಯರು ಪಂಚ ಸೂತಕಗಳನ್ನು ಆಚರಿಸಬೇಕೆ?
10. ಲಿಂಗಾಯತ ಧರ್ಮೀಯರು ಆಚರಿಸುವ ವ್ರತ ಯಾವುದು ?
11. ಯಾವುದೇ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮೊದಲು ನಾವು ಏನನ್ನು ಮುದ್ರಿಸಬೇಕು?
12. ಲಿಂಗಾಯತ ಧರ್ಮೀಯರು ಒಳ ಪಂಗಡಗಳನ್ನು ನೋಡಿ ವೈವಾಹಿಕ ಸಂಬಂಧಗಳನ್ನು ಮಾಡುವುದು ಸರಿಯೇ ?
13. ಯಾರ ವಚನಗಳನ್ನು ಆದೇಶಗಳೆಂದು ಭಾವಿಸಬೇಕು ?
14. "ಕೂಡಲಿಲ್ಲದ ಘನವ ಕೂಡು ಪರಿ ಎಂತವ್ವಾ? ಹೇಳಿದೊಡೆ ಅದಕ್ಕದೆ ಕೊರತೆ".. ಎಂದು ಯಾರು ಯಾರಿಗೆ ಹೇಳಿದರು ?
15. "ಜಂಗಮವು ಹೊರಗಿರಲು ಲಿಂಗಾರ್ಚನೆ ಯಾವುದಯ್ಯಾ? ಪ್ರಾಣವ ಹೊರಗಿರಿಸಿ ಎಡೆಯಾಡುವ ದೇಹ ಉಂಟೇ?" ಎಂದು ಯಾರು ಯಾರಿಗೆ ಹೇಳಿದರು ?
16. "ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ".... ಇದು ಯಾರ ವಚನ ?
17. ಗುರು ಬಸವಣ್ಣನವರು ಲಿಂಗೈಕ್ಯರಾದ ದಿನಾಂಕ ತಿಂಗಳು ವರ್ಷ ಯಾವುದು ?
18. ಮಹಾತ್ಮ ಗಾಂಧೀಜಿಯವರಿಗೆ ಗುರು ಬಸವಣ್ಣನವರ ಬಗ್ಗೆ ತಿಳಿಸಿಕೊಟ್ಟ ಲಿಂ.ಧರ್ಮಿ ಯಾರು?
19. ಮುತ್ತು ನೀರಲ್ಲಾಯಿತು ವಾರಿಕಲ್ಲು ನೀರಲ್ಲಾಯಿತ್ತು...... ಇದು ಯಾರ ವಚನ ?
20. ಗುರು ವಚನದಿಂದಲ್ಲದೆ ಲಿಂಗವನರಿಯಬಾರದು,
ಗುರು ವಚನದಿಂದಲ್ಲದೆ ಜಂಗಮವನರಿಯಬಾರದು
.... ಹಿಂದಿಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದೊಡೆ
ಗುರುವಿಲ್ಲದ ಮುನ್ನ ಆಯಿತ್ತೆಂದೆನ್ನ ಬಹುದೆ? ಇದು ಯಾರು ಯಾರಿಗೆ ಹೇಳಿದ ವಚನ?

ವಚನ ದುಂದುಭಿ-5ರ ಸರಿ ಉತ್ತರಗಳು

1. ಗುರುವಿನ ಹಸ್ತದಿಂದ ಅನುಗ್ರಹ ಗೊಂಡವರು. 2. ಶ್ರಾವಣ ಮಾಸ. 3. ಶಿವಲಿಂಗ
4. ಗಣಮೇಳಾಪದಲ್ಲಿ ಭಾಗಿಗಳಾಗುವುದು. 5. ಚನ್ನಬಸವಾಂಕ
6. ಅನುಭವ ಮಂಟಪ ತೊರೆಯುವಾಗ ಬಸವಣ್ಣನವರು ನೆರೆದಿದ್ದ ಶರಣ ಸಮೂಹಕ್ಕೆ ಹೇಳಿದರು
7. ಸೊನ್ನಲಿಗೆಯ ಸಿದರಾಮೇಶ್ವರರು
8. ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ ತಮ್ಮ ಕುಲ ಬೆರೆಯದೇ ಲಿಂಗಾಯತ ಧರ್ಮ ಕೊಟ್ಟರು.

9. ಅಲ್ಲಮ ಪ್ರಭುದೇವರು ಮುಕ್ತಾಯಕ್ಕನಿಗೆ ಹೇಳಿದರು. 10.ದವನದ ಹುಣ್ಣಿಮೆ
11.ಆಜ್ಞಾ ಚಕ್ರ. 12.ಚಿತ್ತ. 13.ಬಾಲ ಲೀಲಾ ಮಹಾಂತ ಶಿವಯೋಗಿಗಳು
14.ಮಲೆಯ ಮಹದೇಶ್ವರರು. 15.ಸತ್-ಚಿತ್-ಆನಂದ
16.ಜಲ, ಗಂಧ, ಅಕ್ಷತೆ, ಪತ್ರೆ, ಪುಷ್ಪ, ದೀಪ, ಧೂಪ, ನೈವೇದ್ಯ
17.ಅರಿವು, ಆತ್ಮಾನುಭೂತಿ, ಸ್ವಾನುಭಾವ, ಸಮ್ಯಕ್ ಜ್ಞಾನ, ಸಮ್ಯಕ್ ದೃಷ್ಟಿ ಅನಾಹತನಾದ, ಅಂತಃಕರಣ ಮತ್ತು ಪ್ರಸನ್ನ ಚಿತ್ತ
18.ಮಡಿವಾಳ ಮಾಚಿದೇವರಿಗೆ. 19.ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮೀಜಿಯವರು
20.ಏಣಾಂಕಧರ ಸೋಮೇಶ್ವರ ಲಿಂಗ. 21.ಮಹಾಘನ ಸೋಮೇಶ್ವರ
22.ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ. 23.ವಚನ ಶಾಸ್ತ್ರ ಸಾರ ಭಾಗ -1
24.ವಕೀಲ ವೃತ್ತಿ. 25.ಜುಲೈ 2, ಇಸವಿ 1880

ಮುದ್ರಣ ದೋಷದಿಂದ ವಚನ ದುಂದುಭಿ - 4ರ ಕೆಲವು ಉತ್ತರಗಳು ತಪ್ಪಾಗಿ ಮುದ್ರಿತಗೊಂಡಿದ್ದವು ಆದ್ದರಿಂದ ಸರಿ ಉತ್ತರಗಳನ್ನು ಮತ್ತೊಮ್ಮೆ ಪ್ರಕಟಿಸಲಾಗುತ್ತಿದೆ.

ವಚನ ದುಂದುಭಿ - 4ರ ಸರಿ ಉತ್ತರಗಳು

1. ಕಂಬಳಿ ನಾಗಿದೇವ. 2. ಗೊಗ್ಗಯ್ಯ. 3. ವಿಭೂತಿಯೇ ಒಳಗುಂದದ ಅರಿಸಿನ.
4. ಬುಟ್ಟಿ ಹೆಣೆಯುವ ಕಾಯಕ. 5. ಶರಣ ತೆಲಗು ಜೊಮ್ಮಯ್ಯ.
6. ಉಳುವೆಯ ಮಹಾಮನೆಯ ಹತ್ತಿರ. 7. ಶರಣ ಅಂಬಿಗರ ಚೌಡಯ್ಯ
8. ಶರಣ ಸುಜ್ಞಾನಿದೇವ. 9.ಉಗ್ಘಡಿಸುವ ಗಬ್ಬಿದೇವಯ್ಯ.
10. ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರು ದೀಪಾವಳಿಯಂದೇ ಜನಿಸಿದ್ದಾರೆ.
11. ಗಂಟಲಿನ ಭಾಗದಲ್ಲಿ. 12. ಅಕ್ಕನ ದಿವ್ಯ ವ್ಯಕ್ತಿತ್ವವನ್ನು ಜಗತ್ತಿಗೆ ತಿಳಿಸಲು
13. ವೈದ್ಯ ಸಂಗಣ್ಣ 14. ಬೆಳಗಾವಿ ಜಿಲ್ಲೆಯ ಮರಡಿ ನಾಗಲಾಪುರ
15. ಅಮುಗೇಶ್ವರ ಲಿಂಗ 16. ನಿರ್ಬಂಧನೆಗಳಿರಲಿಲ್ಲ
17. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಕರುಣೋದಕ, ಕರುಣ ಪ್ರಸಾದ.
18. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯನಿಗೆ. 19. ನನ್ನಯ್ಯ.
20. ಅಲ್ಲಮ ಪ್ರಭುದೇವರು ಅಕ್ಕ ಮಹಾದೇವಿಯವರಿಗೆ ಹೇಳಿದರು.
21. ಗುರುವಿನಿಂದ ಇಷ್ಟಲಿಂಗದೀಕ್ಷೆ ಪಡೆದರೆ ಮಾತ್ರ ಲಿಂಗಾಯತರಾಗುತ್ತಾರೆ.
22. ವಿಭೂತಿ ವೀಳ್ಯ ಸಂಸ್ಕಾರ. 23. ಬಳ್ಳೇಶ್ವರ
24. ಶಿವಲೆಂಕ ಮಂಚಣ್ಣ. 25. ಕನ್ನಡಿ ಕಾಯಕದ ರೇಚಮ್ಮ.

ವಚನ ದುಂದುಭಿ - 4 ಮತ್ತು 5 ರ ಸರಿಯುತ್ತರ ನೀಡಿದವರು

1. ಜ್ಯೋತಿ ನಾಗರಾಜ, ಚಳ್ಳಕೆರೆ
2. ರಾಮಶೆಟ್ಟಿ ಲಿಂಗಾಯತ, ಹಂಗನಹಳ್ಳಿ
3. ಶಶಿ ಕುಮಾರ, ಭದ್ರಾವತಿ
4. ಅನಿತಾ ಶಂಕರ್, ಭದ್ರಾವತಿ
5. ದಾನೇಶ್ವರಿ ಅಣ್ಣಾಸಾಹೇಬ ಪಾಟೀಲ
6. ಎಚ್.ಚಂದ್ರಿಕಾ, ಭದ್ರಾವತಿ
7. ಎಸ್.ಎನ್.ನಂದರಗಿ,ಧಾರವಾಡ
8.ಮಲ್ಲನಗೌಡ ಪೋಲಿಸ್ ಪಾಟೀಲ್
9.ರತ್ನಮ್ಮ ಜಯಣ್ಣ, ಮೈಸೂರು
10.ನಿರ್ಮಲಾ ಜಯದೇವ್,ಬೆಂಗಳೂರು
11.ನಾಗಮ್ಮ, ಭದ್ರಾವತಿ
12.ಮಮತಾ ಪ್ರವೀಣ, ಭದ್ರಾವತಿ
13.ರೂಪಾ, ಜಗದೀಶ್ ಭದ್ರಾವತಿ
14.ಶಾಂತಮ್ಮ ಲಿಂಗಾಯತ ಭದ್ರಾವತಿ

ಬಂಜಗೆರೆಯ ಭೂತಚೇಷ್ಟೆ

-ಮಾತಾಜಿ

ಬಸವ ತತ್ತ್ವವಾದಿಗಳು ಭೂತ ಪ್ರೇತ ಚೇಷ್ಟೆಗಳನ್ನು ನಂಬುವುದಿಲ್ಲ. ಆದರೆ ಬಂಜಗೆರೆ ಎಂಬ ಭೂತದ ಚೇಷ್ಟೆ ಇಡೀ ರಾಜ್ಯದಲ್ಲೆಲ್ಲ ಬಹಳಷ್ಟು ಹರಿದಾಡಿ, ಕಳವಳವನ್ನು ಅಶಾಂತಿಯನ್ನು ಹುಟ್ಟು ಹಾಕಿತು. ಸಾಮಾನ್ಯವಾಗಿ ಇಂಥ ಕೃತಿಗಳ ವಿಮರ್ಶೆ ಮಾಡಿ ನಾನು ಲೇಖನ ಅಥವಾ ಪುಸ್ತಕ ಬರೆಯುವುದು ಅಭ್ಯಾಸ. ಮಹಾಚೈತ್ರ, ವಚನ-ನಿರ್ವಚನ ಇವುಗಳ ಮೇಲೆ ವಿಮರ್ಶೆ ಬರೆದಿದ್ದೆ. ಹಾಗೆಯೇ ಚಿದಾನಂದ ಮೂರ್ತಿಯವರಿಗೆ ಒಂದು ಕೈಗನ್ನಡಿ ಎಂಬ ವಿಮರ್ಶಾ ಗ್ರಂಥ ಬರೆದಿದ್ದೆ; ಆನು ದೇವಾ ಹೊರಗಣವನು ಪುಸ್ತಕ ವಿಮರ್ಶಿಸಿ ನಾನು ಖಂಡಿತವಾಗಿಯೂ ಬರೆಯುತ್ತೇನೆ ಎಂದು ಅನೇಕರು ನಿರೀಕ್ಷಿಸಿದರು. ಬಂಜಗೆರೆಯವರ ಆ.ದೇ.ಹೊ ಪುಸ್ತಕದ ವಿರುದ್ಧ ಮೊಟ್ಟ ಮೊದಲು ಧ್ವನಿ ಎತ್ತಿದ್ದು ನಾನೇ ಆದರೂ ಪುಸ್ತಕವನ್ನು ವಿಮರ್ಶಿಸಿ ಸಮಗ್ರ ಪುಸ್ತಕ ಬರೆಯಲಿಲ್ಲ. ಕಲ್ಯಾಣ ಕಿರಣದಲ್ಲಿ ಮಾತ್ರ ವಿಮರ್ಶಾತ್ಮಕ ಲೇಖನಗಳನ್ನು ಬರೆದು ಪ್ರಕಟಿಸಿದೆನು. ನಾನು ಬರೆಯದೆ ಇರಲು ಹಲವು ಕಾರಣ ಹೀಗಿವೆ. ಪುಸ್ತಕದಲ್ಲಿ ಎರಡೋ ಮೂರೋ ಬೆರಳೆಣಿಕೆಯಷ್ಟು ತಪ್ಪುಗಳಿದ್ದರೆ ವಿಮರ್ಶಿಸಬಹುದು. ಇಡೀ ಪುಸ್ತಕದ ತುಂಬ ಸುಳ್ಳೇ ಸೃಷ್ಟಿಯಾಗಿರುವಾಗ ಯಾವುದನ್ನು ವಿಮರ್ಶಿಸುವುದು ಯಾವುದನ್ನು ಬಿಡುವುದು. ಮೂಗಿಗಿಂತ ಮೂಗುತಿ ಭಾರ ಎಂಬಂತೆ ಬಂಜಗೆರೆ ಪುಸ್ತಕದ ವಿಮರ್ಶೆಯೇ ದೊಡ್ಡದಾಗಿ ಬಿಡಬಹುದು ಎಂಬುದು ಒಂದು ಕಾರಣವಾದರೆ, ಧರ್ಮಗುರುವಿನ ಬಗ್ಗೆ ಅಸಭ್ಯ, ಅಶ್ಲೀಲವಾದ ಮಾತುಗಳು, ಊಹೆಗಳು ತುಂಬಿರುವಾಗ ಅವುಗಳನ್ನು ಉಲ್ಲೇಖಿಸಿ ಬರೆದು ''ಮಾಡಿದವರ ಪಾಪ ಆಡಿದವರ ಬಾಯಲ್ಲಿ'' ಎಂಬ ನಾಣ್ಣುಡಿಯಂತೆ, ಬಂಜಗೆರೆಯನ್ನು ಸುತ್ತುವ ಪಾಪದಲ್ಲಿ ನಾನೂ ಪಾಲನ್ನು ಪಡೆಯಬೇಕಾದೀತಲ್ಲ ಎಂಬುದು ಇನ್ನೊಂದು ಕಾರಣ. ಹೀಗಾಗಿ, 'ಕಡಿದಷ್ಟು ತುರಿಸಿಕೊಳ್ಳೋಣ' ಎಂಬ ಭಾವದಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲು, ಉಳಿದವರ ಗಮನ ಸೆಳೆಯಲು ಎಷ್ಟು ಬೇಕೋ ಅಷ್ಟು ಮಾತ್ರ ಆಯ್ದುಕೊಂಡೆ.

ಶರಣೆ. ದೇವಿಕಾ ಅವರು ಹೇಳಿದರು ಅವರ ಪತಿ ಶರಣಪ್ಪನವರು ಹೇಳಿದರಂತೆ, 'ಬಂಜಗೆರೆಯವರ ಪುಸ್ತಕ ಆ.ದೇ.ಹೊ ಸಾಕಷ್ಟು ಮನಸ್ಸುಗಳನ್ನು ಕಲಕಿದೆ, ಸಂದೇಹಗಳನ್ನು ಹುಟ್ಟು ಹಾಕಿದೆ. ಆದ್ದರಿಂದ ಇವುಗಳಿಗೆ ಪರಿಹಾರ ಬೇಕಾಗಿದೆ. ಆ ದೃಷ್ಟಿಯಿಂದ ವಿಮರ್ಶೆಯ ಪುಸ್ತಕ ಬೇಕಾಗಿದೆ.' ಈ ದೃಷ್ಟಿಯಿಂದ ನಾನು ಕೃತಿಯ ಪರಾಮರ್ಶೆಯನ್ನು ಕೈಗೆ ಎತ್ತಿಕೊಂಡಿದ್ದೇನೆ.

ಪುಸ್ತಕವನ್ನು ಪ್ರವೇಶಿಸುವ ಮೊದಲು ಪ್ರೊ|| ಜೋಗನ್ ಶಂಕರ್ ಅವರ ಮುನ್ನುಡಿಯ ವಿಮರ್ಶೆ ಅಗತ್ಯವಿದೆ. ''ಇಂಡಿಯಾದಲ್ಲಿಯೇ ಪ್ರಪ್ರಥಮವಾಗಿ ಜರುಗಿದ ಸಾಮಾಜಿಕ ಕ್ರಾಂತಿಯ ಬಹುತೇಕ ಕಾರಣ ಕರ್ತರು ಅಸ್ಪೃಶ್ಯ ಜಾತಿಯ ಹಿನ್ನೆಲೆಯವರಾಗಿದ್ದರು. ಅವರು ತಮ್ಮ ಮೇಲೆ ಹೇರಿದ ಸಾಮಾಜಿಕ ನಿಷೇಧಗಳ ಭಾರದ ವಿರುದ್ಧ ಪ್ರತಿಭಟನೆ ಹಾಗೂ ವೈದಿಕಶಾಹಿ ಜಾತಿ ವ್ಯವಸ್ಥೆಯ ವಿರುದ್ಧ ಈ ತಳವರ್ಗದ ವಚನಕಾರರು ನಡೆಸಿದ ಹೋರಾಟದ ಪೂರ್ತಿ ಚಿತ್ರಣ ನೀಡುವ ದಿಸೆಯಲ್ಲಿ ಇದು ಮೊದಲ ಹೆಜ್ಜೆ ಎಂಬುದು ನನ್ನ ನಂಬಿಕೆ.''

ಮತ್ತೆ ಹೇಳುತ್ತಾರೆ ಪ್ರೊ||ಜೋಗನ್ ಶಂಕರ್, ''ಬಂಜಗೆರೆಯವರ ಲೇಖನಗಳು ಅಗ್ನಿ ಪತ್ರಿಕೆಯಲ್ಲಿ ಪ್ರಕಟಗೊಂಡಾಗ ನಾನು ಇಂತಹ ವಿದ್ವಾಂಸರಿಂದ ದೊಡ್ಡ ಪ್ರಮಾಣದಲ್ಲಿ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿದೆ. ಆದರೆ ನನ್ನ ನಿರೀಕ್ಷೆ ಹುಸಿಯಾಯಿತು........ ಮುಂಬರುವ ದಿನಗಳಲ್ಲಿ ಅವರೆಲ್ಲ ಮೌನ ಮುರಿದು ಬಸವಣ್ಣನ ಜಾತಿ ಮೂಲದ ಬಗ್ಗೆ ಮತ್ತೆ ಸಂಶೋಧನೆಯ ಮಾತುಕತೆಗಳ ಕಲರವ ಹರಡುವರೆಂಬ ಆಸೆ ನನ್ನದು.''

ಈಗ ಕಲರವ ಹರಡಿರುವುದಕ್ಕಿಂತ ವಿಪ್ಲವ, ಕಾಕಾರವ ಹರಡಿರುವುದೇ ಹೆಚ್ಚು. ಒಂದು ನಿರ್ಧಾರಿತ ಐತಿಹಾಸಿಕ ಸತ್ಯ ಎಲ್ಲರಿಗೂ ಮನವರಿಕೆಯಾಗಿರುವಾಗ, ಬಂಜಗೆರೆಯವರ ಅತಾರ್ಕಿಕ ತರ್ಕ (Illogical logic) ಕುತರ್ಕವಾದ್ದರಿಂದ ಉಳಿದ ವಿದ್ವಾಂಸರು ಅದನ್ನು ಉದಾಸೀನದಿಂದಲೇ ನೋಡಿರುವುದಕ್ಕೆ ಸಾಕ್ಷಿಯಾಗಿದೆ ಈ ಮೌನ! ಅಲ್ಲದೆ ಕನ್ನಡ ನಾಡಿನ ಕೆಲವು ಪತ್ರಿಕೆಗಳು ಓದುಗರ ನೆಲೆಯಲ್ಲಿ ಗೌರವವನ್ನು ಕಳೆದುಕೊಂಡಿವೆ. ಅವುಗಳೊಳಗಣ ಬೈಗುಳ ಪೂರ್ಣ, ಅಶ್ಲೀಲ ಭಾಷೆ, ಅಸಭ್ಯ ನಿರೂಪಣೆ ಮತ್ತು ಬ್ಲ್ಯಾಕ್ ಮೇಲ್ ತಂತ್ರಗಳು ಅವನ್ನು ಪೀತ ಪತ್ರಿಕೆಗಳನ್ನಾಗಿ ಮಾಡಿದ್ದು ಅಂಥವನ್ನು ಓದಲಿಕ್ಕೆ ಜನ ಹಿಂಜರಿಯುವರು, ಇಟ್ಟುಕೊಳ್ಳಲು ನಾಚಿಕೆ ಪಡುವರು. ಹೀಗಾಗಿ ಅಂಥ ಪತ್ರಿಕೆಗಳಲ್ಲಿ ಬರುವ ಲೇಖನಗಳು ಕೆಲವೊಮ್ಮೆ ''ತಲೆ ಕೆಟ್ಟವರ ಬರಹ ಇವಕ್ಕೆ ಉದಾಸೀನವೇ ಮದ್ದು.'' ಎಂದು ಸುಸಂಸ್ಕೃತರು, ಸಭ್ಯರು ಉಪೇಕ್ಷೆ ಮಾಡುವರು. ಪ್ರೊ|| ಶಂಕರ್ ಅವರಿಗೆ ಈ ಮೌನ ಆಶ್ಚರ್ಯಕರ ಹಾಗೂ ಆತಂಕಕಾರಿಯಾಗಿ ಕಂಡಿದೆ. ಆದರೆ ಅವರು ಊಹಿಸಿರುವುದು ವಿದ್ವಾಂಸರು

ಸುದೀರ್ಘ ಚಿಂತನೆಯಲ್ಲಿ ತೊಡಗಿಸಿದ ಪರಿಣಾಮ ಎಂಬುದಾಗಿದೆ. ಆದರೆ ಮತಿವಂತರು ಬಂಜಗೆರೆಯವರ ಆತಂಕಕಾರಿ ಚಿಂತನೆಯಿಂದ ಆಘಾತಗೊಂಡು ಉಪೇಕ್ಷೆಯಿಂದ ತಳೆದಿರುವ ಮೌನ ಎಂಬುದು ಜಯಪ್ರಕಾಶ್ ಮತ್ತು ಜೋಗನ್ ಅವರಿಗೆ ಅರ್ಥವಾದಂತೆ ಕಾಣದು.

ಬಹುಶಃ ವಿದ್ವಾಂಸರ ಈ ತಣ್ಣನೆಯ ಪ್ರತಿಕ್ರಿಯೆ ಅರ್ಥಾತ್ ಮೌನದಿಂದ ಉಭಯ ಮಿತ್ರರು ಅಜ್ಜಿ ಬಣವೆಗೆ ಬೆಂಕಿ ಇಟ್ಟಂತೆ ಮಾಡಿದ್ದಾರೆ. ಒಂದು ಹಳ್ಳಿಯಲ್ಲಿ ಒಬ್ಬ ಅಜ್ಜಿ ಬಹಳ ಸಮಯಕಾಲ ಕಷ್ಟಪಟ್ಟು ಹಣ ಗಳಿಸಿ ಒಂದು ಚಂದ ಸೀರೆಯನ್ನು ಕೊಂಡಿದ್ದಳು. ಮರುದಿನ ಕೆಲಸಕ್ಕೆ ಹೋಗದೆ ಆಕೆ ಆ ಸೀರೆ ಉಟ್ಟು ಸಿಹಿ ನೀರಿನ ಬಾವಿ ಕಟ್ಟೆಗೆ ಹೋಗಿ ಬಂದಳು, ಗುಡಿಗೆ ಹೋಗಿ ಬಂದಳು. ಯಾರೂ ಗಮನಿಸಲೇ ಇಲ್ಲ. ಬಹಳ ಬೇಸರವಾಯಿತು. ನಿದ್ದೆ ಬರದೆ ಚಟಪಟಿಸಿದಳು. ರಾತ್ರಿ ಒಂದು ಗಂಟೆ ಸುಮಾರಿಗೆ ಊರ ಹಿತ್ತಲಿನಲ್ಲಿ ಬಣವೆಗೆ ಬೆಂಕಿ ಬಿದ್ದಿತ್ತು. ಊರಿನ ಮಂದಿ ಎಲ್ಲ ಗಡಬಡಿಸಿ ಎದ್ದು ಬೆಂಕಿ ಆರಿಸಲು ತೊಡಗಿದರು. ಹೆಣ್ಣು ಮಕ್ಕಳೆಲ್ಲ ಗಂಡಸರು ಬೆಂಕಿ ಆರಿಸುವುದನ್ನು ಒಂದು ಕಡೆ ನಿಂತು ನೋಡುತ್ತಿದ್ದರು. ಆಗ ಒಬ್ಬ ಮಹಿಳೆ ಬೆಂಕಿಯ ಬೆಳಕಿನಲ್ಲಿ ಅಜ್ಜಿಯ ಸೀರೆ ನೋಡಿ, "ಸೀರೆ ಎಷ್ಟು ಚಂದವಿದೆಯಲ್ಲಾ?" ಎಂದಳು. ಆಗ ಆ ಮುದುಕಿ ಹೇಳಿದಳು, "ಹಗಲಲ್ಲೇ ಯಾರಾದರೂ ಇಷ್ಟು ಅಂದಿದ್ದರೆ ಬಣವೆಗೆ ಯಾಕೆ ಬೆಂಕಿ ಬೀಳುತ್ತಿತ್ತು?" ಅಂದರೆ ತನ್ನ ಸೀರೆ ಪ್ರದರ್ಶನಕ್ಕಾಗಿ ಅಜ್ಜಿ ಬಣವೆಗೆ ಬೆಂಕಿ ಹಚ್ಚಿದಂತೆ ಜಯಪ್ರಕಾಶ್ ಮತ್ತು ಶಂಕರ್ ಜೋಡಿ ಆನು ದೇವಾ ಪುಸ್ತಕವನ್ನು ವಿದ್ವಾಂಸರ ಮೌನ ಮುರಿಯಲು ಹೊರ ತಂದಂತೆ ಕಾಣುತ್ತದೆ.

"ಇಂಡಿಯಾದಲ್ಲಿಯೇ ಪ್ರಪ್ರಥಮವಾಗಿ ಜರುಗಿದ ಸಾಮಾಜಿಕ ಕ್ರಾಂತಿಯ ಬಹುತೇಕ ಕಾರಣಕರ್ತರು ಅಸ್ಪೃಶ್ಯ ಜಾತಿಯ ಹಿನ್ನೆಲೆಯವರಾಗಿದ್ದರು." ಎನ್ನುತ್ತಾರೆ ಪ್ರೊ|| ಜೋಗನ್ ಶಂಕರ್. ಇಡೀ ಪುಸ್ತಕದುದ್ದಕ್ಕೂ ಬಸವಣ್ಣನವರು ಬ್ರಾಹ್ಮಣ ಮೂಲದವರಲ್ಲ ಮಾದಿಗರು ಎಂಬುದನ್ನು ವಚನಗಳನ್ನು ಅಪಾರ್ಥ ಮಾಡಿ, ತೇಪೆ ಹಚ್ಚಿ ಸಿದ್ಧಮಾಡುವ ಸಾಹಸದಲ್ಲಿ ಬಂಜಗೆರೆಯವರು ನಿರತರಾಗಿದ್ದಾರೆ. ಅದಕ್ಕೆ ಕಾರಣ ವೈದಿಕ ಧರ್ಮ, ಮನುವಾದ ಕುರಿತು ಲೇಖಕರಿಗಿರುವ ಆಕ್ರೋಶ. ನಮಗೆ ಸಹ ಈ ಬಗ್ಗೆ ಆಕ್ಷೇಪ, ಅಸಮ್ಮತಿಗಳಿವೆ. ಆದರೆ ಅದಕ್ಕಾಗಿ ಬಸವಣ್ಣನವರನ್ನು ದಲಿತರನ್ನಾಗಿ ಮಾಡುವುದು ಅಕ್ಷರಶಃ ಅವರ ವ್ಯಕ್ತಿತ್ವ ನಾಶ ಮಾಡಿದಂತೆ. ಹೇಗೆಂದರೆ, ಡಾ|| ಅಂಬೇಡ್ಕರರು ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಸಾಕಷ್ಟು ನೋವು ತಿಂದು, ಅವಮಾನ ಸಹಿಸಿಕೊಂಡು ಬ್ರಿಟಿಷರ ಶಿಕ್ಷಣಾವಕಾಶದಿಂದ ಮುಂದೆ ಬಂದು ಸಂವಿಧಾನ ಶಿಲ್ಪಿಗಳಾಗುವ ಅವಕಾಶ ಪಡೆದರು. ಕ್ರಾಂತಿ ಪುರುಷ ಬಸವಣ್ಣನವರು ಅತ್ಯಂತ ಮೇಲ್‌ಸ್ತರದಲ್ಲಿದ್ದ ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ಅಲ್ಲಿಯ ಕಂದಾಚಾರಗಳಿಗೆ ಬೇಸತ್ತುದಲ್ಲದೆ ಶೂದ್ರ, ದಲಿತರನ್ನು ಅಮಾನ-ವೀಯತೆಯಿಂದ ಹೀನಾಯವಾಗಿ ನಡೆಸಿ ಕೊಳ್ಳುತ್ತಿದ್ದುದನ್ನು ಕಂಡು ಮಮ್ಮಲ ಮರುಗಿ ಜಾತೀಯತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಟಕ್ಕೆ ನಿಂತರು. ಇದೇ ಬಸವಣ್ಣನವರ ವ್ಯಕ್ತಿತ್ವದ ವಿಶೇಷ. ಬಂಜಗೆರೆಯವರ ಸಂಚು ಏನೆಂದರೆ ಬ್ರಾಹ್ಮಣ ಮೂಲದವರಾದ ಬಸವಣ್ಣನವರಿಗೆ ಕ್ರಾಂತಿಯ ಹಿರಿಮೆ ಹೋದರೆ ಆಗ ಬ್ರಾಹ್ಮಣ ವರ್ಣದವರಿಗೆ ಹೆಗ್ಗಳಿಕೆ ಸಲ್ಲುತ್ತದೆ ಹಾಗೆ ಹೋಗದೆ, ಅವರನ್ನು ಮಾದಿಗರನ್ನಾಗಿ ಮಾಡಿದರೆ ಆ ಕ್ರಾಂತಿಯ ಹಿರಿಮೆ ದಲಿತ ವರ್ಗಕ್ಕೆ ಸಲ್ಲುವುದು ಎಂಬುದು. ಇದೊಂದು ಹುಚ್ಚು ಹುನ್ನಾರ. ಅದಕ್ಕಾಗಿ ಸುತ್ತು ಬಳಸಿನ ದಾರಿಯಲ್ಲಿ ನಡೆದು ದಲಿತ ಮಹಿಳೆಯ ಸಂಗ ಮಾಡಿಸುವುದು ಇಲ್ಲವೇ ತಂದೆಯನ್ನೇ ಮಾದಾರ ಜಾತಿಯವನನ್ನಾಗಿ ಮಾಡುವುದು ಎಲ್ಲ ವಿಕೃತ ಮನಸ್ಸಿನ ಚಿಂತನೆಗಳು.

ಈಗಿನ ಕೆಲವು ದಲಿತರು ಪ್ರಚಂಡ ಬುದ್ಧಿವಂತರಾಗಿ ಬಂಜಗೆರೆಯವರಂತೆ ಪ್ರಳಯಾಂತಕ ಬುದ್ಧಿಯವರು ಸಹ ಆಗಿರಬಹುದು. ಇದಕ್ಕೆ ಬ್ರಿಟಿಷರ ಶಿಕ್ಷಣ, ಡಾ|| ಅಂಬೇಡ್ಕರರ ಪ್ರಯತ್ನ, ಸಂವಿಧಾನ ನೀಡಿದ ಸವಲತ್ತು, ಲಭ್ಯವಾಗಿರುವ ಮೀಸಲಾತಿ ಮುಂತಾದ ಹಲವಾರು ಕಾರಣಗಳು ಸಿಗುತ್ತವೆ. ಆದರೆ 12ನೆಯ ಶತಮಾನದ, 20ನೆಯ ಶತಮಾನದವರೆಗೆ ಇದ್ದ ಸಾಮಾಜಿಕ ಶೈಕ್ಷಣಿಕ ಸ್ಥಿತಿಯಲ್ಲಿ ದಲಿತರು ಕ್ರಾಂತಿಕಾರಿಗಳಾಗಿ ಹೆಜ್ಜೆ ಇಡಲು ಸಾಧ್ಯವೇ ಇರಲಿಲ್ಲ. ವ್ಯಕ್ತಿಯ ಮನಸ್ಸಿನಲ್ಲಿ ಕ್ರಾಂತಿಕಾರಿ ಆಲೋಚನೆಗಳು ಬಂದರೂ ಅವನ್ನು ಪ್ರಕಟಿಸಲು, ಜನರನ್ನು ಸಂಘಟಿಸಲು ಸಾಧ್ಯವಿರುತ್ತಿತ್ತೇ? ಬ್ರಾಹ್ಮಣ ಪುರೋಹಿತಶಾಹಿ, ಕ್ಷತ್ರಿಯ ರಾಜಶಾಹಿ ಇವೆರಡರ ದಬ್ಬಾಳಿಕೆಯಲ್ಲಿ ಯಾವ ಕ್ರಾಂತಿಕಾರಿ ಆಲೋಚನೆಗಳಿಗೂ ಅವಕಾಶ ದೊರೆಯುತ್ತಿರಲಿಲ್ಲ. ಕೆಸರಿನಲ್ಲಿ ಬಿದ್ದ ಓರ್ವನನ್ನು ಮೇಲೆತ್ತಲು ಮೇಲೆ ನಿಂತವನು, ಬಂಧ ಮುಕ್ತನಾದವನು ಮಾತ್ರ ಪ್ರಯತ್ನಿಸಲು ಸಾಧ್ಯವಿತ್ತು. ಹಾಗೆ ಅಸ್ಪೃಶ್ಯತೆಯ ಕೆಸರಿನಲ್ಲಿ ಸಿಕ್ಕಿ ಒದ್ದಾಡುತ್ತಿದ್ದವರನ್ನು ಅದರಿಂದ ಹೊರತರಲು ಮೇಲ್ ವರ್ಣೀಯರು ಪ್ರಯತ್ನಿಸಿದರೆ ಮಾತ್ರ ಸಾಧ್ಯವಿತ್ತು. ಈ ಹಿನ್ನೆಲೆಯಲ್ಲಿ ಬ್ರಾಹ್ಮಣ ವರ್ಣೀರಾದ ಬಸವಣ್ಣನವರು ಸವರ್ಣೀಯರು ಅವರ್ಣೀಯರ

ಮಧ್ಯೆ ನಿಂತು ಸಮಾನತಾ ಚಳುವಳಿಯ ನೇತಾರತ್ವ ವಹಿಸಿಕೊಂಡರೆಂದೇ ಒಂದು ಮಹತ್ವ ಪೂರ್ಣ ಆಂದೋಲನ ಸಾಧ್ಯವಾಯಿತು.

ಅತ್ಯಂತ ಅಜಾಗ್ರತ ಸ್ಥಿತಿಯಲ್ಲಿರುವ ಸಮೂಹವನ್ನು ಎಚ್ಚರಿಸಲು ಓರ್ವ ವ್ಯಕ್ತಿ ಬೇಕು. ಸಮುದಾಯವು ತನ್ನಿಂದ ತಾನೇ ಜಾಗೃತಗೊಳ್ಳದು. ಜಾಗೃತಿ ಕಟ್ಟಿಗೆಯೊಳಗಣ ಬೆಂಕಿಯಂತೆ ಸುಪ್ತವಾಗಿರುತ್ತದೆ. ಹೊರಗಿನಿಂದ ಹಚ್ಚುವ ಕಿಡಿ ಅತ್ಯಗತ್ಯ. ಹಾಗೆಯೇ ಬಸವಣ್ಣನವರು ಜಾಗೃತಗೊಂಡ ಚೇತನವಾಗಿ ಸುಪ್ತವಾಗಿದ್ದ ಜನ ಸಮೂಹವನ್ನು ಚಿಂತನೆಯ ಕಿಡಿಯಿಂದ ಜಾಗೃತಗೊಳಿಸಿದರು. ಶೋಷಿತರಲ್ಲಿ ಶೋಷಿತರಾಗಿದ್ದ ದಲಿತರ ಸಮೀಪ ಹೋದರು. ಎಚ್ಚರಿಸಿದರು, ಸಂಸ್ಕಾರ ನೀಡಿದರು. ಆತ್ಮ ವಿಶ್ವಾಸ ತುಂಬಿದರು. ಇದರಿಂದಾಗಿ ಶೂದ್ರ ಮತ್ತು ದಲಿತ ವರ್ಗಗಳ ಶರಣರೇ ಕ್ರಾಂತಿಪುರುಷ ಬಸವಣ್ಣನವರ ಸಾಮಾಜಿಕ, ಧಾರ್ಮಿಕ ಕ್ರಾಂತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಗಲುಗೊಟ್ಟು ದುಡಿದರು ಎಂಬುದನ್ನು ನಾವು ಅರಿಯಬಹುದು.

ಬಂಜಗೆರೆ ಜಯಪ್ರಕಾಶ್ "ಲೇಖಕನ ಮಾತು" ಎಂಬುದರಲ್ಲಿ ಇಡೀ ಪುಸ್ತಕದ ಸಾರಾಂಶವನ್ನು ಹೀಗೆ ಬರೆಯುತ್ತಾರೆ.

ದಲಿತ ಜಾತಿಯಲ್ಲಿ ಹುಟ್ಟಿದ ಶಿವ ಸಂತಾನವಾದುದರಿಂದ ಬಾಲಯೋಗಿಯಾಗಿ ಕೂಡಲ ಸಂಗಮನಾಥನ ಸೇವೆಯಲ್ಲೇ ಬೆಳೆದು, ಅದರಿಂದಾಗಿಯೇ ಸಂಗನ ಬಸವಣ್ಣ ಎಂದು ಕರೆಯಲ್ಪಡುತ್ತಿದ್ದ ಎಂಬ ಅಂಶವನ್ನು ಈ ವಿಶ್ಲೇಷಣೆಯಲ್ಲಿ ನಾನು ನಿರೂಪಿಸಿದ್ದೇನೆ.

ಬಸವಣ್ಣನನ್ನು ಬ್ರಾಹ್ಮಣ ಜಾತಿಯವನು ಎಂದು ಕಲ್ಪಿಸುವುದಕ್ಕೆ ಇದ್ದ ಸಾಕ್ಷಾಧಾರಗಳೆಲ್ಲ ಭ್ರಾಸವವಾದವುಗಳಲ್ಲ. ತಮ್ಮ ಆಶಯಕ್ಕೆ ಪೂರಕವಾಗುವಂತೆ ಕೆಲವು ಸನ್ನಿವೇಶಗಳ ನಿಜಾಂಶವನ್ನು ಮರೆಮಾಚಿ, ಅದಕ್ಕೆ ಕಲ್ಪನೆಯ ಮೆರುಗು ಜೋಡಿಸಿ ಬಸವಣ್ಣನನ್ನು ಬ್ರಾಹ್ಮಣ ಎಂದು ಕರೆಯಲಾಯಿತು.

ಬಂಜಗೆರೆಯ ಅತಾರ್ಕಿಕ ತರ್ಕ (Illogical logic) ಬಹಳ ವಿಚಿತ್ರವಾಗಿದೆ. ಪೂರ್ವ ಕಲ್ಪಿತ (Pre-assumed) ವಿಚಾರಗಳನ್ನು ಇಟ್ಟುಕೊಂಡು ತಪ್ಪುತಪ್ಪಾಗಿ ವಚನಗಳನ್ನು ಅರ್ಥೈಸಿ, ಅವುಗಳನ್ನು ತೇಪೆ (Patch up) ಹಚ್ಚುವ ಕೆಲಸ ಮಾಡಿದ್ದಾರೆ.

ಅತಾರ್ಕಿಕ ತರ್ಕಕ್ಕೆ ಒಂದು ಉದಾಹರಣೆ ಕೊಡಬಹುದು. "ನೀನು ದೇವರ ಧ್ಯಾನವನ್ನು ಸದಾ ಮಾಡು. ಮಲಗಿದಾಗ, ಎದ್ದಾಗ, ಸ್ನಾನ ಮಾಡುವಾಗ, ಶೌಚಾಲಯದಲ್ಲಿರುವಾಗ, ನಡೆವಾಗ, ಕೆಲಸ ಮಾಡುವಾಗ ಮಂತ್ರ ಜಪ ಮಾಡು." ಹೀಗೆ ಗುರುಗಳು ಹೇಳಿದಾಗ ಶಿಷ್ಯ ಕೇಳುವನು, "ಶೌಚಾಲಯದಲ್ಲಿ, ಸ್ನಾನ ಗೃಹದಲ್ಲಿ ಮಂತ್ರ ಜಪ ಮಾಡಿದರೆ ಮಂತ್ರವು ಮೈಲಿಗೆಯಾಗದೆ?"
"ಖಂಡಿತ ಇಲ್ಲ, ಮಂತ್ರವು ಮಡಿ ಮೈಲಿಗೆಗೆ ಅತೀತವಾಗಿದೆ." ಗುರು ಹೇಳುವನು
"ಹಾಗಾದರೆ ಶೌಚಾಲಯದಲ್ಲೇ ಪೂಜೆ - ಧ್ಯಾನಕ್ಕೆ ಕೂರಬಹುದಲ್ಲವೆ?" ಶಿಷ್ಯ ಕೇಳುವನು.
ಇದು ಅತಾರ್ಕಿಕ ತರ್ಕ. ಮಾತಿನ ಜಾಲದಲ್ಲಿ ಸಿಕ್ಕಿಸಿ ಸುಳ್ಳನ್ನು ಸತ್ಯ ಮಾಡಲು ಏನೇನೋ ಬಡಬಡಿಸುವುದು.

ಮೇಲೆ ಉಲ್ಲೇಖಿಸಿರುವ ವಾಕ್ಯಗಳಿಗೆ ನಂತರ ವಿಮರ್ಶೆ ಬರೆಯುತ್ತೇನೆ. ಈ ಪುಸ್ತಕ ಬರೆಯುವ, ಬರೆಸುವ, ಪ್ರೋತ್ಸಾಹಿಸುವ ಮನಸ್ಸುಗಳಲ್ಲಿ ದಲಿತ, ಶೂದ್ರ, ಬ್ರಾಹ್ಮಣ ಮನಸ್ಸುಗಳು ಎಲ್ಲ ಸಮಾನ ಚಿಂತನೆಯಿಂದ ಕಾರ್ಯ ಮಾಡಿವೆ. ಅದುವೇ ಬ್ರಾಹ್ಮಣ ದ್ವೇಷ. ವೈದಿಕ ಧರ್ಮದ ವಿರುದ್ಧ ಆಕ್ರೋಶ, ದಲಿತಾಭಿಮಾನ. Hate the sin but not the sinner. ಪಾಪವನ್ನು ದ್ವೇಷ ಮಾಡಬೇಕೇ ವಿನಾ ಪಾಪಿಯನ್ನಲ್ಲ. ವೈದಿಕ ಧರ್ಮವು ಬಿತ್ತಿದ ವರ್ಣ ವ್ಯವಸ್ಥೆ, ಬೆಳೆದ ಜಾತಿಪದ್ಧತಿ - ಅಸ್ಪೃಶ್ಯತೆ ನಮ್ಮ ದೇಶಕ್ಕೇನೆ ಮಹಾನ್ ಶಾಪ. ಹೀಗಾಗಿ ಮೇಲೆ ಉಲ್ಲೇಖಿಸಿರುವ ದಲಿತಾಭಿಮಾನ ಕಳಕಳಿ ಹೊಂದಿರುವ ದಲಿತ, ಶೂದ್ರ, ಬ್ರಾಹ್ಮಣ ಮನಸ್ಸುಗಳ ಜೊತೆಗೆ ನಮಗೆ ಸಹಮತವಿದೆ. ನಮ್ಮ ಅರ್ಥಾತ್ ಬಸವಾನುಯಾಯಿಗಳ ಚಿಂತನೆ ಅವರೊಡನೆ ಹೊಂದಿಕೊಳ್ಳುತ್ತದೆ. ಆದರೆ ಈ ಪೂರ್ವಗ್ರಹ ಪೀಡಿತ ಆಲೋಚನೆಯೊಡನೆ ಇಡೀ ಇತಿಹಾಸವನ್ನೇ ತಿರುಚಿ ಅತಾರ್ಕಿಕವಾಗಿ ತರ್ಕ ಮಾಡುತ್ತ ಹೋಗುವ ಶೈಲಿ ಅಪ್ರಾಮಾಣಿಕತೆಯ ಪರಮಾವಧಿಯದಾಗಿದೆ. ಈ ಅಪ್ರಾಮಾಣಿಕತೆಗಾಗಿ ನಾವು ಪುಸ್ತಕದ ವಿರುದ್ಧ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿ ಹೋರಾಟ ಮಾಡಬೇಕಾಯಿತು.

ವಿಶ್ವಗುರು ಬಸವಣ್ಣನವರು - ಹುಟ್ಟಿನಿಂದ ಬ್ರಾಹ್ಮಣ ಕುಲದವರು

ಸಂಶೋಧಕ ಕಾವ್ಯ, ಶಾಸನ ಮುಂತಾದವುಗಳ ಆಧಾರವನ್ನು ಆಶ್ರಯಿಸುತ್ತಾನೆ; ಹಾದಿ ಬೀದಿಯಲ್ಲಿ ಹೋಗುವವರ, ಬಾವಿ ಕಟ್ಟೆಯ ಮೇಲೆ ಹೆಂಗಸರು ಆಡುವ ಪಿಸುನುಡಿಗಳ ಆಧಾರವನ್ನಲ್ಲ. ಅದರಂತೆಯೇ ಅವನು ಆಧಾರವೇ ಇಲ್ಲದೆ ಊಹಾಪೋಹಗಳನ್ನು ನುಡಿಯುವುದಿಲ್ಲ.

ಬಸವಣ್ಣ(ನವರ) [ಬಂಜಗೆರೆ ಏಕ ವಚನದಲ್ಲಿ ಬರೆದಿದ್ದಾರೆ. ನಮ್ಮ ಧರ್ಮಗುರು ಬಗ್ಗೆ ನಮಗೆ ಹಾಗನ್ನಲು ಬರುವುದಿಲ್ಲವಾದ ಕಾರಣ ನವರು ಪದವನ್ನು ನಾನು ಸೇರಿಸಿದ್ದೇನೆ.] ನಮ್ಮ ಜಾತಿಯವನ (ರ)ಂತೆ ಹೌದಾ ಸಾರ್? ಎಂದು ಒಬ್ಬ ದಲಿತ ಜಾತಿಯ ಯುವಕ ಬೀದರನ ಹಳ್ಳಿಯೊಂದರಲ್ಲಿ ಬಂಜಗೆರೆ ಶಿಬಿರ ಮಾಡುವಾಗ ಕೇಳಿದ್ದೇ (ಪುಟ 1) ಇವರ ಸಂಶೋಧನೆಗೆ ಪ್ರೇರಣೆ ನೀಡಿದೆ. ಮಾನವತಾವಾದಿ ಬಸವಣ್ಣನವರು ನಮ್ಮವರು ಎಂಬ ಅಭಿಮಾನ ಎಲ್ಲ ಜನಾಂಗದವರಲ್ಲೂ ಇದೆ. ನಮ್ಮ ಉದ್ಧಾರಕ್ಕೆ ಅಷ್ಟು ಕಳಕಳಿಯಿಂದ ಅಂಬೇಡ್ಕರ್ ಅವರಿಗೂ 800 ವರ್ಷ ಪೂರ್ವದಲ್ಲೇ ಪ್ರಯತ್ನಿಸಿದ ವಿಶ್ವಗುರು ಬಸವಣ್ಣನವರು ನಮ್ಮವರಿರಬೇಕು. ಎಂಬ ಮುಗ್ಧ ಭಾವದಿಂದ ಆತ ಕೇಳಿರಬಹುದು. ಆದರೆ ಇದೊಂದು ಪುರಾವೆಯಲ್ಲ. ಒಮ್ಮೆ ಬೆಂಗಳೂರಿನಲ್ಲಿ ಒಂದು ಕರ್ನಾಟಕ ರಾಜ್ಯ ಮಚಗಾರರ ಸಂಘದ ಉದ್ಘಾಟನೆಗೆ ಆಹ್ವಾನಿಸಿದ್ದರು. ನನ್ನ ಭಾಷಣದಲ್ಲಿ ದಲಿತರ ಬಗ್ಗೆ ಕಾಳಜಿಯಿಂದ ಮಾತನಾಡಿ, ಹರಳಯ್ಯನವರ ಮಹಾನ್ ತ್ಯಾಗದ ಬಗ್ಗೆ ಕೊಂಡಾಡಿದೆ. ನೀವು ಕೇವಲ ಆರ್ಥಿಕ ಸವಲತ್ತಿಗಾಗಿ ಹೋರಾಡದೆ ಧಾರ್ಮಿಕ ಸಾಂಸ್ಕೃತಿಕ ಉನ್ನತಿಗೆ ಪ್ರಯತ್ನಿಸಬೇಕು ಎಂದು ಕಳಕಳಿಯಿಂದ ಮಾತನಾಡಿದೆ. ಕಾರ್ಯಕ್ರಮ ಮುಗಿದ ಮೇಲೆ ಒಂದಿಬ್ಬರು ಬಂದು, "ಅವ್ವಾರೆ ನೀವು ನಮ್ಮ ಕುಲದವರಾ? ಎಷ್ಟು ಅಭಿಮಾನದಿಂದ ಮಾತನಾಡಿದಿರಿ?" ಎಂದರು. ಬಸವಣ್ಣನವರ ಆತ್ಮೀಯ ಭಾಷೆ ಸಹ ಅವರು "ನಮ್ಮವರು" ಎಂಬ ಭಾವವನ್ನು ಹುಟ್ಟಿಸುವುದು ಸಹಜ.

ಬೀದರ ಜಿಲ್ಲೆ ನಮಗೆ ಬಹಳ ಪರಿಚಿತ ಜಿಲ್ಲೆ. ಮತ್ತು ದಲಿತ ವರ್ಗದವರು ಬಹಳಷ್ಟು ಜನರು ಇಷ್ಟಲಿಂಗ ದೀಕ್ಷೆ ಪಡೆದಿದ್ದಾರೆ. 1972 ರಿಂದ ಇಲ್ಲಿಯವರೆಗೆ ಬೀದರ ಜಿಲ್ಲೆಯ ನಿಕಟ ಪರಿಚಯ ನಮಗಿದೆ. ಆದರೆ ಎಂದೂ ಯಾವ ದಲಿತರೂ ಬಸವಣ್ಣನವರು ನಮ್ಮ ಜಾತಿಯವರಂತೆ ಎಂದು ಕೇಳಿಲ್ಲ. ಆದರೆ ತಮ್ಮ ಹಿತಕ್ಕಾಗಿ ದುಡಿದವರು ಎಂಬ ಅಭಿಮಾನ ತಪ್ಪದೆ ಹೊಂದಿದ್ದಾರೆ. ಮತ್ತೊಮ್ಮೆ ಆಂಧ್ರದ ಗಡಿಭಾಗಗಳಲ್ಲಿನ ಕೆಲವು ಊರುಗಳ ದಲಿತ ಕೇರಿಗಳಲ್ಲಿ ಬಸವಣ್ಣ ನಮ್ಮ ಜಾತಿಯವನಂತೆ ಎಂಬ ರೀತಿಯ ಅಭಿಪ್ರಾಯ ಗುಟ್ಟಾಗಿ ಚಾಲ್ತಿಯಲ್ಲಿರುವುದನ್ನು ವಡ್ಡಗೆರೆ ನಾಗರಾಜಯ್ಯ ಎನ್ನುವವರು ಬಂಜಗೆರೆಯವರೊಡನೆ ಹಂಚಿಕೊಂಡರಂತೆ. (ಪುಟ 2) ಇಂಥ ಅಸಂಬದ್ಧ ತಂತ್ರವನ್ನು ಇಡೀ ಪುಸ್ತಕದ ಉದ್ದಕ್ಕೂ ಬಂಜಗೆರೆ ಪ್ರಯೋಗಿಸಿದ್ದಾರೆ. ಯಾವುದೇ ಜಾತಿಯವರಿರಲಿ ತಮ್ಮ ಕುಲಪುರುಷರ ಬಗೆಗಿನ ಅಭಿಮಾನವನ್ನು ಮುಚ್ಚಿಟ್ಟುಕೊಳ್ಳುವುದಿಲ್ಲ. ಗುಟ್ಟಾಗಿ ಮಾತನಾಡಿಕೊಳ್ಳುವ ಅಗತ್ಯವೇನೂ ಇಲ್ಲ. 12ನೆಯ ಶತಮಾನದಿಂದ ಇಲ್ಲಿಯವರೆಗೂ ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಜೇಡರ ದಾಸಿಮಯ್ಯ ಮುಂತಾದವರನ್ನು ಆಯಾ ಸಮಾಜಗಳವರು ಅಷ್ಟೆ ಭಕ್ತಿ-ಅಭಿಮಾನಗಳಿಂದ ತಮ್ಮವರೆಂದು ಕರೆದುಕೊಂಡೇ ಬಂದಿದ್ದಾರೆ. ಗುಟ್ಟಾಗಿ ಮಾತನಾಡಿಕೊಳ್ಳುತ್ತಾರೆ ಎಂಬ ಬಂಜಗೆರೆ ತಂತ್ರ ಸಂಶಯದ ಹಾವು ಚೇಳುಗಳನ್ನು ಜನರ ಮನದಲ್ಲಿ ಹರಿಯ ಬಿಡುವುದಾಗಿದೆ.

ಸಂಶೋಧನಾ ಕೃತಿಗಳಲ್ಲಿ ಉಲ್ಲೇಖಿಸುವ ಆಧಾರಗಳು ನಿಖರವಾಗಿ ಇರುತ್ತವೆ. ಆದರೆ ಬಂಜಗೆರೆಯ ಬರಹದಲ್ಲಿ ಈ ನಿಖರತೆ ಇಲ್ಲವೇ ಇಲ್ಲ. ಉದಾಹರಣೆಗೆ ಬುದ್ಧನ ಪ್ರಸಂಗ.

"ಗೌತಮ ಬುದ್ಧ ತಂದೆಗೆ ಒದಗಿದ ರಾಜ್ಯ ಭ್ರಷ್ಟತೆಯ ದಂಡನೆಯನ್ನು ತಾನು ಹೊತ್ತು ದೇಶ ಸಂಚಾರ ಹೋಗಿದ್ದ." ಎಂಬ ಐತಿಹಾಸಿಕ ಸತ್ಯವನ್ನು ಇತ್ತೀಚೆಗೆ ಜನರು ಅರಿಯುತ್ತಿದ್ದಾರೆ ಎನ್ನುತ್ತಾರೆ ಬಂಜಗೆರೆ. ಬಂಜಗೆರೆಯ ಮಟ್ಟದ ಆ ಪುಣ್ಯ ಸಂಶೋಧಕ ಯಾರು ಎಂಬುದನ್ನು ಇವರು ಉಲ್ಲೇಖಿಸಿಲ್ಲವಾದ ಕಾರಣ, ಬಹುಶಃ ಇಂಥ ಕುತ್ಸಿತ ಊಹೆಯೂ ಬಂಜಗೆರೆಯದೇ ಎಂದು ಭಾವಿಸಲು ಅಡ್ಡಿಯಿಲ್ಲವೇನೊ!

ಜಗತ್ತಿನ 3ನೆಯ ದೊಡ್ಡ ಧರ್ಮ, ಭಾರತದಲ್ಲಿ ಜನಿಸಿದ ಬೌದ್ಧ ಧರ್ಮ. ಅಂಥ ಒಂದು ಧರ್ಮವು ಮಹಾಜ್ಞಾನಿಯಿಂದಲ್ಲದೆ ದೇಶಭ್ರಷ್ಟ ತರುಣನಿಂದ ಕೊಡಲ್ಪಡುವುದು ಸಾಧ್ಯವೆ? ಅಮೃತದಲ್ಲಿ ಅಮೇಧ್ಯವನ್ನು ಹುಡುಕುವ ಚಾಳಿ ಬಂಜಗೆರೆಯದು. ಬುದ್ಧನ ವಿಚಾರಧಾರೆ ಇಡೀ ಜಗತ್ತಿಗೆ ಪರಿಚಿತವಾಗಿದೆ ಮತ್ತು ಮಾನವ ಕುಲಕ್ಕೆ ಅದ್ಭುತ ಪ್ರೇರಣೆ ನೀಡಿದೆ. ದಶಾವತಾರಗಳಲ್ಲಿ ಬರುವ 9ನೆಯ ಅವತಾರ ಗೌತಮ ಬುದ್ಧನಿಗೆ ಸಂಬಂಧಿ

ಸಿದ್ದಲ್ಲ. ವಿಷ್ಣುವಿನ ಅವತಾರಗಳು 10 ಕಡೆಯದು ಕಲ್ಕಿಯದು ಎಂಬ ಮೂಢ ನಂಬಿಕೆಯೊಡನೆ ಒಬ್ಬ ಕಲ್ಕಿ ಭಗವಾನ್ ಸಹ ಹುಟ್ಟಿಬಿಟ್ಟಿರುವುದು ಬಂಜಗೆರೆಗೆ ಗೊತ್ತಿದ್ದಂತೆ ತೋರದು.

ದಿ.11-7-2007ರಂದು ಕೆಲವು ಮಹತ್ವಪೂರ್ಣ ಮಾಹಿತಿಗಳು ವಿಶ್ವಗುರು ಬಸವಣ್ಣನವರ ಜನ್ಮಜಾತಿ ಕುರಿತು ಲಭ್ಯವಾದವು. ಅದಕ್ಕೂ ಮೊದಲಿಗೆ ಒಂದು ಸ್ವಾರಸ್ಯಕರ ಪ್ರಸಂಗ ಸುಮಾರು 10 ವರ್ಷಗಳ ಹಿಂದೆ ಜರುಗಿತು. ಈಗಾಗಲೇ ತಿಳಿಸಿದಂತೆ ಹಲವಾರು ಜಾತಿಗಳವರು ತಮ್ಮ ಜಾತಿಯಲ್ಲಿ ಆಗಿ ಹೋದ ಮಹಾತ್ಮರನ್ನು ಅಂದಿನಿಂದಲೂ ಗೌರವಿಸುತ್ತಾ ಬಂದಿದ್ದಾರೆ. ಬಸವಣ್ಣನವರೊಡನೆ ಬ್ರಾಹ್ಮಣರು ಏಕೆ ನಿಕಟ ಸಂಬಂಧ ಇಟ್ಟುಕೊಳ್ಳಲಿಲ್ಲ ಎಂಬ ಒಂದು ಸಂದೇಹ ನಮ್ಮನ್ನು ಕಾಡುತ್ತಿತ್ತು. ಅನೇಕರನ್ನು ಕಾಡುತ್ತಿರಬಹುದು. ಬಸವಣ್ಣನವರು ಜನಿವಾರವನ್ನು ನಿರಾಕರಿಸಿದ್ದು, ವೈದಿಕ ಧರ್ಮದ ಲೋಪದೋಷಗಳನ್ನು ಟೀಕಿಸಿದ್ದು, ವರ್ಣಾಶ್ರಮ ಜಾತಿ ಪದ್ಧತಿ ಅಸ್ಪೃಶ್ಯತೆ ನಿರಾಕರಿಸಿದ್ದು ಈ ರೀತಿ ಸಂಬಂಧ ಹರಿದುಕೊಳ್ಳಲು ಕಾರಣ ಎಂದು ಊಹಿಸಬಹುದಾಗಿದೆ. ಕರ್ನಾಟಕದ ಬ್ರಾಹ್ಮಣ ಸಮಾಜದಲ್ಲಿ ಬಸವ ಎಂಬ ಹೆಸರು ಸಹ ಜನಪ್ರಿಯವಲ್ಲ ನಂತರವಂತೂ ಅದು ಅಪ್ರಿಯವೇ ಆಗಿದೆ. ಬಸವನ ಗುಡಿ ರಸ್ತೆ ಎಂದು ಹೇಳಲಾರದೆ ಬುಲ್ ಟೆಂಪಲ್ ರಸ್ತೆ ಎಂದು ಕೆಲವು ಬೆಂಗಳೂರಿಗರು ಹೇಳುವುದು ಕಾಣುತ್ತೇವೆ.

10-12 ವರ್ಷಗಳ ಹಿಂದಿನ ಮಾತು. ಒಂದು ದಿನ ಒಬ್ಬ ತರುಣ ಇಂಜನಿಯರ್ ಬಂದರು. ಅವರು ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯವರು ಮೈಸೂರಿಗೆ ಒಂದು ಸಂದರ್ಶನಕ್ಕೆ ಹೋಗಿ ಬರುವಾಗ ಯಾರೋ ಅವರ ಕಿಸೆಯನ್ನು ಕತ್ತರಿಸಿದ್ದರು. ವಾಪಸ್ಸು ಊರಿಗೆ ಹೋಗಲು ಹಣವಿಲ್ಲದೆ ಬಸ್ ಸ್ಟಾಂಡಿನಲ್ಲಿ ಪರದಾಡುತ್ತಿರುವಾಗ ಅವರು ಹೆಸರು ಕೇಳಿದ ಒಬ್ಬರು ಬಸವ ಮಂಟಪಕ್ಕೆ ಹೋಗಿರಿ. ನಿಮಗೆ ಸಹಾಯ ಮಾಡುತ್ತಾರೆ ಎಂದು ಹೇಳಿದ್ದಾರೆ. ಸ್ನಾನ - ತಿಂಡಿ ಮಾಡಿಸಿದ ಮೇಲೆ ನಾನು ಭೇಟಿಯಾದೆ. ಆತನ ಹೆಸರು ಬಸವರಾಜು. ಲಿಂಗಾಯತರಿರಲಿಲ್ಲ, ಶೈವ ಬ್ರಾಹ್ಮಣರು. ಹೆಸರು ಕೇಳಿ ಆಶ್ಚರ್ಯವಾಗಿ ಈ ಹೆಸರನ್ನು ನಿಮ್ಮಲ್ಲಿ ಇಡುವಿರಾ ಎಂದಾಗ, ನಮ್ಮ ಮನೆಗಳಲ್ಲಿ ಒಂದು ಸಂಪ್ರದಾಯವಿದೆ. ಹುಟ್ಟುವ ಮೊದಲ ಮಗು ಗಂಡಿರಲಿ ಹೆಣ್ಣಿರಲಿ ಅದಕ್ಕೆ "ಬಸವ" ಎಂಬ ಹೆಸರನ್ನು ಇಡಲಾಗುವುದು. ಕೇಳಿ ನನಗೆ ಪರಮಾನಂದವಾಯಿತು. ಕಳೆದು ಹೋದ ಒಂದು ಕೊಂಡಿ ಲಭ್ಯವಾದಂತೆ ಆಯಿತು.

ನಂತರ ಆಂಧ್ರ ಸರ್ಕಾರ ಒಂದು ಡಾಕ್ಯುಮೆಂಟರಿ ಫಿಲ್ಮ್ ಮಾಡಲು ಬಯಸಿತು. ನಮಗೆ ಮದ್ರಾಸಿನಲ್ಲಿ ಸಿನಿಮಾ ಪೋಸ್ಟರ್ ತಯಾರಿಸಿಕೊಟ್ಟಿದ್ದ ಗಂಗಾಧರ ಎಂಬುವವರು ಈಗ ಹೈದರಾಬಾದಿನಲ್ಲಿದ್ದು ಅವರ ಮಾರ್ಗದರ್ಶನದಲ್ಲಿ ಈ ಫಿಲ್ಮ್ ತಯಾರಿಕೆ ನಡೆದಿತ್ತು. ಮಹಾನಂದಿ ಕ್ಷೇತ್ರದ ಅಧಿದೇವತೆ ನಂದಿಯನ್ನು ಮುಖ್ಯವಾಗಿ ಇಟ್ಟುಕೊಂಡು ನಂದಿಗೆ ಸಂಬಂಧಿಸಿದ ಕ್ಷೇತ್ರಗಳ ಪರಿಚಯ ಮಾಡುವ ಆ ಡಾಕ್ಯುಮೆಂಟರಿಯಲ್ಲಿ ನಂದಿಯ ಅವತಾರ ಎಂಬ ಪ್ರತೀತಿ ಇರುವ ಕರ್ನಾಟಕದ ಬಸವಣ್ಣನವರ ಪರಿಚಯ ಮಾಡಿಕೊಡುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದರು. ಶೈವರಲ್ಲಿ ಸಹ ಬೇರೆ ಬೇರೆ ಶಿವಗಣಗಳನ್ನು ಮುಖ್ಯವಾಗಿ ಆರಾಧಿಸುವ ಪಂಗಡಗಳಿವೆ. ಅವರಲ್ಲಿ ನಾಂದ್ಯರು - ನಂದಿಯ ಆರಾಧಕರು, ವೀರಭದ್ರನ ಆರಾಧಕರು, ಗಣಪತಿಯ ಆರಾಧಕರಾದ ಗಾಣಪತ್ಯರು, ಸೂರ್ಯನ ಆರಾಧಕರು ಸೌರರು, ಶಕ್ತಿಯ ಆರಾಧಕರಾದ ಶಾಕ್ತರು ಹೀಗೆ ಪಂಗಡಗಳುಂಟು. ಬಸವಣ್ಣನವರ ಪೂರ್ವಜರು ಪಾಶುಪತ ಶೈವ ಸಂಪ್ರದಾಯದ, ನಂದಿಯ ಆರಾಧಕರು ಅಂತಲೇ ನಂದಿ ವ್ರತ ಮಾಡಿ ಮಾದಲಾಂಬಿಕೆ ಮಗುವನ್ನು ಪಡೆದುದಾಗಿ ಪಾಲ್ಕುರಿಕೆ, ಭೀಮಕವಿ ಬರೆಯುತ್ತಾರೆ. ಹರಿಹರ, ಸೋಮನಾಥ, ಭೀಮಕವಿ ಎಲ್ಲರೂ ವೃಷಭ (ನಂದಿ)ನ ಅವತಾರ ಎಂದೇ ಪೌರಾಣಿಕವಾಗಿ ಗುರುತಿಸಿದ್ದಾರೆ. ಬಾಗೇವಾಡಿಯಲ್ಲಿ ಬೃಹತ್ ನಂದಿ ವಿಗ್ರಹವಿದೆ. ಬಹುಶಃ ಬಾಗೇವಾಡಿಯ ಪುರವರಾಧೀಶ್ವರ ಮಾದಿರಾಜನ ಪೂರ್ವಜರು ತಮ್ಮ ಮನೆದೇವರು ನಂದಿಗೆ ಗುಡಿಯನ್ನು ಕಟ್ಟಿಸಿರಬಹುದು. ಬಸವಣ್ಣನವರ ವಚನ, "ಅಯ್ಯಾ ನೀನು ನಿರಾಕಾರವಾಗಿದ್ದಲ್ಲಿ ಎಂಬುದರಲ್ಲಿ ಈಗಿನ ಬಸವಣ್ಣನ ಅವತಾರಕ್ಕಿಂತ ಹಿಂದಿನ ಅವತಾರದಲ್ಲಿ ವೃಷಭನಾಗಿದ್ದೆ" ಎಂದೆ ಸಾಂಕೇತಿಕವಾಗಿ ಬಸವಣ್ಣನವರು ಹೇಳಿದ್ದಾರೆ.

ಬಸವಣ್ಣನವರ ಜೀವನ ವೃತ್ತಾಂತ ಮೊಟ್ಟಮೊದಲು ಕಾವ್ಯರೂಪ ತಳೆದುದು ತೆಲುಗಿನಲ್ಲಿ, ಪಾಲ್ಕುರಿಕೆ ಸೋಮನಾಥನ ಬಸವ ಪುರಾಣಮು ಮೂಲಕ. ಗುರು ಬಸವಣ್ಣನವರು ಲಿಂಗೈಕ್ಯರಾದ ಕೆಲವೇ ವರ್ಷಗಳಲ್ಲಿ ಅದು ರಚನೆಯಾಯಿತು. ಇದಕ್ಕೆ ಪ್ರೇರಣೆ ಪಾಲ್ಕುರಿಕೆ ಸೋಮನಾಥನ ಗುರುವಾದ ಮಲ್ಲಿಕಾರ್ಜುನ ಪಂಡಿತಾರಾಧ್ಯರು. ಬಸವಣ್ಣನ ದರ್ಶನಕ್ಕೆ ಕಲ್ಯಾಣಕ್ಕೆ ಹೊರಟಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ವನೀಪುರ ಎಂಬಲ್ಲಿ ಇರುವಾಗ ಧರ್ಮಪಿತರು ಲಿಂಗೈಕ್ಯರಾಗುವರು. ಅಲ್ಲಿಗೇ ಪ್ರಯಾಣ ನಿಲ್ಲಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಶ್ರದ್ಧಾಂಜಲಿ ಗೀತೆಯನ್ನು ಬರೆದು ಬಸವಣ್ಣನವರಿಗೆ ಗೌರವ ಸಲ್ಲಿಸಿ ಒಂದು ವರ್ಷದ ಬಳಿಕ ಅವರು

ಶಿವೈಕ್ಯರಾಗುವರು. ಶೂದ್ರ, ಅಸ್ಪೃಶ್ಯರಿಗೆಲ್ಲ ಬಸವಣ್ಣನವರು ದೀಕ್ಷೆಯನ್ನು ಕೊಡಲು ಆರಂಭಿಸಿದಕ್ಕಾಗಿ ಮಲ್ಲಿಕಾರ್ಜುನ ಪಂಡಿತಾರಾಧ್ಯ ಮುಂತಾದವರು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದರಾದರೂ ಕಾಲಾನಂತರದಲ್ಲಿ ಬಸವಣ್ಣನವರ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾದರು. ಗುರುಗಳ ಬಾಯಿಯಲ್ಲಿ ಬಸವಣ್ಣನವರ ಹಿರಿಮೆ ಕೇಳಿದ ಪಾಲ್ಕುರಿಕೆ ಸೋಮನಾಥನು ಆಶ್ಚರ್ಯ ಚಕಿತನಾಗಿ, ಶ್ರೀಶೈಲಕ್ಕೆ ಧರ್ಮ ಪ್ರಚಾರಾರ್ಥ ಬರುತ್ತಿದ್ದ ಜಂಗಮರ ಮೂಲಕ ಬಸವಣ್ಣನವರ ಜೀವನ ವೃತ್ತಾಂತ ತಿಳಿದುಕೊಂಡು ಬಸವ ಪುರಾಣಮು ರಚಿಸುತ್ತಾನೆ. ಬಸವಣ್ಣನವರನ್ನು ಕುರಿತು ಬರೆದ ಕಾವ್ಯಗಳಾದ ಬಸವ ಪುರಾಣಮು - ತೆಲುಗು, ಬಸವರಾಜ ದೇವರ ರಗಳೆ, ಕನ್ನಡ ಬಸವ ಪುರಾಣ - ಕ್ರಮವಾಗಿ ಇವುಗಳ ಕರ್ತೃಗಳಾದ ಪಾಲ್ಕುರಿಕೆ ಸೋಮನಾಥ, ಹರಿಹರ, ಭೀಮಕವಿ ಎಲ್ಲರೂ ಶೈವ ಆಗಮಿಕ ಬ್ರಾಹ್ಮಣರು ಎಂಬುದು ಗಮನಿಸಬೇಕಾದ ಸಂಗತಿ. ಬಸವಣ್ಣನವರನ್ನು ತಮ್ಮ ಕಥಾ ವಸ್ತುವನ್ನಾಗಿ ಆರಿಸಿಕೊಳ್ಳುವಲ್ಲಿ ಅವರ ವ್ಯಕ್ತಿತ್ವವೊಂದೇ ಕಾರಣವಲ್ಲ, ಬಸವಣ್ಣನವರು ಪೂರ್ವಾಶ್ರಮದಲ್ಲಿ ಶೈವ ಬ್ರಾಹ್ಮಣರಾಗಿದ್ದುದು ಮಹತ್ವಪೂರ್ಣ ಕಾರಣ ಎನ್ನಿಸುತ್ತದೆ.

ಹೈದರಾಬಾದಿನಲ್ಲಿ ದಿ.09-7-2007ರಂದು ಲಿಂಗಾಯತ ಸಮಾಜ ಪ್ರಮುಖರ ಮೀಟಿಂಗ್ ಇತ್ತು. ಬಂಜಗೆರೆಯ ಪುಸ್ತಕ ಕರ್ನಾಟಕದ ಜನತೆಯಲ್ಲಿ ಮಾತ್ರವಲ್ಲ ನೆರೆ ರಾಜ್ಯಗಳ ಜನರಲ್ಲೂ ಅಶಾಂತಿಯನ್ನು ಹುಟ್ಟು ಹಾಕಿದೆ. ಅಂದಿನ ಸಭೆಯಲ್ಲಿ ಆಂಧ್ರದ ಒಬ್ಬ ಪ್ರಖ್ಯಾತ ವಿದ್ವಾಂಸರಾದ ಡಾ|| ಮುದಿಗೊಂಡ ಶಿವಪ್ರಸಾದ್ ಎನ್ನುವವರೂ ಬಂದಿದ್ದರಂತೆ. ಇವರ ಪತ್ನಿ ಡಾ|| ಉಮಾದೇವಿ ಪಾಲ್ಕುರಿಕೆ ಸೋಮನಾಥನ ಎಲ್ಲ ಕೃತಿಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದಾರೆ. ಇವರು T.V. 9 ದವರು ಮಾಡಿದ ಸಂದರ್ಶನ ನೋಡಿದ್ದರು. ಬಸವಣ್ಣನವರ ಪೂರ್ವಜರು ಆಂಧ್ರದಿಂದ ವಲಸೆ ಬಂದವರು ಎಂಬ ನನ್ನ ಮಾತನ್ನು ಕೇಳಿಸಿಕೊಂಡು ಮಾತಾಜಿಯವರ ಅಭಿಪ್ರಾಯ ಸರಿ ಎಂದಿದ್ದಾರೆ. ಇದು ನಂತರ ನನಗೆ ಗೊತ್ತಾಗಿ ಹೈದರಾಬಾದಿಗೆ ಹೋಗಿ ಡಾ|| ಮುದಿಗೊಂಡ ಶಿವಪ್ರಸಾದರನ್ನು ಭೇಟಿಯಾಗಲು ಪೂಜ್ಯ ಚನ್ನಬಸವಾನಂದ ಸ್ವಾಮಿಗಳಿಗೆ ತಿಳಿಸಿದೆ. ಅವರಿಂದ ಸಿಕ್ಕ ಮಾಹಿತಿ ಅತ್ಯಪೂರ್ವ, ಬಂಜಗೆರೆ ಹುಟ್ಟು ಹಾಕಿದ ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರಲ್ಲ ಮಾದಿಗರು ಎಂಬುದನ್ನು ಪೂರ್ಣವಾಗಿ ಹೊಡೆದು ಹಾಕುತ್ತದೆ.

1. ಆಂಧ್ರದ ಗುಂಟೂರು ಜಿಲ್ಲೆಯಲ್ಲಿ ಐತಿಹಾಸಿಕವಾಗಿ ಕಮ್ಮೆ ನಾಡು ಎಂದು ಕರೆಯುವ ಪ್ರದೇಶದಲ್ಲಿ ಕಮ್ಮೆ ಬ್ರಾಹ್ಮಣರು ಬಹಳ ಪ್ರಭಾವಶಾಲಿಗಳು. ಇವರು ಪಾಶುಪತ ಶೈವ ಸಂಪ್ರದಾಯದವರು.

2. ಈ ಸಮುದಾಯದವರಲ್ಲಿ ಬಸವರಸ, ಮಾದರಸ, ಮಾದಿರಾಜ, ಬಲದೇವರಸ ಮುಂತಾದ ಹೆಸರು ಬಹಳ ಜನಪ್ರಿಯ. ಮಹಿಳೆಯರಲ್ಲಿ ನಾಗಾಂಬಿಕೆ, ಮಾದಲಾಂಬಿಕೆ, ನೀಲಗಂಗಾಂಬಿಕೆ ಮುಂತಾದ ಹೆಸರು ಜನಪ್ರಿಯ.

3. ನಾವೆಲ್ಲ ಗುರು ಬಸವಣ್ಣನವರ ಜನಾಂಗದವರು. ಅವರು ನಮ್ಮವರು ಎಂಬ ಹೆಮ್ಮೆ ನಮಗೆಲ್ಲ ಇದೆ.

4. ಪಾಲ್ಕುರಿಕೆ ಸೋಮನಾಥ ಸಹ ಅದೇ ಸಮುದಾಯದ ಬ್ರಾಹ್ಮಣ.

ಆಂಧ್ರದಲ್ಲಿ ಸದ್ಯದಲ್ಲಿ ಬಹಳ ದೊಡ್ಡ ವ್ಯಕ್ತಿಗಳಾಗಿರುವ ಕೆಲವರ ಹೆಸರು ಮಾದಿರಾಜ ಎಂದು ಇದ್ದು ಶಿವಪ್ರಸಾದ ಹೇಳಿದ್ದಾರೆ. ನನಗೆ ಅವು ನೆನಪಿನಲ್ಲಿ ಉಳಿದಿಲ್ಲ. ನಾನೇ ನೇರವಾಗಿ ಭೇಟಿಯಾದಾಗ ಮತ್ತಷ್ಟು ಮಾಹಿತಿ ಪಡೆಯಬಹುದು.

ಕಲ್ಯಾಣ ಕ್ರಾಂತಿ ಕುರಿತು ಡಾ|| ಮುದಿಗೊಂಡ ಶಿವಪ್ರಸಾದರು "ಕಲ್ಯಾಣ ವಿಜಯಂ" ಎಂಬ ಪುಸ್ತಕ ಬರೆದಿದ್ದು, ಅದು ಅಲ್ಲಿ ಪಠ್ಯವಾಗಿತ್ತು. ಆಂಧ್ರದ ಕಮ್ಮೆ ಬ್ರಾಹ್ಮಣರು ಬೇರೆ, ಕಮ್ಮಾ ಬೇರೆ. ಕಮ್ಮಾ ಎಂಬುದು ಶೂದ್ರ ವರ್ಣದಲ್ಲಿ ಬಂದರೆ ಕಮ್ಮೆ ಬ್ರಾಹ್ಮಣರು ದ್ವಿಜ ವರ್ಣೀಯರು. ಶ್ರೀ ಎನ್.ಟಿ. ರಾಮ ರಾಯರ ಮೊದಲಿನ ಪತ್ನಿಯ ಹೆಸರು ಬಸವ ತಾರಕಂ; ಒಬ್ಬ ಪ್ರಸಿದ್ಧ ಕಮ್ಯುನಿಸ್ಟ್ ಲೀಡರ್ ಬಸವ ಪುನ್ನಯ್ಯ ಎಂಬುವವರಿದ್ದರು. ಹೀಗೆ ಬಸವ ಎಂಬ ಹೆಸರು ಬಸವ ಪೂರ್ವದಲ್ಲೇ ಆಂಧ್ರದಲ್ಲಿ ಧಾರ್ಮಿಕ ಹಿನ್ನೆಲೆಯದಾಗಿತ್ತು. ಕರ್ನಾಟಕದಲ್ಲಿ ಬಸವಣ್ಣನವರ ನಂತರ ಜನಪ್ರಿಯವಾಯಿತು.

ಈ ಮಾಹಿತಿ ಬಂಜಗೆರೆಯ ಒಂದು ಕುತರ್ಕಕ್ಕೆ ಚೆನ್ನಾಗಿ ಉತ್ತರವನ್ನು ನೀಡುತ್ತದೆ. ಬಸವ ಎಂಬ ಹೆಸರನ್ನು ಬ್ರಾಹ್ಮಣರು ಬಳಸುವುದಿಲ್ಲ. ಮಾದಿಗ ಜನಾಂಗದಲ್ಲಿ ವಿಪುಲವಾಗಿ ಬಳಕೆಯಲ್ಲಿದೆ. ಈ ವಾದ ಹಿಡಿದು ಬಸವಣ್ಣನವರು ಜನ್ಮದಿಂದ ಮಾದಿಗರು ಎಂಬ ಅಸಂಬದ್ಧ ವಾದವನ್ನು ಬಂಜಗೆರೆ ಮಂಡಿಸಿದ್ದಾರೆ. ಬಸವಣ್ಣನವರ ನಂತರ ಕರ್ನಾಟಕದ ಲಿಂಗಾಯತರಲ್ಲಿ ಈ ಹೆಸರು ಮನೆ ಮಾತಾಗಿದೆ. ಅವರ ಉದಾತ್ತ ಕಳಕಳಿಯ ಫಲವಾಗಿ ಲಿಂಗಾಯತೇತರಲ್ಲಿ, ಮುಖ್ಯವಾಗಿ ದಲಿತರಲ್ಲಿ ವ್ಯಾಪಕವಾಗಿ ಬಳಕೆಯಲಿದೆ.

ಬಸವಣ್ಣನವರ ವಂಶಸ್ಥರು ಎಂದು ಹೇಳಿಕೊಳ್ಳುವ ಅನೇಕ ಕುಟುಂಬಗಳವರು ಬಸವನ ಬಾಗೇವಾಡಿ, ಇಂಗಳೇಶ್ವರ, ಬಿಜಾಪುರ, ಬಾಗಲಕೋಟೆ, ಉತ್ತರ ಕರ್ನಾಟಕದಲ್ಲಿ ಇದ್ದಾರೆ. ಬಾಗಲ ಕೋಟೆಯಲ್ಲಿ ಪೋಲಿಸ್ ಸಿ.ಐ.ಡಿ. ಇಲಾಖೆಯ ಒಬ್ಬರು ಪರಿಚಯ ಮಾಡಿಕೊಂಡು ತಾವು ಬಸವಣ್ಣನವರ ವಂಶಸ್ಥರು ಎಂದು ಹೆಮ್ಮೆಯಿಂದ ಹೇಳಿಕೊಂಡರು. ಬಸವಣ್ಣನವರು ಹುಟ್ಟಿದ (ತಂದೆಯ) ಮನೆಯನ್ನು ಸ್ಮಾರಕವನ್ನಾಗಿ ಮಾಡಬೇಕೆಂದು ಸರ್ಕಾರವು ಯೋಜನೆ ರೂಪಿಸಿದಾಗ, ಹುಟ್ಟಿದ ಮನೆ ಎಂದು ಎಂದಿನಿಂದಲೂ ಪ್ರಚಲಿತವಿದ್ದ ಜಾಗವನ್ನು ಭೂ ಸ್ವಾಧೀನ ಮಾಡಿಕೊಂಡು ಪರಿಹಾರ ಕೊಟ್ಟಿದ್ದು ಬ್ರಾಹ್ಮಣ ಕುಲದವರಿಗೆ.

ಡಾ|| ದಯಾನಂದ ವಿನಾಯಕರಾವ್ ಕುಲಕರ್ಣಿ ಮತ್ತು ಅರವಿಂದ ಕೃಷ್ಣಪ್ಪ ಕುಲಕರ್ಣಿ ಇವರು ಈ ಕುಟುಂಬಗಳ ಹಿರಿಯರು. ಸರಕಾರಿ ವೈದ್ಯರಾಗಿದ್ದ ಡಾ|| ದಯಾನಂದ ಅವರು ಸೇವೆಯಿಂದ ನಿವೃತ್ತರಾಗಿದ್ದು, ಬಸವನ ಬಾಗೇವಾಡಿಯ ಬ್ರಾಹ್ಮಣರ ಕೇರಿಯಲ್ಲಿ ಇವರ ಮನೆ. ಇವರಲ್ಲಿ ಶ್ರೀಶೈಲ ಮಲ್ಲಯ್ಯನ ಕಂಬಿ ಇದ್ದು, ಇದನ್ನು ಸ್ಥಳೀಯ ಮಠಪತಿ ಜಂಗಮರು ಪ್ರತಿ ವರ್ಷವೂ ಶ್ರೀಶೈಲಕ್ಕೆ ಒಯ್ಯುತ್ತಾರೆ. ಬಸವಣ್ಣನವರ ವಂಶಜರಾದ ಶ್ರೀ ಅರವಿಂದ ಎನ್ನುವವರು ಬಸವನ ಬಾಗೇವಾಡಿ ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದಾರೆ. ಇವರು ಇಂಗಳೇಶ್ವರದಲ್ಲೇ ನೆಲೆಸಿ ಕೃಷಿ ಉದ್ಯೋಗಿಗಳಾಗಿದ್ದಾರೆ. ಇವರ ಕುಟುಂಬಗಳವರಲ್ಲಿ ತಲತಲಾಂತರದಿಂದ ಬಸವಣ್ಣನವರ ವಂಶಸ್ಥರು ಎಂದು ಹೇಳಿಕೊಂಡು ಬರಲಾಗುತ್ತಿದೆ. ಇವರ ಮನೆಗಳು ಇದ್ದುದೆಲ್ಲ ಅಗ್ರಹಾರವೇ ಆಗಿತ್ತು. ದಯಾನಂದ ಅವರ ತಂದೆಯವರ ಹೆಸರು ವಿನಾಯಕರಾವ್, ಅವರ ತಂದೆಯವರ ಹೆಸರು ಮಹಾದೇವ. ಅನೇಕರು ಮಹಾದೇವ ಎಂಬುದು ಲಿಂಗಾಯತರ ಹೆಸರು ಎಂದು ಕೊಂಡಿದ್ದಾರೆ. ಶೈವ ಬ್ರಾಹ್ಮಣರು ಉಳಿದ ಎಲ್ಲ ವರ್ಣಗಳವರು ಶೂದ್ರರು, ದಲಿತರು ಶಿವ ಮತ್ತು ಪಾರ್ವತಿಯ ಹೆಸರುಗಳನ್ನು ಇಡುವುದು ರೂಢಿಯಲ್ಲಿದೆ. ಬಸವ ಸ್ಮಾರಕವನ್ನು ಬಾಗೇವಾಡಿಯಲ್ಲಿ ಕಟ್ಟಲು ಸರ್ಕಾರವು ಬಹಳ ಹಿಂದೆಯೇ, ಬಂಜಗೆರೆಯಂಥವರ ಬಂಜೆ ವಿಚಾರಗಳು ಗದ್ದಲ ಹುಟ್ಟಿಸುವ ಮೊಗಲೇ ವಶಪಡಿಸಿಕೊಂಡ ಜಾಗ ಬ್ರಾಹ್ಮಣರ ಮನೆಗಳದಾಗಿತ್ತು ಎಂಬುದು ಗಮನಾರ್ಹ. ಅವರಾದರೂ ಸುಲಭವಾಗಿ ಬಿಟ್ಟುಕೊಡಲು ಸಿದ್ಧರಿರಲಿಲ್ಲ, ಸರ್ಕಾರದವರೇ ಒತ್ತಾಯಪೂರ್ವಕವಾಗಿ ಆ ಮನೆಗಳನ್ನು ಪಡೆದುಕೊಂಡರು. ಅರವಿಂದ ಅವರ ಹೇಳಿಕೆಯ ಪ್ರಕಾರ ಇವರದು ಬಸವಣ್ಣನವರ ತಾಯಿ ಮಾದಲಾಂಬಿಕೆಯ ವಂಶ. ಹೀಗಾಗಿ ಇವರ ಬಳಿ ಚನ್ನಬಸವಣ್ಣನವರ ವಂಶದ ವಂಶಾವಳಿಯ ಅಧಿಕೃತ ದಾಖಲೆ ಇದೆ.

ಹೆಳವರು ವಂಶಾವಳಿಗಳ ದಾಖಲೆಯನ್ನಿಟ್ಟು, ಅವರ ಮನೆಗಳನ್ನು ಸಂದರ್ಶಿಸಿ ಹಿಂದಿನವರ ಹೆಸರು ಹೇಳಿ ಮತ್ತು ನಂತರ ಹುಟ್ಟಿರುವ ಮಕ್ಕಳ ಯಾದಿಯನ್ನು ಬರೆದುಕೊಂಡು ಹೋಗುವ ಕಾಯಕವನ್ನು ಮಾಡುತ್ತಾರೆ. ವರ್ಷಕ್ಕೊಮ್ಮೆ ಸಂದರ್ಶಿಸಿ, ವಿವರಗಳನ್ನು ತಿಳಿಸಿ, ನಂತರ ಮನೆಯವರಿಂದ ದವಸ-ಧಾನ್ಯ, ಹಣ-ವಸ್ತ್ರ ಪಡೆದು ಹೋಗುವ ಪರಿಪಾಠ ಇಟ್ಟುಕೊಂಡಿರುತ್ತಾರೆ. ಹೆಳವರು ಕಂಟ್ಲಿ ಎತ್ತಿನ ಮೇಲೆ ಸಂಚರಿಸುತ್ತಾರೆ. ಬಹುಶಃ ವಂಶಾವಳಿ ಹೇಳುವವರನ್ನು ಹೇಳುವವರು ಎಂದು ಕರೆಯುವ ಬದಲಿಗೆ ಅಪಭ್ರಂಶ ಮಾಡಿ ಹೆಳವರು ಎಂದು ಕರೆಯಲಾಗುತ್ತಿರಬಹುದು.

ಮಣಿಗವಳ್ಳಿಯ ಶಿಲಾಶಾಸನ ಚಂದಿರಾಜ ಚಂದ್ರಲಾಂಬಿಕೆ ಎಂಬ ದಂಪತಿಗಳ ಮಗ ಬಸವಣ್ಣ ಎಂದುದನ್ನು ಹೇಳಿದ್ದು ಆಧರಿಸಿ ಕೆಲವರು ಅವರೇ ಬಸವಣ್ಣನವರ ಮಾತಾಪಿತೃಗಳು, ಮಾದರಸ ಮಾದಲಾಂಬಿಕೆ ಸಾಕು ತಾಯಿ ತಂದೆಯರಿರಬೇಕು ಎಂದುಕೊಂಡು ಇಂಗ್ಲೆಂಡ್ ಸಂಶೋಧಕರಾದ ಡಾ|| ಫ್ಲೀಟ್ ಅವರು ಈ ವಾದವನ್ನು ಎತ್ತಿಹಿಡಿದರು. ಆದರೆ ಈ ವಾದ ಬಹುಕಾಲ ನಿಲ್ಲಲಿಲ್ಲ. ಮಣಿಗವಳ್ಳಿಯ ಶಾಸನದಲ್ಲಿ ಇರುವ ಸಾರಾಂಶ ಹೀಗಿದೆ. ಮನಗೂಳಿ ಗ್ರಾಮದ ಸಿದ್ಧಲಿಂಗ ಕಲ್ಲಿದೇವರ ದೇವಾಲಯದ ಬಳಿ ದೊರೆತ ಶಿಲಾಶಾಸನದಲ್ಲಿ ಕಾಶ್ಯಪ ಗೋತ್ರದ ಮತ್ತು ವಾಜಿ ಕುಲದ ಚಂದಿರಾಜ ಮತ್ತು ಆತನ ಸತಿ ಚಂದ್ರಾಂಬಿಕೆ ಇವರ ಉದರದಲ್ಲಿ ಬಸವನು ಜನಿಸಿದನು. ಅವನು ಗ್ರಾಮದೊಳಗಣ ಕಲಿದೇವರಿಗೆ ದೇವಾಲಯ ಕಟ್ಟಿಸಿದನು. ಮಾದಿರಾಜನೆಂಬ ಹೆಸರುಳ್ಳವನು ಈ ಗ್ರಾಮದ ಪುರಪ್ರಭುವಾಗಿ ಆಳುತ್ತಿದ್ದನು.

ಮಾದಿರಾಜನ ವಿನಂತಿಯ ಮೇರೆಗೆ ಏವರೇಕ ಮಲ್ಲರಾಜ ಈ ದೇವಾಲಯಕ್ಕೆ ಗತ್ತಿ ಕೊಟ್ಟಿರುತ್ತಾನೆ ಎಂದು ಶಾಸನದಲ್ಲಿ ಹೇಳಲಾಗಿದೆ. ಈ ಶಾಸನದ ಕಾಲ 1142.

ಮಾದಿರಾಜ-ಮಾದಲಾಂಬಿಕೆಯ ಪುತ್ರ ಬಸವನು ಮನುಗೂಳಿಯ ಗ್ರಾಮದಲ್ಲಿ ಶಿವಾಲಯವನ್ನು ಕಟ್ಟಿಸಿದನೆಂಬ ಅಭಿಪ್ರಾಯ ಬಾಗೇವಾಡಿಯ ಬಸವಣ್ಣನವರಿಗೆ ಈ ಶಾಸನವು ಸಂಬಂಧಿಸಿಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಏಕೆಂದರೆ ಬಸವಣ್ಣನವರ ವಯಸ್ಸು ಈ ಶಾಸನದ ಕಾಲಕ್ಕೆ ಕೇವಲ 8 ವರ್ಷ. ಅವರು ಎಂದೂ ದೇವಾಲಯ ಕಟ್ಟಿಸಿದವರಲ್ಲ. 'ಬಸವ' ಎಂಬ ಅಕ್ಷರ ನೋಡಿ ಯಾರೋ ಮಾಡಿದ ಕೆಲಸಗಳನ್ನು ಕಲ್ಯಾಣದ ಬಸವಣ್ಣನವರ ತಲೆಗೆ ಕಟ್ಟುವ ಅಗತ್ಯವಿಲ್ಲ. ಆಂಧ್ರ ದೇಶದಿಂದ ನಮಗೆ ಸಿಕ್ಕಿರುವ ಮಾಹಿತಿ ಹಲವಾರು ಪ್ರಶ್ನೆಗಳಿಗೆ ಸ್ಪಷ್ಟ ಉತ್ತರವನ್ನು ನೀಡುತ್ತದೆ. ಕಮ್ಮೆನಾಡಿನ ಬ್ರಾಹ್ಮಣರಲ್ಲಿ ಮಾದಿರಾಜ, ಬಸವ, ಬಲದೇವ ಮುಂತಾದ ಹೆಸರು ಬಹಳ ಜನಪ್ರಿಯ. ಮನೆಯಲ್ಲಿ ಹುಟ್ಟುವ ಮೊದಲನೆಯ ಮಗುವಿಗೆ ಬಸವ ಎಂದು ಹೆಸರಿಡುವ ಸಂಪ್ರದಾಯ ನಂದಿಯ ಆರಾಧಕರಾದ ಇವರಲ್ಲಿ ಇದ್ದಿತು. ಆದ್ದರಿಂದ ಮಾದಿರಾಜ-ಮಾದಲಾಂಬಿಕೆ ಪುತ್ರ ಬಸವಣ್ಣ ಬೇರೆ, ಕಾಶ್ಯಪ ಗೋತ್ರದ ಚಂದಿರಾಜ ಚಂದ್ರಾಂಬಿಕೆಯರ ಪುತ್ರ ಬೇರೆ. ಶ್ರೀ ಎಂ.ಪಿ.ಪಾಟೀಲ್ ಎಂಬುವವರು (ಲಿಂ.ಶರಣ. ಐ.ಎಂ. ಮಗದುಮ್ ಅವರ ಪತ್ನಿಯ ತಂದೆ) ಬೆಳಗಾವಿಯ ಅಖಿಲ ಭಾರತ ವೀರಶೈವ ಸಂಘದ ಅಧ್ಯಕ್ಷರು ಮತ್ತು ಸಚಿವರು ಸಹ ಆಗಿದ್ದರು. ಧಾರವಾಡದಲ್ಲಿ ಅಕ್ಕಮಹಾದೇವಿ ಆಶ್ರಮಕ್ಕೆ ಸ್ವತಃ ಬಂದು ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರ ದರ್ಶನ ಪಡೆದು, ಶ್ರೀ ಬಸವೇಶ್ವರರ ಚರಿತ್ರೆಯ ಮೇಲೆ ಹೊಸಬೆಳಕು ಎಂಬ ವಿದ್ವತ್‌ಪೂರ್ಣ ಪುಸ್ತಕವನ್ನು ಕೊಟ್ಟಿದ್ದರು. ಇವರು, ಡಾ|| ಫ.ಗು.ಹಳಕಟ್ಟಿ, ಡಾ|| ಎಸ್.ಸಿ.ನಂದಿಮಠ ಇವರುಗಳೆಲ್ಲ ಬಾಗೇವಾಡಿಯ ಬಸವಣ್ಣನವರು ಮಾದರಸ - ಮಾದಲಾಂಬಿಕೆಯ ಪುತ್ರ ಎಂದೇ ಅಭಿಪ್ರಾಯ ಪಟ್ಟಿದ್ದಾರೆ. ಮತ್ತು ಮಾದರಸ ಸಾಂಖ್ಯಾಯನ ಗೋತ್ರದ ಬ್ರಾಹ್ಮಣರು ಎಂದು ಲಿಂ|| ಶರಣ. ಎಂ.ಪಿ.ಪಾಟೀಲರ ಅಭಿಪ್ರಾಯ. ಕೇವಲ ಹೆಸರಿನ ಆಧಾರದ ಮೇಲೆ ವ್ಯಕ್ತಿಗಳ ಜಾತಿಯನ್ನು ನಿರ್ಧರಿಸುವುದು ಬಾಲಿಶ ಚಿಂತನೆ. ಏಕೆಂದರೆ, ಕುಲಕರ್ಣಿ ಎಂಬ ಅಡ್ಡ ಹೆಸರು ಸಾಮಾನ್ಯವಾಗಿ ಬ್ರಾಹ್ಮಣರಲ್ಲಿ ಇರುತ್ತದೆ. ಆದರೆ ಕುಲಕರ್ಣಿ ಕಾಯಕ ಮಾಡುತ್ತಿದ್ದ ಅನೇಕ ಲಿಂಗಾಯತರಲ್ಲೂ ಈ ಅಡ್ಡ ಹೆಸರು ಕಾಣುತ್ತೇವೆ. ಕಾಶ್ಮೀರದಲ್ಲಿ ಭಟ್ ಎನ್ನುವ ಅಡ್ಡಹೆಸರಿನ ಅನೇಕ ಮುಸಲ್ಮಾನರು ಇದ್ದಾರೆ. ಮಗದುಮ್ ಎಂಬ ಅಡ್ಡಹೆಸರು ಹೊಂದಿದ್ದ ಐ.ಎಂ.ಮುಗದುಮ್ ಮುಸ್ಲೀಮರೆಂದೇ ಬಹಳ ಜನ ತಿಳಿದಿದ್ದರು. ದಲಿತರಲ್ಲಿ ಬಸಪ್ಪ, ಬಸಮ್ಮ, ನೀಲಮ್ಮ, ಎಂಬ ಹೆಸರು ವಿಪುಲವಾಗಿ ಇರುತ್ತವೆ ಎಂದ ಮಾತ್ರಕ್ಕೆ ಬಸವಣ್ಣನವರು ದಲಿತರು ಎಂದು ಆಗುವುದಿಲ್ಲ. ಬದಲಿಗೆ ಬಸವಣ್ಣನವರನ್ನು ದಲಿತರು ಎಷ್ಟು ಅಭಿಮಾನವಿಟ್ಟು ಆರಾಧಿಸುವರು, ಗೌರವಿಸುವರು ಎಂಬುದು ದೃಢವಾಗುತ್ತದೆ.

ಬಸವಣ್ಣನವರು ವಿಪ್ರ ಮೂಲದವರು, ಬ್ರಾಹ್ಮಣ ಸಂಸ್ಕೃತಿ - ಸಂಪ್ರದಾಯಗಳ ಮಧ್ಯೆ ಅಗ್ರಹಾರದ ಪರಿಸರದಲ್ಲಿ ಬೆಳೆದರೆಂದೇ ವೈದಿಕ ಧರ್ಮ - ಸಮಾಜದೊಳಗಣ ಕಂದಾಚಾರ, ಸಂಪ್ರದಾಯ ಅಂಧತೆ, ಶಾಸ್ತ್ರ ದಾಸ್ಯ, ಸ್ತ್ರೀ ಶೋಷಣೆ ಇತ್ಯಾದಿ ಅವರ ನೇರ ಅನುಭವಕ್ಕೆ ಬಂದವು. ಒಂದು ವೇಳೆ ದಲಿತರಲ್ಲೇ ಅವರು ಹುಟ್ಟಿದ್ದರೆ ಖಂಡಿತವಾಗಿಯೂ ಈ ಅನುಭವಗಳು ಲಭ್ಯವಾಗುತ್ತಿರಲಿಲ್ಲ.

1. "ಅಗ್ನಿ ದೈವವೆಂದು ಹವಿಯನ್ನಿಕ್ಕುವ ಹಾರುವರ ಮನೆಯಲ್ಲಿ ಅದೇ ಅಗ್ನಿ ಮನೆಯನ್ನು ಸುಡುವಾಗ ವೇದ ಮಂತ್ರಗಳನ್ನು ಹೇಳದೆ ಹಾಳು ಬೆಂಕಿ ಎಂದು ಶಪಿಸುತ್ತಾರೆ. ಬಚ್ಚಲ ನೀರು, ಬೀದಿಯ ಧೂಳನ್ನು ತಂದು ಬೆಂಕಿಯನ್ನು ಆರಿಸಲು ಎರಚುತ್ತಾರೆ." ಈ ದೃಶ್ಯವನ್ನು ಬಸವಣ್ಣನವರು ಸಾಕ್ಷಾತ್ ನೋಡಿದ್ದಾರೆ. ಹೋಮ, ವೇದ ಪಠಣ, ಪೂಜೆ ಮುಂತಾದವುಗಳನ್ನು ನೋಡಲು ಶೂದ್ರರಿಗೇ ಅವಕಾಶ ವಿರಲಿಲ್ಲ ಎಂದಾಗ ಊರಿನ ಹೊರಗೆ ಬಹಿಷ್ಕೃತರಾಗಿ ಇರುತ್ತಿದ್ದ ಅಸ್ಪೃಶ್ಯರಿಗೆ ಇರುತ್ತಿತ್ತೆ?

2. ಮತ್ತೊಂದು ವಚನ, "ಮಾತಿನ ಮಾತಿಂಗೆ ನಿಮ್ಮ ಕೊಂದಿಹರೆಂದು ಎಲೆ ಹೋತೆ ಅಳುಕಂಡೆಯಾ" ಎಂಬ ವಚನದಲ್ಲಿ ಸಹ ಅಜ ಯಜ್ಞದಲ್ಲಿ ಹೋತವನ್ನು ಮಂತ್ರ ಹೇಳುತ್ತ ಗುದ್ದಿ ಕೊಲ್ಲುವ ಅಮಾನುಷ ಕ್ರಿಯೆಯನ್ನು ಕಂಡೇ ಬಸವಣ್ಣನವರು ಹೇಳಿದ್ದಾರೆ. ದಲಿತರು ಸಂಬೋಳಿ ಎಂದು ಕೂಗುತ್ತ ಸವರ್ಣೀಯರ ಕೇರಿಯಲ್ಲಿ ಸತ್ತು ಬೀಳುತ್ತಿದ್ದ ಪ್ರಾಣಿಗಳ ಶವವನ್ನು ಎತ್ತಿ ಒಯ್ಯಲು ಬರುವ

ವಾತಾವರಣವಿದ್ದಾಗ ದಲಿತನಾಗಿದ್ದರೆ ಬಸವಣ್ಣನವರನ್ನು ಅಜ ಯಜ್ಞವನ್ನು ನೋಡಲು ಬಿಡುತ್ತಿದ್ದರೆ?

3. ನವಧರ್ಮ ದ್ರಷ್ಟಾರರಾದ ಬಸವಣ್ಣನವರು ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದರೇನು (ಬ.ವ.ದೀ 711) ಎಂಬ ವಚನದಲ್ಲಿ ಸ್ವಗೋತ್ರದವರಾದರೇನು, ಸ್ವತಃ ಅಣ್ಣ ತಮ್ಮ ತಂದೆ ಬಂಧು ಬಾಂಧವರಾದರೇನು ಇಷ್ಟಲಿಂಗಧಾರಣೆ ಇಲ್ಲದವರನ್ನು ನನ್ನವರು ಎನ್ನೆನು ಎನ್ನುತ್ತಾರೆ. ಗೋತ್ರವನ್ನು ಹೇಳುವುದು ಸವರ್ಣೀಯರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಲ್ಲಿ ಮಾತ್ರ ಇತ್ತು.

ನಂತರ, ಬಸವಣ್ಣನವರ ಸತತ ಪ್ರಯತ್ನದಿಂದ ಡೋಹಾರ ಕಕ್ಕಯ್ಯರಂಥವರು, ಭಕ್ತಿ ಭಾವಿ ಕಾಂಚೀಪುರದ ಮಾದಾರ ಚನ್ನಯ್ಯನಂಥವರು ಡೋಹರ, ಮಾದಾರರಾಗಿ ಹುಟ್ಟಿಯೂ ಮಹಾನುಭಾವರಾದಾಗ ಬಸವಣ್ಣನವರು ಅವರನ್ನು ಗೋತ್ರ ಪುರುಷರನ್ನಾಗಿ ಮಾಡುತ್ತಾರೆ. ದಲಿತರು ದೀಕ್ಷೆ ಪಡೆದಾಗ ಮೇಲ್ಜಾತಿಯವರು "ನಿಮ್ಮದು ಯಾವ ಗೋತ್ರ ?" ಎಂದು ಕೆಣಕಿದಾಗ, ದಲಿತರು ಕೀಳರಿಮೆಯಿಂದ ತಲೆ ತಗ್ಗಿಸಿ, ಕಾಲ್ಬೆರಳಿನಿಂದ ನೆಲದ ಮೇಲೆ ಗೀಚ ತೊಡಗಿದಾಗ, ಬಸವಣ್ಣನವರು ಆಶ್ವಾಸನೆ ನೀಡಿ "ಧೈರ್ಯವಾಗಿ ಹೇಳಿರಿ ನೀವು ಡೋಹರ ಕಕ್ಕಯ್ಯ, ಮಾದರ ಚನ್ನಯ್ಯನವರ ಗೋತ್ರದವರೆಂದು" ಎಂದು ಬೋಧಿಸುತ್ತಾರೆ.

4. "ಆದಿಯಲಾಗಲಿ ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ ಎನ್ನವರೆನ್ನೆನು ! ಎನ್ನವರಾದಡೆ ಜನ್ನಕ್ಕೆ ನಡೆವರೆ ?" (ಬ.ವ.ದೀ.710) ಎಂಬ ವಚನದಲ್ಲಿ ನನ್ನ ಪಥದವರಾದರೆ ಯಜ್ಞ ಮಾಡಲು ಹೋಗುವರೆ? ಎಂದು ಪ್ರಶ್ನಿಸುತ್ತಾರೆ. ಯಜ್ಞ ಮಾಡುವ ಅಧಿಕಾರ ಬ್ರಾಹ್ಮಣರಿಗಲ್ಲದೆ ಬೇರೆ ಯಾರಿಗೂ ಇರಲಿಲ್ಲ ಎಂಬುದು ಮಹತ್ವಪೂರ್ಣ ಸಂಗತಿ. ಈ ವಚನವನ್ನು ಸಹ ಅಪಾರ್ಥ ಮಾಡಿರುವ ಬಂಜಗೆರೆ ಮಾದಿಗ ಜನಾಂಗದವರಾದ ಬಸವಣ್ಣನವರು 'ಮಾದಿಗರು ಯಜ್ಞ ಮಾಡಲು ಹೋಗುವರೆ?' ಎಂದು ಅರ್ಥ ಮಾಡಿದ್ದಾರೆ. ಅಂದು ಮಾದಿಗರು ಮುಂತಾದ ದಲಿತರಿಗೆ ಯಜ್ಞ ಮಾಡುವುದಿರಲಿ ಮಾಡಿಸಲು ಸಹ ಅವಕಾಶವಿರಲಿಲ್ಲ ಎಂಬುದು ಗಮನಾರ್ಹ.

5. ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ!
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಲಿಂಗದೇವನು ವಿಪ್ರ ಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ ! (ಬ.ವ.ದೀ.713)

ಹಾರುವ ಎಂಬ ಪದವನ್ನು ನಾಮ ಪದ, ಕ್ರಿಯಾ ಪದ ಎರಡೂ ರೀತಿಯಲ್ಲಿ ಬಳಸಿ ಕೆಡುಕ ಹಾರುವ ನಾನಲ್ಲ ಎಂದು ಹೇಳಿದ್ದಲ್ಲದೆ ಭಕ್ತರ ಬರವಿಗಾಗಿ ಹಂಬಲಿಸುವ ಹಾರುವ ಉತ್ಸಾಹ ಉಳ್ಳವನು ಎನ್ನುತ್ತಾರೆ. ಅತ್ಯಂತ ಮಹತ್ವ ಪೂರ್ಣವಾದ ವಾಕ್ಯ. ದೇವರು ವಿಪ್ರ ಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ. ಮೊದಲು ಅಂದರೆ ಪೂರ್ವಾಶ್ರಮದಲ್ಲಿ ಬಸವಣ್ಣನವರು ವಿಪ್ರ ಕರ್ಮದಲ್ಲಿದ್ದರು ಎಂಬುದನ್ನು ಸಂಕೇತಿಸುವುದಿಲ್ಲವೆ ? ಒಂದು ವೇಳೆ ದಲಿತ ಮೂಲದವರಾಗಿದ್ದರೆ ಈ ರೀತಿ ವೈದಿಕದಿಂದ ಶೋಷಣೆಯಾಗುತ್ತಿದೆ, ಯಜ್ಞಯಾಗಾದಿಗಳ ಮೂಲಕ ಪ್ರಾಣಿ ವಧೆಯಾಗುತ್ತದೆ ಎಂದು ಹೇಳದೆ ದಲಿತರು ಹೇಗೆ ಶೋಷಿತರಾಗಿದ್ದಾರೆ, ಅಜ್ಞಾನಾಂಧಕಾರದಲ್ಲಿ ಬಳಲುತ್ತಿದ್ದಾರೆ ಎಂಬುದನ್ನು ಬಣ್ಣಿಸುತ್ತಿದ್ದರು.

ವಚನಗಳು ಗುರು ಬಸವಣ್ಣನವರು ಬರೆದ ಆತ್ಮಕಥೆಯ ತುಣುಕುಗಳು ; ನಿಷ್ಕಲ್ಮಶವಾಗಿ ತಮ್ಮ ಅಂತರಂಗವನ್ನು ಅವರು ವಚನಗಳ ಮೂಲಕ ತೆರೆದು ಇಟ್ಟಿದ್ದಾರೆ.

1. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯ ನೊಕ್ಕುದನಿಕ್ಕ, ನೋಡಯ್ಯ
ದಾಸಯ್ಯ ಶಿವದಾನವನೆರೆಯ, ನೋಡಯ್ಯ

ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ ಲಿಂಗದೇವಾ, ಶಿವಧೋ! ಶಿವಧೋ!!

ಸಮಾಜ ಸುಧಾರಕರದು ಬಹಳ ಕಠಿಣ ಕೆಲಸ. ಶೋಷಕರು ಸುಧಾರಕರಿಗೆ ಕಿರುಕುಳ ಕೊಡುವರು. ಶೋಷಿತರು ತಮ್ಮ ದಯನೀಯ ಸ್ಥಿತಿಯನ್ನು ಅರಿಯದೆ ಅಜಾಗ್ರತರಾಗಿರುವರು. ಶೋಷಕರು(ತಾವೇ ಸೃಷ್ಟಿಸಿದ) ಶಾಸ್ತ್ರಗಳ ದಾಸ್ಯಕ್ಕೆ ಒಳಗಾಗಿ ಮೇಲರಿಮೆಯಿಂದ ಶೋಷಕರಾಗಿದ್ದರೆ ಶೋಷಿತರೂ ಸಹ ಶಾಸ್ತ್ರದಾಸ್ಯಕ್ಕೊಳಗಾಗಿ ಕೀಳರಿಮೆಯಿಂದ ತುಳಿತವನ್ನು ಅಜ್ಞಾನ ಸಹಿತ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಇಂಥ ಸನ್ನಿವೇಶದಲ್ಲಿ ಸಮಾಜ ಸುಧಾರಕ ಬಹಳ ಇಕ್ಕಟ್ಟಿನಲ್ಲಿ ಇರುತ್ತಾನೆ. ಕೆಲವೊಮ್ಮೆ ಶೋಷಿತರು, ಹಿಂದಿನ ಅನುಭವದಿಂದಾಗಿ ಮೇಲ್ಜಾತಿಯವರನ್ನು ನಂಬುವುದಿಲ್ಲ, ಸುಧಾರಕನ ಕಳಕಳಿಯನ್ನು ಅರ್ಥ ಮಾಡಿ ಕೊಳ್ಳದೆ, ಏಕೆ ಬರುತ್ತಿದ್ದಾನೋ ಎಂದು ಅವನನ್ನೇ ಸಂಶಯಿಸುತ್ತಾರೆ. ಇಂಥ ಸನ್ನಿವೇಶದಲ್ಲಿ ಬರೆದ ವಚನವಿದು. ಉತ್ತಮ ಕುಲದಲ್ಲಿ ಹುಟ್ಟಿದುದೇ ನನಗೆ ಒಂದು ಹೊರೆಯಾಗಿದೆ.ಕಕ್ಕಯ್ಯ, ಚನ್ನಯ್ಯ, ದಾಸಯ್ಯ ಮುಂತಾದ ಕೆಳಜಾತಿಯಲ್ಲಿ ಹುಟ್ಟಿದವರು ನನ್ನನ್ನು ನಂಬಲಿಕ್ಕಿಲ್ಲ. ಎಂದು ಹಲುಬುತ್ತಾರೆ.

ಗುರು ಬಸವಣ್ಣನವರು ಉತ್ತಮ ಕುಲದಲ್ಲಿ ಹುಟ್ಟಿದವರು ಮತ್ತು ದಲಿತರಲ್ಲಿ ಹುಟ್ಟಿದವರಲ್ಲ ಎಂಬುದನ್ನು ದೃಢಪಡಿಸಲಿಕ್ಕೆ ಇದೊಂದು ವಚನವೇ ಸಾಕು. ಒಂದು ವೇಳೆ ದಲಿತರಾಗಿದ್ದಿದ್ದರೆ, ಕಕ್ಕಯ್ಯ, ದಾಸಯ್ಯ ಚನ್ನಯ್ಯ ತಮ್ಮ ಸ್ವಜಾತಿಯರೊಡನೆ ವ್ಯವಹರಿಸಲು ಏಕೆ ಹಿಂಜರಿಯುತ್ತಾರೆ? ಸಂಬೋಳಿ ನಾಗಿದೇವನ ಗುರು ಬಸವಣ್ಣನವರು ಪ್ರಸಾದ ಸ್ವೀಕರಿಸಿದಾಗ ಹೊಲೆಯನ ಮನೆಯಲ್ಲಿ ಉಂಡರೆಂದು ಗದ್ದಲ ಎಬ್ಬಿಸಿ ವಿಪ್ರರು ಬಿಜ್ಜಳನಿಗೆ ಏಕೆ ಚಾಡಿ ಹೇಳುತ್ತಿದ್ದರು?

ವಚನಗಳನ್ನು ಅಪಾರ್ಥ ಮಾಡುವುದರಲ್ಲಿ ಖಂಡಿತಾ ಪ್ರಶಸ್ತಿ ಪಡೆಯಲು ಸಮರ್ಥರಾಗಿರುವ ಬಂಜಗೆರೆ ಬಹುಶಃ ಹೀಗೆ ಈ ವಾಕ್ಯದ ಅರ್ಥ ಮಾಡುತ್ತಾರೆ. ಮಾದಾರ ಕುಲಜರಾದ ಬಸವಣ್ಣನವರು "ನನ್ನನ್ನು ಉತ್ತಮ ಕುಲದಲ್ಲಿ ಹುಟ್ಟಿಸಬೇಡ"(?) ಎಂದು ದೇವರಲ್ಲಿ ಕೇಳಿಕೊಂಡಿದ್ದಾರೆ.

2. ಸೆಟ್ಟಿ ಎಂಬೆನೆ ಸಿರಿಯಾಳನ, ಮಡಿವಾಳನೆಂಬೆನೆ ಮಾಚಯ್ಯನ?
ಡೋಹಾರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ?
ಆನು ಹಾರುವನೆಂದಡೆ ಲಿಂಗದೇವಯ್ಯ ನಗುವನಯ್ಯಾ.

ಮೂರನೆಯ ವರ್ಣದವರಾದ ವೈಶ್ಯರಿಗೂ ಮೊದಲು 2 ವರ್ಣಗಳವರಿಗಿದ್ದ ಸಾಮಾಜಿಕ, ಧಾರ್ಮಿಕ ಸ್ಥಾನಮಾನ ಮತ್ತು ಸವಲತ್ತು ಇರಲಿಲ್ಲ. ಹೀಗಾಗಿ ಸೆಟ್ಟಿ, ಮಡಿವಾಳ, ಡೋಹರ, ಮಾದಾರ ಮುಂತಾದವರನ್ನು ಕಡಿಮೆ ಕುಲದವರೆಂದು ಹೀಯಾಳಿಸಲಾಗುತ್ತಿತ್ತು. ಅದಕ್ಕಾಗಿ ಬಸವಣ್ಣನವರು ವಿಡಂಬಿಸಿಕೊಳ್ಳುತ್ತ ಹೇಳುವರು. ಸಿರಿಯಾಳ, ಮಾಚಯ್ಯ, ಕಕ್ಕಯ್ಯ,ಚನ್ನಯ್ಯ, ಮುಂತಾದವರನ್ನು ಕಡಿಮೆ ಕುಲದ ಸೆಟ್ಟಿ,. ಮಡಿವಾಳ, ಡೋಹಾರ, ಮಾದಾರ ಎಂದು ಮೂದಲಿಸಿ ನಾನು ಶ್ರೇಷ್ಠ ಕುಲದ ಬ್ರಾಹ್ಮಣ ಎಂದುಕೊಂಡರೆ ದೇವರು ನಗುವನು. ಹೀಗೆ ವಿಡಂಬನಾತ್ಮಕವಾಗಿ ಹೇಳಿ ನಾನು ಹಾರುವ ಎಂಬುದನ್ನು ಪರೋಕ್ಷವಾಗಿ ಪ್ರತಿಪಾದಿಸುವ ವಚನ ವಾಕ್ಯ ಬಂಜಗೆರೆ "ಬಸವಣ್ಣನವರು ತಾನು ಹಾರುವನಲ್ಲ, ಹಾಗೆ ಕರೆದರೆ ದೇವರು ನಗುವನು," ಎಂದು ಅಪಾರ್ಥ ಮಾಡುತ್ತಾರೆ.

"ವಿಶ್ವಗುರು ಬಸವಣ್ಣನವರು ಅತಿ ಹೆಚ್ಚು ಸಲ ಮಾದಾರ ಚನ್ನಯ್ಯನ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಬಹುಶಃ ಇವರು ಮಾದಾರ ಚನ್ನಯ್ಯನ ಕುಲದವರೇ ಆದ್ದರಿಂದ ಅದಕ್ಕಾಗಿ ಅಷ್ಟು ಸಲ ಸ್ಮರಿಸಿದ್ದಾರೆ." ಎಂಬ ವಿಲಕ್ಷಣ ತರ್ಕ ಬಂಜಗೆರೆಯದು. ಶೈವ ಪರಂಪರೆ ಮುಖ್ಯವಾಗಿ ಭಕ್ತಿ ಪರಂಪರೆ. ತಮಿಳು ನಾಡಿನಲ್ಲಿ ಆಗಿ ಹೋಗಿರುವ 63 ಪುರಾತನರನ್ನು ಗಮನಿಸಿದಾಗ ಅವರೆಲ್ಲ ವಿವಿಧ ಜಾತಿ ಮೂಲದಿಂದ ಬಂದವರು. ಆದರೆ ಶಿವಭಕ್ತಿಯನ್ನು ಸೂತ್ರವಾಗಿ ಹಿಡಿದು ಇವರೆಲ್ಲರನ್ನು ಪೋಣಿಸಿ 63 ಪುರಾತನರೆಂದು ಮಾಲೆ ಮಾಡಲಾಗಿದೆ. ಇದು ನಿಜಕ್ಕೂ ಮೆಚ್ಚುವ ಸಂಗತಿ. ಕಾಂಚೀಪುರದ ಚೋಳರಾಜನ ಕುದುರೆ ಲಾಯಕ್ಕೆ ಹುಲ್ಲನ್ನು ಹಾಕುವ ಕಾಯಕ ಮಾಡುತ್ತಿದ್ದ ಚನ್ನಯ್ಯನ ಮನೆಯಲ್ಲಿ ಶಿವ (ಯೋಗಿ)ನು ಅಂಬಲಿಯನ್ನು ಸವಿದ. ನಂತರ ರಾಜನ ಅರಮನೆಯ ಭೋಜನಕ್ಕೆ ಆಹ್ವಾನವಿತ್ತು. ಆದರೆ ಶಿವ (ಯೋಗಿ)ನು ತಾನು ಚನ್ನಯ್ಯನ ಮನೆಯಲ್ಲಿ

ಅಂಬಲಿಯನ್ನು ಸವಿದಾಗಿದೆ ಎಂದಾಗ ರಾಜನಿಗೆ ಅಚ್ಚರಿ. ರಾಜನ ಭಕ್ತಿಯನ್ನೂ ಮೀರಿಸಿದ ಈ ಪುಣ್ಯ ಪುರುಷ ಯಾರು? ಎಂದು ಹುಡುಕಿ ಚನ್ನಯ್ಯನನ್ನು ಮನೆಯ ಬಾಗಿಲಿಗೆ ಹೋಗಿ ಗೌರವಿಸಿದನು. ಇದು ತಮಿಳು ನಾಡು ಮಾತ್ರವಲ್ಲ ಕರ್ನಾಟಕದ ಭಕ್ತಿ ಪರಂಪರೆಯ ಮೇಲೂ ಪ್ರಭಾವ ಬೀರಿತು. ನಿಗಮ ಆಗಮಗಳ ಸಂಪ್ರದಾಯವನ್ನು ಮುರಿದ ಶಿವ (ಯೋಗಿ)ನು ದಲಿತನ ಮನೆಗೆ ಹೋಗಿ ಉಂಡುದು, ರಾಜನು ತನ್ನ ಸ್ಥಾನಮಾನ ಬದಿಗಿಟ್ಟು ಚನ್ನಯ್ಯನ ಮನೆ ಬಾಗಿಲಿಗೆ ಹೋಗಿ ಸನ್ಮಾನಿಸಿದ್ದು, ಮುಗ್ಧ ಭಕ್ತಿಯಿಂದ ಚನ್ನಯ್ಯ ಇಡೀ ನಾಡಿನ ಗಮನ ಸೆಳೆದುದು ಬಸವಣ್ಣನವರು ಚನ್ನಯ್ಯನನ್ನು ಪುನಃ ಪುನಃ ಸ್ಮರಿಸಲು ಮುಖ್ಯ ಕಾರಣ.

ಚನ್ನಯ್ಯನ ಬಗ್ಗೆ ಅತೀವ ಅಭಿಮಾನ ಬಸವಣ್ಣನವರಿಗೆ. ಮುಗ್ಧ ಭಕ್ತಿಯಿಂದ ಶಿವನನ್ನು ಬರಮಾಡಿಕೊಂಡ ಚನ್ನಯ್ಯನನ್ನು ಎಷ್ಟು ಕೊಂಡಾಡಿದರೂ ಸಾಲದು ;ಅದಕ್ಕೆ ಹೀಗೆ ಹೇಳುವರು:

ಲೋಕಾದಿ ಲೋಕಂಗಳೆಲ್ಲ ಚನ್ನಯ್ಯನ ಮಕ್ಕಳು,
ಬ್ರಹ್ಮ ವಿಷ್ಣು ರುದ್ರರೆಲ್ಲಾ ಚನ್ನಯ್ಯನ ಮಕ್ಕಳು,
ಸನಕ ಸನಂದ ಸನಾದಿಗಳೆಲ್ಲಾ ಚನ್ನಯ್ಯನ ಮಕ್ಕಳು,
ಗರುಡ ಗಾಂಧರ್ವರೆಲ್ಲಾ ಚನ್ನಯ್ಯನ ಮಕ್ಕಳು
ಸಿದ್ಧ ವಿದ್ಯಾಧರರುಗಳೆಲ್ಲಾ ಚನ್ನಯ್ಯನ ಮಕ್ಕಳು,
ಏಕಾದಶ ರುದ್ರರು ದ್ವಾದಶಾದಿತ್ಯರು ಚನ್ನಯ್ಯನ ಮಕ್ಕಳು,
ನವ ಬ್ರಹ್ಮರು ಚನ್ನಯ್ಯನ ಮಕ್ಕಳು,
ತ್ರೈತ್ರಿಂಶ ಕೋಟಿ ದೇವತೆಗಳೆಲ್ಲಾ ಚನ್ನಯ್ಯನ ಮಕ್ಕಳು,
ಅಂತರಂತರ ಸಂತರೆಲ್ಲಾ ಚನ್ನಯ್ಯನ ಮಕ್ಕಳು,
ಭಾವ ಭಾಳೇಕ್ಷಣರೆಲ್ಲ ಚನ್ನಯ್ಯನ ಮಕ್ಕಳು.
ನನ್ನ ನಿನ್ನಂತಹವರೆಲ್ಲಾ ಚನ್ನಯ್ಯನ ಮಕ್ಕಳು
ಆಣೆ, ನಿಮ್ಮಾಣೆ ಕೂಡಲ ಸಂಗಮದೇವ

ಇದನ್ನು ಸಿದ್ಧಾಂತವೆಂದು ಭಾವಿಸದೆ ಭಾವೋದ್ರೇಕದಿಂದ ಬಸವಣ್ಣನವರು ಕೊಂಡಾಡಿದ ವಚನವೆಂದು ಭಾವಿಸಬೇಕು. ನನ್ನ ನಿನ್ನಂಥವರೆಲ್ಲ ಚನ್ನಯ್ಯನ ಮಕ್ಕಳು ಎಂದು ಚನ್ನಯ್ಯನ ಮನೆಯಲ್ಲಿ ಉಂಡ ಕಾರಣ ಶಿವನಿಗೇ ಬಸವಣ್ಣನವರು ಹೇಳಿರುವುದು.

ಬಹಳ ಜನಪ್ರಿಯ ವಚನವೊಂದು ಹೀಗಿದೆ.

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯಾ;
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ-
ಎನ್ನನೇತಕ್ಕರಿಯಿರಿ, ಲಿಂಗದೇವಾ ?

ಪರಮಾತ್ಮನ ಒಲುಮೆಗಾಗಿ ಹಂಬಲಿಸುವ ಸಾಧಕ ಜೀವಿ ಬಸವಣ್ಣನವರು ಭಕ್ತಿಯ ಬಲದಿಂದ ದೇವನನ್ನು ಒಲಿಸಿದ ಚನ್ನಯ್ಯ, ಕಕ್ಕಯ್ಯ, ಚಿಕ್ಕಯ್ಯ, ಕಿನ್ನರಿ ಬ್ರಹ್ಮಯ್ಯ ಮುಂತಾದವರನ್ನು ಸ್ಮರಿಸಿ ಅವರ ಭಕ್ತಿಗೆ ಒಲಿದ ನೀನು ನನ್ನ ಅಂತರಂಗದ ಹಂಬಲವನ್ನೇಕೆ ಅರಿಯುತ್ತಿಲ್ಲ ಎಂದು ಪರಿತಪಿಸುತ್ತಿದ್ದಾರೆ.

ದಲಿತರಲ್ಲಿ ಅನೇಕ ಒಳಪಂಗಡಗಳಿವೆ. ಕೆಲವು ಕಸುಬುಗಳಿಂದಾಗಿ ಈ ಭೇದಗಳು ಬಂದಿರುವುದಲ್ಲದೆ, ಅವುಗಳಲ್ಲೂ ಮೇಲು ಕೀಳೆಂದು ವಿಂಗಡಿಸುತ್ತಾರೆ. 21ನೆಯ ಶತಮಾನದಲ್ಲಿ ಸಹ ಮಾದಿಗರು ತಮ್ಮನ್ನು ಪರಿಶಿಷ್ಟ ಜಾತಿಗಳಲ್ಲಿ ಹೆಚ್ಚಿಗೆ ಕಡೆಗಾಣಿಸಲಾಗಿದೆ ಎಂದು ಹೋರಾಡುತ್ತಿದ್ದಾರೆ. ಒಳ ಮೀಸಲಾತಿಯನ್ನು ಕೇಳುತ್ತಿರುವವದಲ್ಲದೆ ಅತ್ಯಂತ ಸಂಕಷ್ಟಕರ ಸ್ಥಿತಿಯಲ್ಲಿದ್ದಾರೆ. ಇನ್ನು 12ನೆಯ ಶತಮಾನದಲ್ಲಿ ಹೇಗಿರಬಹುದು?! ಅದಕ್ಕಾಗಿ ಬಸವಣ್ಣನವರು ಒಂದು ಕಡೆ ಮಾದಾರ ಚನ್ನಯ್ಯನ ಭಕ್ತಿ ಸಾಧನೆಗಾಗಿ ಕೊಂಡಾಡಿದರೆ, ಇನ್ನೊಂದು ಕಡೆ ಈ ಜನಾಂಗ ದೀನರಲ್ಲೇ ದೀನರು, ದಲಿತರಲ್ಲೇ ಹೆಚ್ಚು ದಯನೀಯ

ಸ್ಥಿತಿಯಲ್ಲಿ ಇರುವವರು ಎಂದು ಹೆಚ್ಚು ಆತ್ಮೀಯತೆ ತೋರಿಸಿದ್ದಾರೆಂದು ಊಹಿಸಬಹುದು. ಒಂದು ವಚನದಲ್ಲಿ, (348) ಚನ್ನಯ್ಯ ಎಮ್ಮಯ್ಯನು, ಚನ್ನಯ್ಯನ ಮಗ ನಾನು ಎಂದರೆ ಇನ್ನೊಂದು ವಚನದಲ್ಲಿ ಅಪ್ಪನು ಡೋಹರ ಕಕ್ಕಯ್ಯನಾಗಿ ಮುತ್ತಯ್ಯ ಚನ್ನಯ್ಯನಾದಡೆ ಆನು ಬದುಕೆನೆ? (344) ಎನ್ನುತ್ತಾರೆ. ಮಾದರು ಬೇರೆ ಡೋಹರರು ಬೇರೆ. ಅಂದಾಗ ಮಾದಾರನ ಮಗ, ಡೋಹರನ ಮಗ ಎರಡೂ ಹೇಗೆ ಆಗಲು ಸಾಧ್ಯ?

ಇನ್ನೊಂದು ವಚನ ಹೀಗಿದೆ :

ಎಮ್ಮ ತಾಯಿ ನಿಂಬವ್ವೆ; ನೀರನೆರೆದುಂಬುವಳು;
ಎಮ್ಮಯ್ಯ ಚನ್ನಯ್ಯ; ರಾಯಕಂಪಣವ ಹೊರುವ-
ಎಮಗ್ಗಾರೂ ಇಲ್ಲವೆಂಬಿರಿ-
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು;
ಎಮಗಾರೂ ಇಲ್ಲವೆಂಬಿರಿ.
ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲ್ಲಿ ಕೊಂಬೆ,
ಎನ್ನ ಪಾತ್ರೆ ತುಂಬಿತ್ತು, ಲಿಂಗದೇವಾ (ಬ.ವ.ದೀ.353)

ಕರ್ನಾಟಕದ ಒಬ್ಬ ಭಕ್ತೆ ನೆಲ್ಲೂರ ನಿಂಬವ್ವೆ. ಆಕೆ ಮನೆ ಮನೆಗೆ ನೀರನ್ನು ಹಾಕುತ್ತಿದ್ದಳು. ಆಕೆಯನ್ನು ತಾಯಿ ಎಂದು, ಕಂಚೀಪುರದಲ್ಲಿ ರಾಜನ ಲಾಯಕ್ಕೆ ಹುಲ್ಲನ್ನು ಹಾಕುತ್ತಿದ್ದ ಚನ್ನಯ್ಯನನ್ನು ತಂದೆ ಎನ್ನುತ್ತಾರೆ ಬಸವಣ್ಣನವರು. ಇದು ಸಾಧ್ಯವೆ? ಚನ್ನಯ್ಯ ಬಸವಣ್ಣನವರಿಗೂ ಪೂರ್ವದಲ್ಲೇ ಆಗಿ ಹೋಗಿರುವ ಶಿವಭಕ್ತ.

ಇನ್ನೊಂದು ವಚನದಲ್ಲಿ ಕಕ್ಕಯ್ಯ ದೊಡ್ಡಪ್ಪ, ಚನ್ನಯ್ಯ ಚಿಕ್ಕಪ್ಪ ಎನ್ನುವರು.

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂದೆಂಬಿರಿ
ಬಾಣನವ ನಾನು, ಮಯೂರನವ ನಾನು.
ಕಾಳಿದಾಸನವ ನಾನು!
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲ ಸಂಗಯ್ಯಾ.

ಈ ವಚನದ ಭಾವವೇನೆಂದರೆ, ಎಂತಹ ಶ್ರೇಷ್ಠ ವೈದಿಕ ಪರಂಪರೆಯನ್ನು ತೊರೆದು ಬಸವಣ್ಣನವರು ಹೊರಹೋದರಲ್ಲ ಎಂದು ಟೀಕಿಸಿದವರಿಗೆ ತಾವು ಯಾವ ಹಿನ್ನೆಲೆಯೂ ಇಲ್ಲದವರಲ್ಲ ಒಂದು ಭಕ್ತಿ ಪರಂಪರೆಯ ಸಂಬಂಧ ಹೊಂದಿದವರು ಎಂದು ಹೇಳಿ, 63 ಪುರಾತನರು, ಇನ್ನಿತರ ಶಿವಭಕ್ತರೊಡನೆ ಭಾಕ್ತಿಕ ಬಾಂಧವ್ಯ ಕಲ್ಪಿಸಿ, ನಮ್ಮ ಶಿವಭಕ್ತರಾದ ಅಜ್ಜರಜ್ಜರು ಸಂಪಾದಿಸಿದ ಭಕ್ತಿ ಸಂಪದದ ವಾರಸುದಾರರು ತಾವು ಎಂಬುದನ್ನು ಪ್ರತಿಪಾದಿಸುತ್ತಾರೆ.

ಭಾರತ ದೇಶದಲ್ಲಿ ವೈದಿಕ ಮತ್ತು ಆಗಮಿಕ ಎಂಬ ಎರಡು ಶಾಸ್ತ್ರೀಯ ಪರಂಪರೆಗಳು (Classical heritage). ಶೈವ, ವೈಷ್ಣವ ಮತ್ತು ಶಾಕ್ತ ಎಂಬ ಭಕ್ತಿ ಸಂಪ್ರದಾಯಗಳು ಉಂಟು. ಇದರಲ್ಲಿ ಬಸವಣ್ಣನವರು ಶೈವದೊಡನೆ ಗುರುತಿಸಿಕೊಳ್ಳುತ್ತಾರೆ.

ಹರಸು ಮೂಲಿಗನಾಗಿ, ಪುರಾತರೊಳಗಾಗಿ
ಒಲೆ ಬಳಿಯಲು ಬಂದ ಮಾದಾರನ ಮಗ ನಾನಯ್ಯ
ಕೇದ ಹೊಲೆಯನೆಮ್ಮಯ್ಯ, ಜಾತಿ ಸೂತಕ
ಮಾದಾರನ ಮಗ ನಾನಯ್ಯ,
ಕಕ್ಕಯ್ಯನೆನ್ನ ಕೂಡಲ ಸಂಗಯ್ಯಾ,
ಚಿಕ್ಕಯ್ಯನೆನ್ನ ಮುತ್ತಯ್ಯ ಚನ್ನಯ್ಯನಯ್ಯಾ.

ಈ ಭಕ್ತಿ ಪರಂಪರೆಗೆ ಹರಿಕೆ ಮೂಲಿಗೆ, ಅಲ್ಲಿ ಅಸಂಖ್ಯಾತ ಪುರಾತನರ (predecessors)

ಮೂಲಕ ಶಿವಭಕ್ತಿ ಪರಂಪರೆ ಸಾಗಿ ಬಂದಿತು. ಇವರಲ್ಲಿ ಮುಖ್ಯ ಮಾದಾರ ಚೆನ್ನಯ್ಯ. ಹೊಲೆಯನಾಗಿ ಹುಟ್ಟಿಯೂ ದೇವರ ಅನುಗ್ರಹವನ್ನು, ರಾಜನ ಅಭಿಮಾನವನ್ನು ಗಳಿಸಿಕೊಂಡು ಜಾತಿ ಸೂತಕ ಕಳೆದುಕೊಂಡ. ಎಂದು ಮೆಚ್ಚುಗೆಯಿಂದ ನುಡಿವರು. ಈ ಪ್ರಸಂಗ ಶಾಸ್ತ್ರದ ಉಲ್ಲಂಘನೆ, ಸಂಪ್ರದಾಯದ ಉಲ್ಲಂಘನೆ

ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ!
ಆಗಮ ಹೆರೆತೊಲಗಿ ಅಗಲಿದ್ದಿತಯ್ಯಾ!
ನಮ್ಮ ಕೂಡಲ ಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ!

ಕೀಳು ಜಾತಿಯವರಿಗೆ ದೇವರು ಒಲಿಯುವುದು ಸಾಧ್ಯವೇ ಇಲ್ಲ ಎಂದು ಶಾಸ್ತ್ರಗ್ರಂಥಗಳನ್ನು ತೋರಿಸುವವರಿಗೆ ಗುರು ಬಸವಣ್ಣನವರು ಹೇಳುತ್ತಾರೆ.

ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೆ ಅಯ್ಯಾ?
ಮಾಲೆಗಾರನ ಕೇಳಿ ನನೆ ಅರಳುವುದೆ ?
ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯಾ ?
ನಮ್ಮ ಲಿಂಗದೇವನ ಕೂಡಿದ ಕೂಟದ ಕರುಳ ಕಲೆಯನು,
ಇದಿರಿಂಗೆ ತೋರುವುದು ಆಚಾರವೆ ಅಯ್ಯಾ?

ನಿಮ್ಮ ಶಾಸ್ತ್ರ ನೂರು ಕಟ್ಟಳೆ ಹೇಳಲಿ. ಇಲ್ಲಿ ಅನುಭವಕ್ಕೆ ಸಿಕ್ಕಿದೆ ಅನುಭಾವಿಯ ಸ್ಥಿತಿ . ಇನ್ನು ಯಾವ ಶಾಸ್ತ್ರದ ಪುರಾವೆಯೂ ಬೇಕಾಗಿಲ್ಲ,

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು;
ಬಾಣನವ ನಾನು, ಮಯೂರನವ ನಾನು.
ಕಾಳಿದಾಸನವ ನಾನು !
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲ ಸಂಗಯ್ಯಾ.

ಶಿವಭಕ್ತರ ಸಮೂಹದಲ್ಲಿ ಬರುವ ಬಾಣ, ಮಯೂರ, ಕಾಳಿದಾಸ, ಕಕ್ಕಯ್ಯ, ಚನ್ನಯ್ಯ ಎಲ್ಲರೊಡನೆ ಬಸವಣ್ಣನವರು ಭಾಕ್ತಿಕ ಸಂಬಂಧ ಕಲ್ಪಿಸಿಕೊಂಡಿರುವುದು ಗಮನಾರ್ಹ.

ಬಸವಣ್ಣನವರು ಮಾದರ ಕುಲದವರು ಎಂಬುದನ್ನು ಸಾಧಿಸಬೇಕೆಂಬ ಆಶಯ ಹೊಂದಿ ಬಂಜಗೆರೆ ಜಯಪ್ರಕಾಶ್ ಪುಸ್ತಕದ ಉದ್ದಕ್ಕೂ ವಚನಗಳಿಗೆ ಅಪಾರ್ಥ ಮಾಡುತ್ತಾ ಸಾಗುತ್ತಾರೆ.

ಅಪ್ಪನು ನಮ್ಮ ಮಾದಾರ ಚನ್ನಯ್ಯ;
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯಾ;
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ-
ಎನ್ನನೇತಕ್ಕರಿಯಿರಿ, ಲಿಂಗದೇವಾ ?

ಈ ವಚನದಲ್ಲಿ ಅಪ್ಪ ಮಾದರ ಚನ್ನಯ್ಯನಾದರೆ, ಡೋಹರ ಕಕ್ಕಯ್ಯ ದೊಡ್ಡಪ್ಪನಾಗುತ್ತಾನೆ. ಸಾಮಾನ್ಯವಾಗಿ ಉಭಯ ಪಂಗಡಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುತ್ತಿರಲಿಲ್ಲ. ಇನ್ನೊಂದು ವಚನದಲ್ಲಿ,

ಚನ್ನಯ್ಯನ ಮನೆಯ ದಾಸನ ಮಗಳು;
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವ ಸಾಕ್ಷಿಯಾಗಿ.

ಈ ವಚನದಲ್ಲಿ ಚನ್ನಯ್ಯನ ಮಗನಾಗದೆ ಬಸವಣ್ಣನವರು ಚನ್ನಯ್ಯನ ಮನೆಯ ದಾಸನ ಮಗನ ಮಗನಾಗುತ್ತಾರೆ.

ಬಂಜಗೆರೆಯಂತೆ ಊಹೆ ಮಾಡಹೋದರೆ ಎಂಥಾ ಅನಾಹುತವಾಗುವುದು? ಈ ವಚನದ ಆಂತರ್ಯವೇನೆಂದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಚೆನ್ನಯ್ಯ, ಕಕ್ಕಯ್ಯ ಕೆಳಶ್ರೇಣಿಯವರು. ಅವರುಗಳ ಮನೆಯ ದಾಸಿಯ ಮಗಳು, ದಾಸನ ಮಗ ಬೆರಣಿಯನಾಯಲು ಹೋಗಿ ಸಂಗವ ಮಾಡಿದರು. ಅಂದರೆ ಅನಿಧಿಕೃತ ಸಂಬಂಧ ಮಾಡಿದರು. ಆಗ ಒಂದು ಮಗು ಹುಟ್ಟಿತು. ಇಂಥ ಮಗುವಿನೊಡನೆ ತಮ್ಮನ್ನು ಸಮೀಕರಿಸಿಕೊಂಡು ಬಸವಣ್ಣನವರು ಮಾತನಾಡುವುದೇಕೆ? ಇಲ್ಲಿ ಅವರು ಆಲೋಚಿಸುವುದು ಮಾನವ ಹಕ್ಕು ಕುರಿತು. ಉತ್ತಮ ಬ್ರಾಹ್ಮಣ ಕುಲದಲ್ಲಿ, ಉತ್ತಮ ದಂಪತಿಗಳ ಗರ್ಭದಲ್ಲಿ ಅಧಿಕೃತ ವಿವಾಹ ಸಂಬಂಧದಿಂದ ಹುಟ್ಟಿದ ನನಗೆ ಸಾಮಾಜಿಕವಾಗಿ ಧಾರ್ಮಿಕವಾಗಿ ಸಿಕ್ಕುತ್ತಿರುವ ಸೌಲಭ್ಯಗಳು, ಹಕ್ಕುಗಳು ಆ ರೀತಿ ಹುಟ್ಟಿದ ಮಗುವಿಗೂ ಸಿಗಬೇಕು. ಇದಕ್ಕಾಗಿ ಅವರ ಹೋರಾಟ.

"ಆನು ದೇವಾ ಹೊರಗಣವನು" ಪುಸ್ತಕಕ್ಕೆ ಇದನ್ನು ಶೀರ್ಷಿಕೆಯಾಗಿ ಬಳಸಿರುವ ಮೂಲ ವಚನ ಹೀಗಿದೆ.

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೆ ಐದಾರೆ,
ಆನು ದೇವಾ ಹೊರಗಣವನು,
ಸಂಬೋಳಿ, ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದ್ದೇನೆ.
ಲಿಂಗದೇವಾ, ನಿಮ್ಮ ನಾಮವಿಡಿದ ಅನಾಮಿಕ ನಾನು (ಬ.ವ.ದೀ. 929)

ಆನು ದೇವಾ ಹೊರಗಣವನು ಎಂದರೆ ಹೊರಗಣ (ದಲಿತ) ಜಾತಿ ಎಂಬ ವಿಪರೀತಾರ್ಥವನ್ನು ಬಂಜಗೆರೆ ಮಾಡಿದ್ದಾರೆ. ಈ ವಚನದ ಅಂತರಾರ್ಥ ಅಪಾರ ಮಾನವೀಯ ಕಳಕಳಿಯಿಂದ ಕೂಡಿದೆ.

ವಿಶ್ವಗುರು ಬಸವಣ್ಣನವರು ಕೊಟ್ಟದು ಅಹಿಂಸಾವಾದಿ, ಸಸ್ಯಾಹಾರಿ, ಸದಾಚಾರದ ಧರ್ಮ. ಇದರ ಬಾಗಿಲು ತೆರೆಯಲ್ಪಟ್ಟಾಗ ಆ ಮೊದಲೇ ಸಸ್ಯಾಹಾರಿಗಳಾಗಿದ್ದ ಅನೇಕ ಮೇಲ್ಜಾತಿಯವರು ಬೇಗನೆ ಒಳಗೆ ಬಂದರು. ಆದರೆ ಕೆಳಸ್ತರದ ಜಾತಿಗಳವರು, ದಲಿತರು ತಮ್ಮ ಪೂರ್ವ ಸಂಸ್ಕಾರಗಳನ್ನು ತೊರೆಯಲಾರದೆ ಲಿಂಗಾಯತ ಧರ್ಮ ಮಂದಿರವನ್ನು ಪ್ರವೇಶಿಸಲು ಹಿಂಜರಿದಾಗ ಬಸವಣ್ಣನವರು ಈ ವಚನವನ್ನು ಬರೆದಿದ್ದಾರೆ. "ಈಗಾಗಲೇ ದೀಕ್ಷೆ ಪಡೆದು ಲಿಂಗಾಯತ ಧರ್ಮವನ್ನು ಸ್ವೀಕರಿಸಿದವರೆಲ್ಲ ಸಲುಗೆವಂತರಾಗಿ ಒಳಗೆ ಲಿಂಗಾರ್ಚನೆ ಮಾಡುತ್ತಿದ್ದಾರೆ. ಆದರೆ ನನ್ನ ಚಿತ್ತ ಇರುವುದು ಅತ್ಯಂತ ಕೆಳಸ್ತರದವರ ಮೇಲೆ ಅವರ ವಿಶ್ವಾಸವನ್ನು ಗಳಿಸಲೋಸುಗ ನಾನು ದಲಿತರು ಕೂಗುವಂತೆ ಸಂಬೋಳಿ ಸಂಬೋಳಿ ಎನ್ನುತ್ತ ಅವರ ಬರವಿಗಾಗಿ ನಿರೀಕ್ಷಿಸುತ್ತಿದ್ದೇನೆ." ಎನುತ್ತಾರೆ.

(ಮುಂದುವರಿಯುವುದು.......)

ವಿಶೇಷ ಕೈಗಡಿಯಾರ ಬಿಡುಗಡೆ

ಶ್ರೀಗುರು ಬಸವಣ್ಣನವರ ಭಾವಚಿತ್ರ ಇರುವ ವಿಶೇಷ ಕೈಗಡಿಯಾರವನ್ನು ಬಸವ ಪಂಚಮಿ ದಿನ ದಿ18-8-2007ರಂದು ಬಿಡುಗಡೆ ಮಾಡಲಾಗುತ್ತಿದೆ. ಬೆಲೆ 450 ರೂ.


1. ಕೇವಲ ಬಸವಣ್ಣನವರು ಇರುವುದು
2. ಧರ್ಮ ಗುರುವಿನ ಭಾವಚಿತ್ರ ದೊಡನೆ ಪೂಜ್ಯ ಗುರುಗಳ ಭಾವಚಿತ್ರ.
3. ಧರ್ಮ ಗುರುವಿನ ಭಾವಚಿತ್ರದೊಡನೆ ಪೂಜ್ಯ ಮಾತಾಜಿಯವರ ಭಾವಚಿತ್ರ ಇರುವುದು.

ಪುರುಷರು ಮತ್ತು ಮಹಿಳೆಯರು ಉಭಯತರವೂ ಲಭ್ಯವಿರುತ್ತವೆ. ಗ್ಯಾರಂಟಿ ಕಾರ್ಡ್ ಇರುತ್ತದೆ. ಪ್ರತಿಯೊಬ್ಬರು ಖರೀದಿಸಿದ್ದಕ್ಕೆ ರಸೀತಿ ಪಡೆದುಕೊಳ್ಳಲು ಕೋರುತ್ತೇವೆ. ಬೆಲೆ: ಒಂದಕ್ಕೆ 450 ರೂ. ಒಂದು ವೇಳೆ ಕೊರಿಯರ್‌ದಲ್ಲಿ ತರಿಸಿಕೊಳ್ಳುವುದಾದರೆ 500 ರೂಗೆ ಬಸವ ಧರ್ಮ ಪೀಠದ ಹೆಸರಿಗೆ ಡಿ.ಡಿ.ತೆಗೆದು ಬೆಂಗಳೂರು ವಿಳಾಸಕ್ಕೆ ಕಳಿಸಬೇಕು.

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ
ಬಸವ ಮಂಟಪ, ಬೆಂಗಳೂರು



ಆನುದೇವಾ...... ಕೃತಿಯ ಮುಟ್ಟುಗೋಲು ಹಾಕಲು ಒತ್ತಾಯಿಸಿ ಪೂಜ್ಯ ಮಾತಾಜಿ, ಶರಣ ಭೀಮಣ್ಣ ಖಂಡ್ರೆ ಮತ್ತು ಶರಣ ಶರಣೆಯರು ಪ್ರತಿಭಟನೆ ನಡೆಸುತ್ತಿರುವುದು.



ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡುತ್ತಿರುವ ಪೂಜ್ಯ ದಯಾನಂದ ಸ್ವಾಮೀಜಿ. ಪೂಜ್ಯ ಮಾತಾಜಿ, ಶರಣ. ಅರವಿಂದ ಜತ್ತಿ ಹಾಗೂ ರಾ.ಬ.ದಳದ ಶರಣೆಯರು. ಉಪಸ್ಥಿತರಿದ್ದರು.




ಪ್ರತಿಭಟನೆಯಲ್ಲಿ ಭಾಗಿಗಳಾದ ಪೂಜ್ಯ ಮಾತಾಜಿ, ಶರಣೆ.ಪ್ರಮಿಳಾ ನೇಸರ್ಗಿ, ಶರಣೆ.ರಾಣಿ ಸತೀಶ್
ಹಾಗೂ ಅ.ಭಾ.ವೀ.ಮ.ಸ. ಅಧ್ಯಕ್ಷರಾದ ಶರಣ ಭೀಮಣ್ಣ ಖಂಡ್ರೆ ಮತ್ತಿತರು ಉಪಸ್ಥಿತರಿದ್ದರು.



ಆನುದೇವಾ....ಕೃತಿಯ ಮುಟ್ಟುಗೋಲು ಹಾಕಲು ಸರ್ಕಾರವನ್ನು ಒತ್ತಾಯಿಸಿದ ಕರ್ನಾಟಕ ರಾಜ್ಯ ಬಿ.ಜೆ.ಪಿ.ಅಧ್ಯಕ್ಷರಾದ ಮಾನ್ಯ
ಶ್ರೀ ಸದಾನಂದ ಗೌಡರವರಿಗೆ ರಾಷ್ಟ್ರೀಯ ಬಸವ ದಳದ ವತಿಯಿಂದ ಅಭಿನಂದನೆ ಹಾಗೂ ಸತ್ಕಾರ.




ಆನುದೇವಾ....ಕೃತಿ ಸರ್ಕಾರ ಮುಟ್ಟುಗೋಲು ಹಾಕಿದ್ದಕ್ಕಾಗಿ ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ
ಮಹಾದೇವ್ ಪ್ರಸಾದರವರಿಗೆ ರಾಷ್ಟ್ರೀಯ ಬಸವ ದಳದ ವತಿಯಿಂದ ಅಭಿನಂದನೆ ಹಾಗೂ ಸತ್ಕಾರ.



ಆನುದೇವಾ....ಕೃತಿ ಸರ್ಕಾರ ಮುಟುಗೋಲು ಹಾಕಿದ್ದಕ್ಕಾಗಿಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ
ಅವರಿಗೆ ರಾಷ್ಟ್ರೀಯ ಬಸವ ದಳದ ವತಿಯಿಂದ ಅಭಿನಂದನೆ ಹಾಗೂ ಸತ್ಕಾರ.

CPMG/KA/BGW-50/2006-2008 WPP (W)-17 R.No.19980/70



ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು



ಪೂಜ್ಯ ಜಗದ್ಗುರು ಮಾತೆ ಮಹಾದೇವಿ ಮಾತಾಜಿಯವರು
ಮತ್ತು ಮಠಾಧೀಶರಿಂದ ಮೌನ ಪ್ರತಿಭಟನೆ